ಸಂಪುಟ: 05 ಸಂಚಿಕೆ: 131 ಪುಟಗಳು: 08 ಗುರುವಾರ 24 ಜುಲೈ 2025
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

**ಮುಂಜಾನೆ ಮಾತು**

ಒಬ್ಬ ವ್ಯಕ್ತಿ ಚಿಂತಾರಹಿತನಾಗಿದ್ದಾನೆ ಅಂದ್ರೆ, ಅವನು ಸುಖಿಯಾಗಿದ್ದಾನೆ ಅಂತಾ ಅರ್ಥವಲ್ಲ ಅನ್ಯರ ಚಿಂತೆಗಳಿಗೆ ಅಹಾರವಾಗುವುದರ ಜೊತೆಗೆ ಒಟ್ಟಾರೆಯಾಗಿ ಸೋಮಾರಿಯಾಗಿದ್ದಾನೆ ಎಂದರ್ಥ

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಗ್ಯಾರಂಟಿಗಳಿಂದ ಹೆಚ್ಚಾದ ತಲಾದಾಯ ಶರಣ್ ಪ್ರಕಾಶ್ ಪಾಟೀಲ್

• ಉದಯವಾಹಿನಿ, ಬೆಂಗಳೂರು

ನಮ್ಮ ಕಾಂಗ್ರೆಸ್ ಸರ್ಕಾರ ನೀಡಿರುವ ಗ್ಯಾರಂಟಿ ಯೋಜನೆಗಳಿಂದ ಕರ್ನಾಟಕದಲ್ಲಿ ತಲಾದಾಯ ಹೆಚ್ಚಾಗಿದೆ. ನಾವೀಗ ದೇಶಕ್ಕೆ ನಂಬರ್ ಒನ್ ಸ್ಥಾನದಲ್ಲಿದ್ದೇವೆ ಎಂದು ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು. ಬೆಂಗಳೂರಿನಲ್ಲಿ ಮಾತಾಡಿದ ಅವರು, 50 ಸಾವಿರ ಕೋಟಿ ರೂ. ಹಣ ನೇರವಾಗಿ ಜನರಿಗೆ ತಲುಪುತ್ತಿದೆ. ಕರ್ನಾಟಕದಲ್ಲಿ ಜನಸ್ನೇಹಿ ಸರ್ಕಾರವಿದೆ.

ಜನೋಪಯೋಗಿ ಆರ್ಥಿಕ ನೀತಿಗಳಿಂದ ಸುಧಾರಣೆಯಾಗುತ್ತಿದೆ. ನಮ್ಮ ಕಾಂಗ್ರೆಸ್ ಸರ್ಕಾರದ ಅಧಿಕಾರದಲ್ಲಿ ಭೂ ಸುಧಾರಣಾ ಕಾಯಿದೆ ಸೇರಿದಂತೆ ಒಳ್ಳೊಳ್ಳೆ ಯೋಜನೆಗಳು ಅನುಷ್ಠಾನಕ್ಕೆ ಬಂದಿವೆ. ಇದು ತಲಾದಾಯ ಹೆಚ್ಚಳಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಾರಣವಾಗಿದೆ ಎಂದರು.

**ಜಿಎಸ್‌ಟಿ ಕೇಂದ್ರದ ನಿರ್ಧಾರ:** ವ್ಯಾಪಾರಿಗಳಿಗೆ ಜಿಎಸ್‌ಟಿ ನೋಟಿಸ್ ನೀಡಿರುವ ನಿರ್ಧಾರ ಕೇಂದ್ರ ಸರ್ಕಾರದ ನಿರ್ಣಯದಂತೆ ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದರು. ಜಿಎಸ್‌ಟಿ ಮಂಡಳಿ ಮುಖ್ಯಸ್ಥರು, ಹಣಕಾಸು ಸಚಿವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಅದರಂತೆ ಇಂಪ್ಲಿಮೆಂಟ್ ಮಾಡಲಾಗುತ್ತದೆ. ಜಿಎಸ್‌ಟಿ ಎಲ್ಲವನ್ನು ಕೇಂದ್ರ ಕಲೆಕ್ಟ್ ಮಾಡುತ್ತದೆ, ಬಳಿಕ ರಾಜ್ಯಗಳಿಗೆ ಹಂಚಿಕೆ ಮಾಡುತ್ತದೆ. ನಾವು ಹೇಗೆ ನೋಟಿಸ್ ಕೊಡಲು ಸಾಧ್ಯ? ಎಲ್ಲಾ ನಿರ್ಧಾರವನ್ನು ಕೇಂದ್ರ ಸರ್ಕಾರವೇ ಮಾಡಿದೆ ಎಂದು ವಿವರಿಸಿದರು.

## ಜಾತಿಗಣತಿಗೆ ದಿನಾಂಕ ಫಿಕ್ಸ್: ಸೆ.22ರಿಂದ ಅ.7ರ ವರೆಗೆ ಸಮೀಕ್ಷೆ ನಡೆಸಲು ನಿರ್ಧಾರ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಜಾತಿಗಣತಿಗೆ ಕೊನೆಗೂ ದಿನಾಂಕ ನಿಗದಿಯಾಗಿದೆ. ಸೆ.22 ರಿಂದ ಅ.7 ರ ವರೆಗೆ ಸಮೀಕ್ಷೆ ನಡೆಸಲು ಸರ್ಕಾರ ನಿರ್ಧರಿಸಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ಈ ಕುರಿತು ಸಭೆ ನಡೆಸಿದ ಸಿಎಂ, ಒಟ್ಟು 15 ದಿನಗಳ ಕಾಲ ಸಮೀಕ್ಷೆ ನಡೆಸಲು ನಿರ್ಧರಿಸಲಾಗಿದೆ. ಅಕ್ಟೋಬರ್ ಕೊನೆಯ ಒಳಗಾಗಿ ಸಮೀಕ್ಷೆ ವರದಿಯನ್ನು ಸಲ್ಲಿಸಬೇಕು. ತರಬೇತಿ ಸೇರಿದಂತೆ ಸಮೀಕ್ಷೆಗೆ ಪೂರ್ವಭಾವಿ ಸಿದ್ಧತೆಗಳನ್ನು ಈಗಲೇ ಆರಂಭಿಸಲು ಸೂಚನೆ ನೀಡಿದ್ದಾರೆ. ಸಮೀಕ್ಷೆ ಅತ್ಯಂತ ಸಮರ್ಪಕವಾಗಿ ನಡೆಯಬೇಕು. ಸಮೀಕ್ಷೆ ಕುರಿತು ಯಾವುದೇ ದೂರುಗಳಿಗೆ ಆಸ್ಪದವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಮೀಕ್ಷೆಯಿಂದ ಯಾರೂ ಹೊರಗುಳಿಯದಂತೆ ಖಾತ್ರಿಪಡಿಸಬೇಕು ಎಂದು ಸಿಎಂ ಸಭೆಯಲ್ಲಿ ಸೂಚಿಸಿದ್ದಾರೆ.

ಕಾಂತರಾಜು ಆಯೋಗ 54 ಪ್ರಶ್ನೆಗಳನ್ನು ಸಿದ್ಧಪಡಿಸಿ ಮ್ಯಾನ್ಯುಹಲ್ ಆಗಿ ಈ ಹಿಂದೆ ಸಮೀಕ್ಷೆ ನಡೆಸಿತ್ತು. ಈ ಬಾರಿಯ ಸಮೀಕ್ಷೆಯಲ್ಲಿ ಇನ್ನಷ್ಟು ಅಂಶಗಳನ್ನು ಸೇರಿಸುವ ಕುರಿತು ಪರಿಶೀಲನೆ ನಡೆಸಲಾಗುವುದು. ಈ ಬಾರಿ ಮೊಬೈಲ್ ಆ್ಯಪ್ ಬಳಸಿಕೊಂಡು ಸಮೀಕ್ಷೆ ನಡೆಸಲಾಗುವುದು. ತೆಲಂಗಾಣದಲ್ಲಿ ಕೈಗೊಳ್ಳಲಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿ ಕುರಿತು ಅಧ್ಯಯನ ನಡೆಸಲು ಸೂಚಿಸಲಾಗಿದೆ. ಸಮೀಕ್ಷೆ ಕಾರ್ಯದ ಮೇಲುಸ್ತುವಾರಿಗೆ ಉನ್ನತಮಟ್ಟದ ಸಮಿತಿ ರಚಿಸಲು ತಿರ್ಮಾನಿಸಲಾಗಿದೆ ಎಂದು ತಿಳಿಸಿದ್ದಾರೆ.

## 15 ಆರೋಪಿಗಳಲ್ಲಿ ಯಾರೊಬ್ಬರೂ ನನಗೆ ಪರಿಚಯವಿಲ್ಲ: ಭೈರತಿ ಬಸವರಾಜ

• ಉದಯವಾಹಿನಿ, ಬೆಂಗಳೂರು

ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ಕೆಆರ್ ಪುರಂ ಬಿಜೆಪಿ ಶಾಸಕ ಭೈರತಿ ಬಸವರಾಜ ಇಂದು ಭಾರತೀನಗರ ಪೊಲೀಸರ ಎದುರು ಎರಡನೇ ಬಾರಿ ವಿಚಾರಣೆಗೆ ಹಾಜರಾದರು. ಹೊರಬಂದ ಬಳಿಕ ಮಾಧ್ಯಮಗಳೊಂದಿಗೆ ಮಾತಾಡಿದ ಬಸವರಾಜ, ತನಿಖಾಧಿಕಾರಿ ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದ್ದೇನೆ, ಕೊಲೆಗೂ ತನಗೂ ಯಾವುದೇ ರೀತಿಯ ಸಂಬಂಧವಿಲ್ಲ ಅಂತ ಮೊದಲ ದಿನದಿಂದ ಹೇಳಿಕೊಂಡು ಬಂದಿದ್ದೇನೆ ಎಂದು ಹೇಳಿದರು ತಾನೊಬ್ಬ ಜನ ಪ್ರತಿನಿಧಿಯಾಗಿರುವುದರಿಂದ ಜನರ ನಡುವೆ ಇರುತ್ತೇನೆ, ಜನ ಬಂದು ಫೋಟೋ, ಸೆಲ್ಫೀಗಳನ್ನು ತೆಗೆದುಕೊಳ್ಳುತ್ತಾರೆ, ಅವರು ಯಾರು, ಹಿನ್ನೆಲೆ ಏನು ಅನ್ನೋದು ಹೇಗೆ ಗೊತ್ತಾಗುತ್ತದೆ ಎಂದು ಬಸವರಾಜ ಪ್ರಶ್ನಿಸಿದರು.

## ಧರ್ಮಸ್ಥಳದ ರೀತಿಯಲ್ಲಿ ಕೂಡಲಸಂಗಮದಲ್ಲಿಯೂ ಷಡ್ಯಂತ್ರ: ಯತ್ನಾಳ

• ಉದಯವಾಹಿನಿ, ಕೊಪ್ಪಳ

ಭಾರತೀಯ ಮೂಲ ಧರ್ಮಗಳ ಪವಿತ್ರ ಕ್ಷೇತ್ರಗಳನ್ನು ಅಪವಿತ್ರಗೊಳಿಸಲು ಧರ್ಮಸ್ಥಳದಲ್ಲಿ ಮಾಡುತ್ತಿರುವಂತೆಯೇ ಕೂಡಲಸಂಗಮದಲ್ಲಿಯೂ ಷಡ್ಯಂತ್ರ ಮಾಡಲಾಗುತ್ತಿದೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

ಇಲ್ಲಿನ ಗವಿಮಠಕ್ಕೆ ಭೇಟಿ ನೀಡಿದ ಬಳಿಕ ಮಾಧ್ಯಮದವರ ಜೊತೆ ಮಾತನಾಡಿ 'ಕಲವು ಕಮ್ಯೂನಿಸ್ಟ್ ಬುದ್ಧಿ ಇರುವವರು, ಖಾವಿ ವೇಷ ಧರಿಸಿರುವ ಕೆಲ ಕಳ್ಳ ಸ್ವಾಮೀಜಿಗಳು ಇಸ್ಲಾಂ ಹಾಗೂ ಲಿಂಗಾಯತ ಎರಡೂ ಒಂದೇ ಎನ್ನುವ ರೀತಿಯಲ್ಲಿದ್ದಾರೆ. ದೇಶದಲ್ಲಿ ಮೊದಲು ಅಯ್ಯಪ್ಪಸ್ವಾಮಿ ದೇವಸ್ಥಾನದ ಬಳಿಕ ಧರ್ಮಸ್ಥಳ ಮತ್ತು ಕೂಡಲಸಂಗಮವನ್ನು ಅಪವಿತ್ರ ಮಾಡಲು ಈಗ ಮುಂದಾಗಿದ್ದಾರೆ' ಎಂದು ದೂರಿದರು.

ಕೂಡಲಸಂಗಮದಲ್ಲಿ ಕೆಲವರು ವೈಯಕ್ತಿಕ ಹಿತಾಸಕ್ತಿಗೆ ಬೀಗ ಹಾಕಿದ್ದಾರೆ. ಈಗ ಬೀಗ ಹಾಕಿದವರ ಮನೆಗೂ ಮುಂದಿನ ದಿನಗಳಲ್ಲಿ ಬೀಗ ಬೀಳಲಿದೆ. ಜನ ಭಕ್ತಿಯಿಂದ ಕೊಟ್ಟ ಹಣವನ್ನು ದುರ್ಬಳಕೆ ಮಾಡಿಕೊಂಡರೆ ಯಾರೂ ಉದ್ಧಾರವಾಗುವುದಿಲ್ಲ. ವೀರಶೈವ ಲಿಂಗಾಯತರು ಒಗ್ಗೂಡಬೇಕು ಎಂದು ದಾವಣಗೆರೆಯಲ್ಲಿ ನಡೆದ ಸಮಾವೇಶದಲ್ಲಿ ಹೇಳಲಾಗಿದೆ. ಆದರೆ ಅಲ್ಲಿ ಹಾಕಿದ್ದ ನಾಮಫಲಕದ ಮೇಲೆ ವೀರಶೈವ ಲಿಂಗಾಯತರು ಎಂದು ಎಲ್ಲಿಯೂ ಬರೆದಿರಲಿಲ್ಲ. ಯಡಿಯೂರಪ್ಪ, ಶಾಮನೂರು ಶಿವಶಂಕ್ರಪ್ಪ ಮತ್ತು ಈಶ್ವರ ಖಂಡ್ರೆ ತ್ರಿಮೂರ್ತಿಗಳು ಕುಳಿತೇ ಎಲ್ಲವನ್ನೂ ಆದೇಶ ಮಾಡುತ್ತಾರೆ' ಎಂದು ಲೇವಡಿ ಮಾಡಿದರು.

**ಶೀಘ್ರದಲ್ಲಿ ಹೊಸ ಪಕ್ಷ:** ವಿಜಯೇಂದ್ರನನ್ನು ಮತ್ತೆ ಅಧ್ಯಕ್ಷ ಮಾಡಿ ಬಿಜೆಪಿಯವರು ತಲೆ ಮೇಲೆ ಕೂಡಿಸಿಕೊಂಡರೆ ಅಂದೆ ಹೊಸ ಪಕ್ಷ ಘೋಷಣೆ ನಿಶ್ಚಿತ. ರಾಜ್ಯದಲ್ಲಿ ಯಾರೂ ವಿಜಯೇಂದ್ರ ನಾಯಕತ್ವ ಒಪ್ಪಿಸಿಕೊಂಡಿಲ್ಲ. ಬೇರೆ ರಾಜ್ಯಗಳಲ್ಲಿ ಹೊಸ ರಾಜ್ಯಾಧ್ಯಕ್ಷರ ನೇಮಕವಾದರೂ ಕರ್ನಾಟಕದಲ್ಲಿ ಆಗುತ್ತಿಲ್ಲ. ಆತನ ನೇತೃತ್ವದಲ್ಲಿ ಚುನಾವಣೆ ಎದುರಿಸಿದರೆ 30 ಕ್ಷೇತ್ರಗಳಲ್ಲಿಯೂ ಗೆಲ್ಲುವುದಿಲ್ಲ ಎಂದರು.

# ಕುಬೇರರ ಕೋಟೆ...! ಲೋಕಾ ಭರ್ಜರಿ ಬೇಟೆ




• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಭ್ರಷ್ಟಾಚಾರ ವಿರೋಧಿ ಕ್ರಮಗಳ ಭಾಗವಾಗಿ ಲೋಕಾಯುಕ್ತ ತಂಡವು ಬುಧವಾರ ಬೆಳಿಗ್ಗೆ ಪ್ರಮುಖ ಭ್ರಷ್ಟಾಧಿಕಾರಿಗಳ ಮನೆಗಳ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿದೆ. ಒಟ್ಟು ಎಂಟು ಅಧಿಕಾರಿಗಳ ಮನೆಗಳ ಮೇಲೆ ದಾಳಿ ನಡೆದಿದ್ದು, ಅವರ ಆಸ್ತಿ ದಾಖಲೆಗಳು, ಹಣಕಾಸು ವಿವರಗಳು ಮತ್ತು ಅಕ್ರಮ ಸಂಪತ್ತನ್ನು ಪರಿಶೀಲಿಸಲಾಗುತ್ತಿದೆ. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಲೋಕಾಯುಕ್ತ ಅಧಿಕಾರಿಗಳ ತಂಡಗಳಿಂದ ಮೈಸೂರು, ಬೀದರ್, ತುಮಕೂರು, ಕಲಬುರ್ಗಿ ಮತ್ತು ರಾಮನಗರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಈ ಕಾರ್ಯಾಚರಣೆ ನಡೆದಿದೆ. ಬೆಂಗಳೂರಿನಲ್ಲಿ ಮೂವರು ಪ್ರಮುಖ ಸರ್ಕಾರಿ ಅಧಿಕಾರಿಗಳ ಮನೆಗಳ ಮೇಲೆ ಲೋಕಾಯುಕ್ತ ದಾಳಿ ನಡೆದಿದೆ. ಐಎಎಸ್ ಅಧಿಕಾರಿ ವಾಸಂತಿ ಅಮರ್, ಟೌನ್ ಪ್ಲ್ಯಾನಿಂಗ್ ಸಹಾಯಕ ನಿರ್ದೇಶಕ ಬಾಗ್ಲಿ ಮಾರುತಿ, ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಎರ್ರಪ್ಪ ರೆಡ್ಡಿ ನಿವಾಸದ ಮೇಲೆ ದಾಳಿಯಾಗಿದೆ. ಲೋಕಾಯುಕ್ತ ಎಸ್‌ಪಿ ವಂಶಿಕೃಷ್ಣ ನೇತೃತ್ವದ ವಿಶೇಷ ತಂಡದಿಂದ ನಡೆಸಲಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಕಡೆಗಳಲ್ಲಿ ಭ್ರಷ್ಟ ಅಧಿಕಾರಿಗಳ ಮನೆಗಳ ಮೇಲೆ ದಾಳಿ ನಡೆದಿದೆ. ಮೊದಲಿನಿಂದಲೂ ಈ ಅಧಿಕಾರಿಗಳ ವಿರುದ್ಧ ಅನೇಕ ಭ್ರಷ್ಟಾಚಾರದ ಆರೋಪಗಳು ಕೇಳಿ ಬಂದಿದ್ದವು ಎಂದು ಮೂಲಗಳು ತಿಳಿಸಿವೆ. ವಾಸಂತಿ ಅಮರ್ ಅವರು ಹಿಂದಿನ ವಿಶೇಷ ಜಿಲ್ಲಾಧಿಕಾರಿ-3, ಬೆಂಗಳೂರು ಉತ್ತರ ಉಪ ವಿಭಾಗದ ಅಧಿಕಾರಿಯಾಗಿ, ದಾಸನಪುರ ಹೋಬಳಿಯ ಹುಚ್ಚನಪಾಳ್ಯ ಗ್ರಾಮದಲ್ಲಿ ಸರ್ವೆ ನಂ.8ರಲ್ಲಿ ಇರುವ 10 ಎಕರೆ 20 ಗುಂಟೆ ಸರ್ಕಾರಿ ಜಮೀನನ್ನು ನಿಯಮಬಾಹಿರವಾಗಿ ಖಾಸಗಿ ಯವರಿಗೆ ವರ್ಗಾಯಿಸಿದ ಆರೋಪ ಎದುರಿಸುತ್ತಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಇವರ ಮೇಲೆ FIR ದಾಖಲಾಗಿದೆ.

**ಎರ್ರಪ್ಪ ರೆಡ್ಡಿ ವಿರುದ್ಧ ಲಂಚ ಹಾಗೂ ಅಕ್ರಮ ಆಸ್ತಿ ಆರೋಪ:** ಎಂಜಿನಿಯರ್ ಎರ್ರಪ್ಪ ರೆಡ್ಡಿ ಇತ್ತೀಚೆಗಷ್ಟೆ 10 ಲಕ್ಷ ಲಂಚ ಪಡೆಯುವಾಗ ಸಿಕ್ಕಿಬಿದ್ದರು. ಅವರ ಎಚ್‌ಆರ್‌ಬಿಆರ್ ಲೇಔಟ್ ನಿವಾಸದಲ್ಲಿ ಬುಧವಾರ ಬೆಳಿಗ್ಗೆ 6.15ರಿಂದಲೇ ದಾಳಿ ಆರಂಭವಾಗಿದೆ. ಲೋಕಾಯುಕ್ತ ಎಸ್‌ಪಿ ಅವರ


1 ಬೆಳ್ಳಂಬೆಳಗ್ಗೆ ಭ್ರಷ್ಟ ಅಧಿಕಾರಿಗಳ ಮನೆ ಮೇಲೆ ದಾಳಿ

2 ಬೆಂಗಳೂರಿನ ಮೂರು ಅಧಿಕಾರಿಗಳ ಮನೆ ಮೇಲೆ ರೇಡ್

3 ವಿಜಯನಗರ, ಬೀದರ್‌ನಲ್ಲೂ ದಾಳಿ ನಡೆಸಿ, ಪರಿಶೀಲನೆ





• ಲೋಕಾಯುಕ್ತ ಅಧಿಕಾರಿಗಳೇ ಬೆರಗಾದ್ರು
• ತುಮಕೂರಿನಲ್ಲಿ ದಾಳಿ
• ರಾಶಿ ರಾಶಿ ಚಿನ್ನಾಭರಣದ ಗೊಂಚಲು..
• ಕರ್ನಾಟಕದ ಭಷ್ಟರ ವಿರುದ್ಧ ಲೋಕಾ ದಾಳಿ
• ಅಧಿಕಾರಿಗಳ ಮನೆಯಲ್ಲಿ ಲೆಕ್ಕವಿಲ್ಲದ ಅಕ್ರಮ ಸಂಪತ್ತು ಪತ್ತೆ!
• ಆದಾಯಕ್ಕೂ ಮೀರಿ ಗಳಿಕೆ ಆರೋಪ
• ಹಂಪಿ ಗ್ರಾ.ಪಂ ಅಧ್ಯಕ್ಷೆ ಮನೆಗೂ ರೈಡ್



## ಹಂಪಿ ಗ್ರಾ.ಪಂ. ಅಧ್ಯಕ್ಷೆ ಮನೆ ಮೇಲೆ ಲೋಕಾ ದಾಳಿ

ವಿಜಯನಗರ ಹಂಪಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಜನಿ ಷಣ್ಮುಖಗೌಡ ಅವರ ಮನೆ ಮೇಲೆ ಲೋಕಾಯುಕ್ತ ದಾಳಿ ನಡೆದಿದೆ. ಹೊಸಪೇಟೆ ತಾಲ್ಲೂಕಿನ ಕಡ್ಡಿರಾಂಪುರದ ಬಳಿ ಇರುವ ಮನೆಯ ಮೇಲೆ ಲೋಕಾಯುಕ್ತರು ದಾಳಿ ನಡೆಸಿದ್ದಾರೆ.ರಜನಿ ಷಣ್ಮುಖಗೌಡ ಅವರ ಅಳಿಯ ಮಾರುತಿ ಬೆಂಗಳೂರು ಬಿಬಿಎಂಪಿ ಯ ಸಹಾಯಕ ನಿರ್ದೇಶಕರಾಗಿ ಕೆಲಸ ನಿರ್ವಹಿಸುತ್ತಿದ್ದು ಇವರ ಮೇಲೆ ಭ್ರಷ್ಟಾಚಾರ ಆರೋಪ ಕೇಳಿ ಬಂದಿದೆ. ಹೀಗಾಗಿ ಅವರ ಅತ್ತೆಯಾಗಿರುವ ರಜನಿ ಷಣ್ಮುಖಗೌಡ ಅವರ ಮನೆಯ ಮೇಲೆ ದಾಳಿ ನಡೆದಿದೆ.



## ಕಲಬುರ್ಗಿ ಅಧಿಕಾರಿಗಳ ಮೇಲೆ ದಾಳಿ

ಬೀದರ್‌ನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಸುನೀಲ್ ಕುಮಾರ್ ಚಂದ್ರಪ್ರಭಾ ನಿವಾಸದ ಮೇಲೆ ದಾಳಿ ಮಾಡಲಾಗಿದೆ. ಇವರು ಕಲಬುರ್ಗಿ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜನಿಯರ್ ವಿಭಾಗದಲ್ಲಿ ಕಾರ್ಯ ನಿರ್ವಾಹಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಬೀದರ್‌ನ ಜೈಲ್ ಕಾಲೋನಿಯ ಎಸ್‌ಬಿಪಿ ನಗರದ ನಿವಾಸದ ಮೇಲೆ ದಾಳಿ ಮಾಡಿದ ಲೋಕಾಯುಕ್ತ ತಂಡ ದಾಖಲೆಗಳ ಪರಿಶೀಲನೆ ಕೈಗೊಂಡಿದೆ. ಹುಮ್ನಾಬಾದ್ ತಾಲ್ಲೂಕಿನ ಹಳ್ಳಿಖೇಡ ಬಿ. ಗ್ರಾಮದ ನಿವಾಸಿಯಾಗಿದ್ದು, ಸದ್ಯ ಕಲಬುರ್ಗಿಯಲ್ಲಿ ಕರ್ತವ್ಯ ಮಾಡುತ್ತಿದ್ದಾರೆ. ಕಲಬುರ್ಗಿಯ ಆರೋಗ್ಯ ಇಲಾಖೆಯ ಕಚೇರಿ,ನಿವಾಸದ ಮೇಲೂ ದಾಳಿ ಮಾಡಲಾಗಿದೆ. ತುಮಕೂರಿನಲ್ಲಿ ಕೆಐಡಿಬಿ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಎಇಇ ರಾಜೇಶ್ ಕಚೇರಿ ಕಡತಗಳ ಪರಿಶೀಲನೆ ನಡೆಸಿದ್ದಾರೆ. ಕಳೆದ ಒಂದು ತಿಂಗಳ ಹಿಂದಷ್ಟೇ ತುಮಕೂರಿನ ಕೆಐಎಡಿಬಿ ಕಚೇರಿಗೆ ರಾಜೇಶ್ ಬಂದಿದ್ದರು.

## ಕಕ್ಕಾಬಿಕ್ಕಿಯಾದ ಅಧಿಕಾರಿ

ಕೊಪ್ಪಳ ನಗರದಲ್ಲೂ ದಾಳಿ ಮಾಡಿರುವ ಲೋಕಾಯುಕ್ತ ಅಧಿಕಾರಿಗಳು ಮನೆಯಲ್ಲಿ ಮಲಗಿದ್ದ ಜಿಲ್ಲಾ ಕೈಗಾರಿಕೆ ಮತ್ತು ವಾಣಿಜ್ಯ ವಿಭಾಗದ ಉಪ ನಿರ್ದೇಶಕ ಶೇಕು ಚವ್ಹಾಣ್‌ಗೆ ಶಾಕ್ ನೀಡಿದ್ದಾರೆ. ಲೋಕಾ ಅಧಿಕಾರಿಗಳನ್ನು ಕಂಡು ಕಕ್ಕಾಬಿಕ್ಕಿಯಾಗಿದ್ದಾರೆ. ಬಳ್ಳಾರಿಯಲ್ಲಿ ಮೂರು ಕಡೆ ಲೋಕಾಯುಕ್ತ ಅಧಿಕಾರಿಗಳ ದಾಳಿ ಮಾಡಲಾಗಿದೆ. ಬೆಂಗಳೂರು ಟೌನ್ ಮತ್ತು ರೂರಲ್ ಪ್ಲ್ಯಾನಿಂಗ್ ಆಫೀಸರ್ ಮಾರುತಿ ಬಗಲಿಗೆ ಸೇರಿದ 3 ಸ್ಥಳಗಳ ಮೇಲೆ ದಾಳಿ ಮಾಡಿರುವ ಬೆಂಗಳೂರು ಲೋಕಾಯುಕ್ತ ತಂಡ ಪರಿಶೀಲನೆ ನಡೆಸಿದೆ. ಬೆಂಗಳೂರು ನಿವಾಸಿಯಾಗಿರುವ ಅಧಿಕಾರಿ ಮಾರುತಿ ಬಗಲಿ ವಿರುದ್ಧ ರಾಜ್ಯದ ಹಲವೆಡೆ ಆಸ್ತಿ ಮಾಡಿರುವ ಆರೋಪ ಕೇಳಿಬಂದಿದೆ.

ನಿವಾಸಕ್ಕೆ ಭೇಟಿ ನೀಡಿ ಶೋಧ ಕಾರ್ಯಾಚರಣೆ ನಡೆಸಿದ್ದಾರೆ. 6ಕ್ಕೂ ಹೆಚ್ಚು ಅಧಿಕಾರಿಗಳ ತಂಡ ಆಸ್ತಿ ದಾಖಲೆಗಳು, ಬ್ಯಾಂಕ್ ಡೀಟೇಲ್ಸ್, ಚಿನ್ನಾಭರಣಗಳು ಮತ್ತು ಇತರ ವಿವರಗಳನ್ನು ಪರಿಶೀಲಿಸುತ್ತಿದೆ. ಬಾಗ್ಲಿ ಮಾರುತಿ ನಿವಾಸದಿಂದ ಚಿನ್ನಾಭರಣಗಳು ಮತ್ತು ನಗದು ಪತ್ತೆ, ಟೌನ್ ಪ್ಲಾನಿಂಗ್ ಸಹಾಯಕ ನಿರ್ದೇಶಕ ಬಾಗ್ಲಿ ಮಾರುತಿ ಅವರ ನಿವಾಸದಲ್ಲಿಯೂ ತೀವ್ರ ಶೋಧ ನಡೆಯುತ್ತಿದೆ.

ಲೋಕಾಯುಕ್ತ ಅಧಿಕಾರಿಗಳು ಅಲ್ಲಿಂದ ಚಿನ್ನಾಭರಣ, ನಗದು, ಬೆಳ್ಳಿಯ ವಸ್ತುಗಳು, ದುಬಾರಿ ಗಡಿಯಾರಗಳು ಸೇರಿದಂತೆ ಹಲವು ಬೆಲೆ ಬಾಳುವ ವಸ್ತುಗಳನ್ನು ಪತ್ತೆಹಚ್ಚಿದ್ದಾರೆ. ಸಿಕ್ಕಿರುವ ವಸ್ತುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಅಧಿಕಾರಿಗಳು ಕೇಳುತ್ತಿದ್ದು, ತನಿಖೆ ಇನ್ನೂ ಮುಂದುವರಿದಿದೆ.


## ಸರ್ಕಾರ ಸಣ್ಣಪುಟ್ಟ ವ್ಯಾಪಾರಿಗಳಿಂದ ಸುಲಿಗೆ ಮಾಡುತ್ತಿದೆ

• ಉದಯವಾಹಿನಿ, ತುಮಕೂರು,

**ಬಡ ವ್ಯಾಪಾರಿಗಳ ಶೋಷಣೆ**

ರಾಜ್ಯದ ಖಜಾನೆ ಖಾಲಿಯಾಗಿದೆ, ಹಣಕ್ಕಾಗಿ ರಾಜ್ಯ ಸರ್ಕಾರ ಎಲ್ಲೆಲ್ಲಿ, ಯಾವ ರೀತಿಯಲ್ಲಿ ಜನರನ್ನು ಶೋಷಣೆ ಮಾಡುತ್ತಿದೆ ಎಂಬುದು ಎಲ್ಲರಿಗೂ ಗೊತ್ತು. ಇತ್ತೀಚೆಗೆ ಸಣ್ಣಪುಟ್ಟ ವ್ಯಾಪಾರಿಗಳಿಂದ ತೆರಿಗೆ ಹಣ ವಸೂಲಿ ಮಾಡುತ್ತಾ ಬಡ ವ್ಯಾಪಾರಿಗಳನ್ನು ಶೋಷಣೆ ಮಾಡುತ್ತಿದೆ ಎಂದು ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಟೀಕಿಸಿದರು.

ಸಿದ್ದಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರ 63ನೇ ಜನ್ಮದಿನದ ಅಂಗವಾಗಿ ಸಚಿವ ಸೋಮಣ್ಣ, ಪತ್ನಿ ಶೈಲಜಾ ಸೋಮಣ್ಣ ಅವರು ಮಠಕ್ಕೆ ಆಗಮಿಸಿ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ ಗದ್ದುಗೆಗೆ ಪೂಜೆ ಸಲ್ಲಿಸಿ ನಂತರ ಶ್ರೀ ಸಿದ್ಧಲಿಂಗ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಏನಾಗಿದೆ ಎಂಬುದು ಗೊತ್ತು. ಅವರು, ಮುಖ್ಯಮಂತ್ರಿ, ಕೇಂದ್ರ ಜಿಎಸ್‌ಟಿ ಬಾಕಿ ತೆರಿಗೆ ಸಿದ್ದರಾಮಯ್ಯ ಅವರ ಹಣ ನೀಡುತ್ತಿಲ್ಲ ಎಂದು ಪದೇ ಪದೇ ಹೇಳಿಕೆ ನೀಡುತ್ತಿರುವುದು ಸರಿಯಲ್ಲ, ಯಾವುದನ್ನು ಎಲ್ಲಿ ಮಾತನಾಡಬೇಕೋ ಅಲ್ಲಿ ಮಾತನಾಡಬೇಕು ಎಂಬುದನ್ನು ಅವರು ತಿಳಿಯಬೇಕು. ಜಿಎಸ್‌ಟಿ ಸಭೆ, ಪ್ರಧಾನ ಮಂತ್ರಿಗಳ ಸಭೆಯಲ್ಲಿ ಭಾಗವಹಿಸುವ ಸೌಜನ್ಯ ಸಿದ್ದರಾಮಯ್ಯನವರಿಗಿಲ್ಲ. ಆದರೆ ಪ್ರಧಾನಿ ಬಗ್ಗೆ ಲಘುವಾಗಿ ಮಾತನಾಡುವುದು ಏಳು ಕೋಟಿ ಜನರ ಪ್ರತಿನಿಧಿಯಾಗಿ, ಮುಖ್ಯಮಂತ್ರಿಯಾಗಿರುವ ಅವರಿಗೆ ಶೋಭೆ ತರುವುದಿಲ್ಲ. ಸಿದ್ದರಾಮಯ್ಯ ತಮ್ಮ ವರ್ತನೆ ಬದಲು ಮಾಡಿಕೊಳ್ಳಲಿ ಎಂದರು. ಸಂಸತ್ ಅಧಿವೇಶನದಲ್ಲಿ ಪ್ರಶೋತ್ತರ ಅವಧಿ ನಂತರ ಚರ್ಚೆ ಮಾಡಲು ಅವಕಾಶವಿದೆ. ನಂತರ ಆಪರೇಷನ್ ಸಿಂಧೂರ ವಿಚಾರ ಚರ್ಚೆ ಮಾಡೋಣ ಎಂದು ಸಭಾಪತಿಗಳು ಹೇಳಿದರೂ ಕಾಂಗ್ರೆಸ್‌ನವರು ಅನಾವಶ್ಯಕವಾಗಿ ಗೊಂದಲ ಮಾಡಿರುವುದು ಸರಿಯಲ್ಲ ಎಂದು ಟೀಕಿಸಿದರು. ಸಿದ್ದಗಂಗಾ ಮಠ ಸೇರಿದಂತೆ ಮಠಮಾನ್ಯಗಳು ಸಮಾಜ ಸೇವಾಕಾರ್ಯ ಮಾಡುತ್ತಿವೆ. ಎಲ್ಲಾ ಜಾತಿ, ವರ್ಗದ ಬಡ, ಕಡು ಬಡವರ ಮಕ್ಕಳಿಗೆ ವಿದ್ಯಾದಾನ, ಅನ್ನ ದಾಸೋಹ ಮಾಡಿ ಆ ಮಕ್ಕಳೂ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂಬ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ ಸಂಕಲ್ಪವನ್ನು ಸಿದ್ದಲಿಂಗ ಸ್ವಾಮೀಜಿಗಳು ಮುಂದುವರೆಸಿದ್ದಾರೆ ಎಂದು ಹೇಳಿದರು.



## ಜಿಎಸ್‌ಟಿ ನೋಟಿಸ್: ಕೇಂದ್ರವೇ ಹೊಣೆ

• ಉದಯವಾಹಿನಿ, ಮೈಸೂರು

ಸಣ್ಣ ವರ್ತಕರಿಗೆ ಜಿಎಸ್‌ಟಿ ನೋಟಿಸ್ ವಿಚಾರದಲ್ಲಿ ಬಿಜೆಪಿ ನಾಯಕರು ಜನರ ದಿಕ್ಕು ತಪ್ಪಿಸುವ ಕೆಲಸ ಮಾಡಬಾರದು' ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಆಗ್ರಹಿಸಿದರು.

'ಕಳೆದೊಂದು ವಾರದಿಂದ ಕೆಲವು ವರ್ತಕರಿಗೆ ನಿರಂತರ ನೋಟಿಸ್ ನೀಡಲಾಗುತ್ತಿದೆ. ರಾಜ್ಯ ಸರ್ಕಾರವೇ ನೋಟಿಸ್ ನೀಡುತ್ತಿದೆ ಎಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ. ಅವರಿಗೆ ಮಾನ ಮರ್ಯಾದೆ ಇದ್ದರೆ ಸರಿಯಾಗಿ ಮಾಹಿತಿ ನೀಡಿ ಎಂದರು.

ಜಿಎಸ್‌ಟಿ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ವಾಣಿಜ್ಯ ತೆರಿಗೆ ಇಲಾಖೆಯು ಕೇಂದ್ರದ ನಿಯಮಗಳನ್ನು ಆಧರಿಸಿ ನೋಟಿಸ್ ನೀಡುತ್ತಿದೆ. ಜಿಎಸ್‌ಟಿ ಸೆಕ್ಷನ್ 22 ಪ್ರಕಾರ ಪ್ರತಿ ವರ್ತಕ ಜಿಎಸ್‌ಟಿಗೆ ನೋಂದಣಿ ಮಾಡಬೇಕು. ವಾರ್ಷಿಕ 40 ಲಕ್ಷ ಆದಾಯ ಮೀರಿದರೆ ತೆರಿಗೆ ವ್ಯಾಪ್ತಿಗೆ ಬರುತ್ತಾರೆ ಎಂದಿದೆ. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ ಎಂದು ತಿಳಿಸಿದರು. ಜಿಎಸ್‌ಟಿಯಲ್ಲ, ಗಬ್ಬರ್‌ಸಿಂಗ್ ಟ್ಯಾಕ್ಸ್ ಎಂದು ರಾಹುಲ್ ಗಾಂಧಿ ಟೀಕಿಸಿದ್ದು ನಿಜವಾಗಿದೆ.

ಒಂದೇ ಪದಾರ್ಥಕ್ಕೆ ಆರೇಳು ಬಾರಿ ತೆರಿಗೆ ಬೀಳುತ್ತಿದೆ. ಭತ್ತ ಬೆಳೆಯುವ ಪ್ರಕ್ರಿಯೆಯಿಂದ ಹಿಡಿದು ಇಡ್ಲಿ ತಯಾರಿಕೆಯವರೆಗೆ ಪ್ರತಿ ಹಂತದಲ್ಲೂ ತೆರಿಗೆ ಹಾಕಲಾಗುತ್ತಿದೆ. ಇದರಿಂದ ಜನರಿಗೆ ತೆರಿಗೆಯು ಹೊರಲಾರದ ಹೊರೆಯಾಗುತ್ತಿದೆ ಎಂದರು. ಜಿಎಸ್‌ಟಿ ನಮ್ಮನ್ನು ಕೊಲ್ಲುತ್ತಿದೆ. ನಿರ್ಮಲಾ ಸೀತಾರಾಮನ್, ಮೋದಿ ಅವರಿಗೆ ಮಾನ ಮರ್ಯಾದೆ ಇದ್ದರೆ ಸ್ಪಷ್ಟೀಕರಣ ಕೊಡಿ. ಸಣ್ಣ ವರ್ತಕರಿಗೆ ತೊಂದರೆ ಕೊಡಬೇಡಿ. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರ ಏನೂ ಇಲ್ಲ, ಅಧಿಕಾರಿಗಳು, ವರ್ತಕರು ಜನರ ದಾರಿ ತಪ್ಪಿಸಬಾರದು' ಎಂದು ಒತ್ತಾಯಿಸಿದರು. ತೆರಿಗೆ ನೋಟಿಸ್ ವಿರೋಧಿಸಿ ವರ್ತಕರು ಹಮ್ಮಿಕೊಂಡಿರುವ ಹೋರಾಟಕ್ಕೆ ಕಾಂಗ್ರೆಸ್ ಬೆಂಬಲವಿದೆ. ಏನಿದ್ದರೂ ಕೇಂದ್ರದ ವಿರುದ್ಧ ಹೋರಾಟ ನಡೆಯಲಿ. ಇಡೀ ದೇಶದಲ್ಲಿ ಈ ಸಮಸ್ಯೆ ಇದೆ. ಶೇ 90ರಷ್ಟು ವರ್ತಕರು ಜಿಎಸ್‌ಟಿ ನೋಂದಣಿ ಮಾಡಿಕೊಂಡಿದ್ದು, ಶೇ 10ರಷ್ಟು ನೋಂದಣಿ ಆಗಿಲ್ಲ. ಅವರಿಗೆ ಮಾತ್ರ ನೋಟಿಸ್ ಬಂದಿದೆ' ಎಂದು ಹೇಳಿದರು.



# ಖಜಾನೆ ಖಾಲಿ ಆಗಿರುವುದರಿಂದಲೇ ವ್ಯಾಪಾರಿಗಳಿಗೆ ಜಿಎಸ್‌ಟಿ ನೋಟೀಸ್

• ವ್ಯಾಪಾರಿಗಳು ಆತಂಕದಲ್ಲಿದ್ದಾರೆ. ಸಚಿವರು ಕೇಂದ್ರ ಸರ್ಕಾರ ದೂರುವ ಕುತಂತ್ರ ಮಾಡುತ್ತಿದ್ದಾರೆ: ಬಿ.ವೈ.ವಿಜಯೇಂದ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದ ಖಜಾನೆ ಖಾಲಿ ಆಗಿರುವುದರಿಂದಲೇ ಸಣ್ಣ ಮತ್ತು ಅತಿ ಸಣ್ಣ ವ್ಯಾಪಾರಿಗಳಿಗೆ ಜಿಎಸ್‌ಟಿ ನೋಟೀಸ್ ಕೊಟ್ಟು ಅಲ್ಲಿಯೂ ಹಣ ವಸೂಲಿಗೆ ಮುಂದಾಗಿದ್ದಾರೆ. ತಕ್ಷಣವೇ ಇದನ್ನು ಈ ಕೂಡಲೇ ಹಿಂಪಡೆಯುವಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.


ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯ ಸರ್ಕಾರ ವಾಣಿಜ್ಯ ತೆರಿಗೆ ಇಲಾಖೆಯಿಂದ ಸಣ್ಣ ವ್ಯಾಪಾರಿಗಳಿಗೆ ನೋಟೀಸ್ ಕೊಟ್ಟಿದೆ. ಇದು ಬಹಳ ಚರ್ಚೆಗೆ ಅವಕಾಶ ನೀಡಿದೆ, ವ್ಯಾಪಾರಿಗಳು ಆತಂಕದಲ್ಲಿದ್ದಾರೆ. ಸಚಿವರು ಕೇಂದ್ರ ಸರ್ಕಾರ ದೂರುವ ಕುತಂತ್ರ ಮಾಡುತ್ತಿದ್ದಾರೆ ಎಂದು ದೂರಿದರು. ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕ ಮೊದಲ ಸ್ಥಾನಕ್ಕೆ ಬರಬೇಕು ಎಂದು ಸಿಎಂ ಬಹಿರಂಗ ಹೇಳಿಕೆ ಕೊಟ್ಟಿದ್ದರು. ಜೊತೆಗೆ ಅಧಿಕಾರಿಗಳಿಗೂ ಟಾರ್ಗೆಟ್ ನೀಡಿದ್ದರು.

ಇದರಿಂದ ಈಗ ಸತ್ಯ ಬಯಲಾಗಿದೆ, ನೋಟೀಸ್ ಕೊಟ್ಟು ಅಧಿಕಾರಿಗಳ ಮೂಲಕ ಸರ್ಕಾರ ವಸೂಲಿಗೆ ಇಳಿದಿದೆ. ನೋಟೀಸ್ ಕೊಟ್ಟಿರುವುದು ಅಕ್ರಮ, ನೋಟೀಸ್ ಕೊಡುವುದುನ್ನು ತಕ್ಷಣ ನಿಲ್ಲಿಸಿ ಎಂದು ಆಗ್ರಹಿಸಿದರು. ಈಗಾಗಲೇ ಕೊಟ್ಟಿರುವ ನೋಟೀಸ್ ಹಿಂಪಡೆಯಬೇಕು. ಬಿಜೆಪಿಯೂ ವ್ಯಾಪಾರಿಗಳ ಪ್ರತಿಭಟನೆಗೆ ಬಿಜೆಪಿಯಿಂದ ಬೆಂಬಲ ಘೋಷಿಸಿದೆ. ಖಜಾನೆ ಖಾಲಿ ಆಗಿದೆ ಎಂದು ರಾತೋರಾತ್ರಿ ನೋಟೀಸ್ ಕೊಟ್ಟಿದ್ದಾರೆ. ಈ ಸರ್ಕಾರದಿಂದಲೇ ನೋಟೀಸ್ ಅಕ್ರಮ ನಡೆದಿದೆ. ತನ್ನ ನಿರ್ಧಾರದಿಂದ ಹಿಂದಕ್ಕೆ ಸರಿಯಬೇಕು ಎಂದು ಮನವಿ ಮಾಡಿದರು. ಕಾಂಗ್ರೆಸ್ ಪುಢಾರಿಗಳು ಅನೇಕ ಬಾರಿ ಬಿಜೆಪಿ ಕಚೇರಿ ಎದುರು ಬಂದು ಪ್ರತಿಭಟನೆ ಮಾಡುತ್ತಿದ್ದರು. ಅವರಿಗೆ ಹೋರಾಟ ಮಾಡುವ ಚಟ ಇದ್ದರೆ, ಫ್ರೀಡಂ ಪಾರ್ಕ್‌ಗೆ ಹೋಗಿ ಮಾಡಲಿ. ಆದರೆ, ಬಿಜೆಪಿ ಕಚೇರಿ ಎದುರು ಪದೇಪದೇ ಗೂಂಡಾ ವರ್ತನೆ ಮಾಡುವುದು ಸರಿಯಲ್ಲ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇದನ್ನು ಗಮನಿಸಲಿ, ಬಿಜೆಪಿ ಕಚೇರಿ ಎದುರು ಅವರ ಕಾರ್ಯಕರ್ತರ ಪ್ರತಿಭಟನೆ ತಪ್ಪಿಸಲಿ ಎಂದು ಒತ್ತಾಯಿಸಿದರು. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯಗೆ ಸುಪ್ರೀಂ ಕೋರ್ಟ್ ಕ್ಲೀನ್‌ಚಿಟ್ ನೀಡಿಲ್ಲ, ಇದರಲ್ಲಿ ಸಿಎಂ ನಿರಪರಾಧಿ ಎಂದೂ ಹೇಳಿಲ್ಲ. ಪ್ರಕರಣದಲ್ಲಿ ಸಿಎಂ, ಅವರ ಕುಟುಂಬದವರ ಪಾತ್ರ ಇದೆ, ಎಫ್‌ಐಆರ್ ಸಹ ದಾಖಲಾಗಿದೆ. ನಮ ಹೋರಾಟ ಮುಂದುವರೆಯಲಿದೆ ಎಂದು ಹೇಳಿದರು. ಕಾಂಗ್ರೆಸ್ ಶಾಸಕರಿಗೆ 50 ಕೋಟಿ ಅನುದಾನ ನೀಡಿರುವ ವಿಚಾರವಾಗಿ, 50 ಕೋಟಿ ಅವರಿಗೂ ಇನ್ನೂ ಕೊಟ್ಟಿಲ್ಲ, ಅಧಿವೇಶನ ನಡೆಯುತ್ತಿದೆ. ಹಾದಿಬೀದಿಯಲ್ಲಿ ಅವರ ಸರ್ಕಾರದ ಬಗ್ಗೆ ಶಾಸಕರು ಮಾತನಾಡುತ್ತಿದ್ದಾರೆ.

ಅಧಿವೇಶನ ಸುಸೂತ್ರವಾಗಿ ನಡೆಯಬೇಕು ಎಂದು ಅನುದಾನ ಘೋಷಣೆ ಅಷ್ಟೇ ಮಾಡಿದ್ದಾರೆ. ತಪ್ಪಿಸಿಕೊಳ್ಳುವ ಕುತಂತ್ರ ಕೂಡ ಇದರಲ್ಲಿದೆ. ಹಣ ಬಿಡುಗಡೆ ಮಾಡುವ ಬಗ್ಗೆ ಘೋಷಣೆ ಅಷ್ಟೇ ಇದು. ಯಾವುದೇ ಕಾರಣಕ್ಕೂ ಹಣ ಬಿಡುಗಡೆ ಮಾಡುವುದಿಲ್ಲ. ಹಣ ಬಿಡುಗಡೆ ಮಾಡಿದರೆ ನಂತರ ನಾವು ಮಾತನಾಡುತ್ತೇವೆ ಎಂದು ಹೇಳಿದರು. ಮುಂಬರುವ ಮಳೆಗಾಲದ ಅಧಿವೇಶನದಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದೇವೆ.

ಸರ್ಕಾರದ ವೈಫಲ್ಯಗಳನ್ನು ಸದನದಲ್ಲಿ ಚರ್ಚೆ ಮಾಡಲಾಗಿದೆ. ಪ್ರತಿಪಕ್ಷದ ನಾಯಕರಾದ ಆರ್. ಅಶೋಕ್ ಅವರ ನೇತೃತ್ವದಲ್ಲಿ ಶಾಸಕರ ಸಭೆಯನ್ನೂ ಮುಂದೆ ಮಾಡುತ್ತೇವೆ. ಸದ್ಯದಲ್ಲೇ ಜೆಡಿಎಸ್ ನಾಯಕರ ಜತೆಗೂ ಸಭೆ ನಡೆಸುತ್ತೇವೆ. ಬಿಜೆಪಿ ಜೆಡಿಎಸ್ ಒಟ್ಟಾಗಿ ಸರ್ಕಾರದ ವಿರುದ್ಧ ಸದನದಲ್ಲಿ ಹೋರಾಟ, ಚರ್ಚೆ ಮಾಡುವುದಾಗಿ ವಿಜಯೇಂದ್ರ ಹೇಳಿದರು.

**ವ್ಯಾಪಾರಿಗಳ ಪ್ರತಿಭಟನೆಗೆ ಬಿಜೆಪಿಯಿಂದ ಬೆಂಬಲ**



**ಅಪಪ್ರಚಾರ ನಿಲ್ಲಿಸಲಿ**

ಧರ್ಮಸ್ಥಳ ಎಸ್‌ಐಟಿ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ವಿಜಯೇಂದ್ರ, ಈ ಬಗ್ಗೆ ಶೀಘ್ರದಲ್ಲೇ ತನಿಖೆ ಆಗಬೇಕು. ಅಲ್ಲದೆ ಪಾರದರ್ಶಕ ತನಿಖೆಯೂ ನಡೆಯಲಿ. ಆದರೆ, ಇದೇ ವಿಚಾರ ಇಟ್ಟುಕೊಂಡು ಧರ್ಮಸ್ಥಳದಲ್ಲಿ ವ್ಯವಸ್ಥೆ ಹಾಳು ಮಾಡುವ ಕೆಲಸ ಆಗಬಾರದು. ಏನೇನು ಕುತಂತ್ರ ನಡಿಯುತ್ತಿದೆ ಎಂಬುದು ನಮಗೂ ಗೊತ್ತಿದೆ. ಆದರೆ, ಅಲ್ಲಿನ ವ್ಯವಸ್ಥೆ ಹಾಳು ಮಾಡುವ ಕೆಲಸ ಮಾಡಬಾರದು. ಧರ್ಮಸ್ಥಳದ ಮೇಲೆ ಅಪಪ್ರಚಾರ ಮಾಡುವುದನ್ನು ನಿಲ್ಲಿಸಲಿ ಎಂದು ಮನವಿ ಮಾಡಿಕೊಂಡರು. ರಾಜ್ಯದಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಸಮಸ್ಯೆ ವಿಚಾರವಾಗಿ, ರಾಜ್ಯ ಸರ್ಕಾರ, ಸಿಎಂ, ಕೃಷಿ ಸಚಿವರು ಇದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಈಗಲೂ ಕಾಲ ಮಿಂಚಿಲ್ಲ. ರೈತರಿಗೆ ಅನುಕೂಲ ಆಗುವಂತೆ ಕ್ರಮ ವಹಿಸಬೇಕು. ಕೂಡಲೇ ಸಿಎಂ, ಕೃಷಿ ಸಚಿವರು, ಉಸ್ತುವಾರಿ ಸಚಿವರು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

## ಬೆಂಗಳೂರಿನ ಕಲಾಸಿಪಾಳ್ಯದಲ್ಲಿ ಸ್ಫೋಟಕ ವಸ್ತುಗಳು ಪತ್ತೆ

• ಉದಯವಾಹಿನಿ, ಬೆಂಗಳೂರು

ನಗರದ ಕಲಾಸಿಪಾಳ್ಯ ಬಿಎಂಟಿಸಿ ಬಸ್ ನಿಲ್ದಾಣದ ಆವರಣದಲ್ಲಿರುವ ಶೌಚಾಲಯದ ಬಳಿ ಇಡಲಾಗಿದ್ದ ಬ್ಯಾಗ್‌ವೊಂದರಲ್ಲಿ ಸ್ಫೋಟಕ ವಸ್ತುಗಳು ಪತ್ತೆ ಆಗಿದ್ದು, ಆತಂಕದ ವಾತಾವರಣ ಸೃಷ್ಟಿಯಾಗಿದೆ. ಜಿಲೆಟಿನ್ ಕಡ್ಡಿಗಳು, ಡಿಟೋನೇಟರ್ ಪತ್ತೆಯಾಗಿದೆ. ಸ್ಥಳಕ್ಕೆ ಕಲಾಸಿಪಾಳ್ಯ ಠಾಣೆಯ ಪೊಲೀಸರು, ಬಾಂಬ್ ತಪಾಸಣೆ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿದ್ದಾರೆ.

## ಅಂಗಾಂಗ ದಾನ ಜಾಗೃತಿ ಅಭಿಯಾನ

• ಉದಯವಾಹಿನಿ, ಬೆಂಗಳೂರು

ಕಾವೇರಿ ಆಸ್ಪತ್ರೆಯಿಂದ 760ಕ್ಕೂ ಹೆಚ್ಚು ಅಂಗಾಂಗ ಕಸಿ ಯಶಸ್ವಿ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಈಗ ಹೃದಯ ಕಸಿಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಅಗಸ್ಟ್ 13ರಂದು ಅಂಗಾಂಗ ದಾನದ ಕುರಿತು ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಲಾಗುವುದು ಎಂದು ಆಸ್ಪತ್ರೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಸ್. ವಿಜಯಭಾಸ್ಕರನ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹ್ಯಾಂಡ್ ಓವರ್ ಹೋಪ್, ಗಿವ್ ವಿಥ್ ಗ್ರೇಸ್, ಲೈವ್ ಫ್ರೊ ಅದರ್ಸ್ ಎಂಬ ಪರಿಕಲ್ಪನೆ ಅಡಿಯಲ್ಲಿ ಸಾರ್ವಜನಿಕ ಅಂಗಾಂಗ ದಾನ ಜಾಗೃತಿ ಅಭಿಯಾನ ನಡೆಯಲಿದೆ. ನಮ್ಮ ಆಸ್ಪತ್ರೆಯು ದಾನಿಗಳ ನೋಂದಣಿ ಶಿಬಿರಗಳನ್ನೂ ಆಯೋಜಿಸಲಿದೆ' ಎಂದು ಮಾಹಿತಿ ನೀಡಿದರು.

## ಜುಲೈ 25ರಂದು ದೆಹಲಿ ಚಲೋ ಅಭಿಯಾನ

• ಉದಯವಾಹಿನಿ, ಬೆಂಗಳೂರು

ಅಸಾಂವಿಧಾನಿಕವಾಗಿರುವ ಬುದ್ಧಗಯಾ ಟ್ರಸ್ಟ್ (ಬಿಟಿ) ಕಾಯ್ದೆ-1949 ರದ್ದುಗೊಳಿಸಬೇಕು. ಬಿಹಾರದ ಬುದ್ಧಗಯಾ ಮಹಾಬೋಧಿ ಮಹಾವಿಹಾರದ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ಬೌದ್ಧರಿಗೆ ನೀಡುವಂತೆ ಆಗ್ರಹಿಸಿ ಜುಲೈ 25ರಂದು ದೆಹಲಿ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ಬೌದ್ಧರ ವೇದಿಕೆ ತಿಳಿಸಿದೆ.ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ ಮಾತನಾಡಿ, ಬೌದ್ಧ ಬಿಕ್ಕುಗಳ ಸಂಘವು 160 ದಿನಗಳಿಂದ ಬುದ್ಧಗಯಾದಲ್ಲಿ ಧರಣಿ ನಡೆಸುತ್ತಿದೆ. ಸ್ವಾತಂತ್ರ್ಯ ನಂತರ ಬಿ.ಟಿ-1949 ಕಾಯ್ದೆ ರಚಿಸಲಾಗಿತ್ತು. ಈ ಕಾಯ್ದೆಯಡಿ ಬಿಹಾರದ ಗಯಾ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಾಲ್ವರು ಬೌದ್ಧರು, ನಾಲ್ವರು ಹಿಂದೂಗಳನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಬುದ್ಧಗಯಾದ ಮಹಾಬೋಧಿ ಮಹಾವಿಹಾರದ ಆಡಳಿತವನ್ನು ನೋಡಿಕೊಳ್ಳುತ್ತಿದೆ. ಇದರಿಂದ ಬೌದ್ಧರಿಗೆ ಅನ್ಯಾಯವಾಗಿದೆ' ಎಂದು ದೂರಿದರು. ಆಲ್ ಇಂಡಿಯಾ ಬುದ್ಧಿಸ್ಟ್ ಫೋರಂ ಪ್ರಧಾನ ಕಾರ್ಯದರ್ಶಿ ಆಕಾಶ್ ಲಾಮ್ ಅವರ ನೇತೃತ್ವದಲ್ಲಿ ಹೋರಾಟ ನಡೆಯುತ್ತಿದೆ. ಇದೇ 25ರಂದು ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಯುವ ರಾಷ್ಟ್ರ ಮಟ್ಟದ ಧರಣಿ ಸತ್ಯಾಗ್ರಹದಲ್ಲಿ ರಾಜ್ಯದಿಂದ ನೂರಾರು ಜನ ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

## ಜಗದೀಪ್ ಧನಕರ್ ಆರೋಗ್ಯ ಚೆನ್ನಾಗಿದೆ ಬಿಜೆಪಿ ಆರೋಗ್ಯವೇ ಚೆನ್ನಾಗಿಲ್ಲ

• ಉದಯವಾಹಿನಿ, ಬೆಂಗಳೂರು

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರ ರಾಜೀನಾಮೆ ವಿಷಯ ಭಾರೀ ವಿವಾದಕ್ಕೀಡಾಗಿದೆ. ಅನಾರೋಗ್ಯ ನೆಪವೊಡ್ಡಿ ರಾಜೀನಾಮೆ ನೀಡಿರುವುದು ಸಾಕಷ್ಟು ಊಹಾಪೋಹಗಳಿಗೆ ಕಾರಣವಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಆರ್ ಪಾಟೀಲ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಉಪರಾಷ್ಟ್ರಪತಿ ಅನಿರೀಕ್ಷಿತ ರಾಜೀನಾಮೆ ಎಲ್ಲರನ್ನೂ ಅಚ್ಚರಿಗೊಳಿಸಿದೆ. ಬಿಜೆಪಿ ಆರೋಗ್ಯ ಚೆನ್ನಾಗಿಲ್ಲದಿರುವುದೇ ಇದಕ್ಕೆ ಕಾರಣ. ಬಿಜೆಪಿಯಲ್ಲಿರುವ ಸರ್ವಾಧಿಕಾರ ಧೋರಣೆಯೇ ಜಗದೀಪ್ ಧನಕರ್ ಅವರ ರಾಜೀನಾಮೆಗೆ ಪ್ರಮುಖ ಕಾರಣವಾಗಿದೆ ಎಂದು ಆರೋಪಿಸಿದರು ಇಡೀ ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಬಿಜೆಪಿಯಲ್ಲಿ ಏನೋ ಸರಿಯಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇಡೀ ಪಕ್ಷ ಇಬ್ಬರ ಕೈಯಲ್ಲಿದೆ. ಸರ್ವಾಧಿಕಾರ ಹೆಚ್ಚಾಗಿರುವುದರಿಂದ ಬೇರೆ ಯಾವ ನಾಯಕರೂ ಮಾತನಾಡದೇ ಸುಮ್ಮನಿದ್ದಾರೆ. ಜನರಿಗೆ ಇದು ಗೊತ್ತಾಗುವುದಿಲ್ಲ ಎಂದು ಬಿಜೆಪಿಯವರು ತಿಳಿದುಕೊಂಡಿದ್ದಾರೆ. ಆದರೆ ಇಡೀ ಪ್ರಕರಣದಿಂದ ಬಿಜೆಪಿಯ ಬಣ್ಣ ಸಂಪೂರ್ಣ ಬಯಲಾಗಿದೆ ಎಂದು ದೂರಿದರು. ಬಿಜೆಪಿಯಲ್ಲಿ ಪ್ರಜಾಪ್ರಭುತ್ವ, ನೀತಿ-ನಿಯಮಗಳು ಇಲ್ಲ. ಕೇಂದ್ರ ಸರ್ಕಾರ ಕೂಡ ಸಂವಿಧಾನ ಪಾಲನೆ ಮಾಡುತ್ತಿಲ್ಲ. ಸರ್ಕಾರವನ್ನು ಮುನ್ನಡೆಸುತ್ತಿರುವವರು ಇದುವರೆಗೂ ಒಂದಾದರೂ ಸುದ್ದಿಗೋಷ್ಠಿ ಮಾಡಿದ್ದಾರಾ? ಏಕಪಕ್ಷೀಯ ನಿರ್ಧಾರಗಳೇ ಹೆಚ್ಚಾಗಿ ತೆಗೆದುಕೊಳ್ಳಲಾಗುತ್ತದೆ. ಇಂಥ ಅಪಸವ್ಯಗಳಿಂದಲೇ ಬಿಜೆಪಿಯಲ್ಲಿ ಅನಾರೋಗ್ಯ ಪರಿಸ್ಥಿತಿ ಇದೆ ಎಂದು ಟೀಕಿಸಿದರು

## ಕೆಂಪೇಗೌಡ ಪ್ರಶಸ್ತಿ ಪ್ರದಾನ

• ಉದಯವಾಹಿನಿ, ಪೀಣ್ಯ ದಾಸರಹಳ್ಳಿ

500 ವರ್ಷಗಳ ಹಿಂದೆಯೇ ನಾಡಪ್ರಭು ಕೆಂಪೇಗೌಡರು ಸ್ಮಾರ್ಟ್ ಸಿಟಿಯ ಪರಿಕಲ್ಪನೆಯಲ್ಲಿ ನಗರಗಳನ್ನು ನಿರ್ಮಿಸಿದ್ದರು' ಎಂದು ಮಾಜಿ ಸಂಸದ ಡಿ.ವಿ. ಸದಾನಂದ ಗೌಡ ತಿಳಿಸಿದರು. ಬಾಗಲಗುಂಟೆಯಲ್ಲಿ ನಡೆದ ಕೆಂಪೇಗೌಡ ಜಯಂತ್ಯುತ್ಸವ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭಉದ್ಘಾಟಿಸಿ ಅವರು ಮಾತನಾಡಿದರು.'ನಗರದಲ್ಲಿ ಕಸುಬು ಆಧಾರಿತ ಸಮುದಾಯಗಳಿಗೆ ಕೆಲಸ ಕೊಟ್ಟು ಉತ್ತಮ ಆಡಳಿತವನ್ನು ನೀಡಿದವರು ಕೆಂಪೇಗೌಡರು ಎಂದರು. ಆದಿಚುಂಚನಗಿರಿ ಮಹಾಸಂಸ್ಥಾನ ವಿಜಯನಗರ ಶಾಖ ಮಠದ ಪೀಠಾಧ್ಯಕ್ಷ ಸೌಮ್ಯನಾಥ ಸ್ವಾಮೀಜಿ, ಇತಿಹಾಸಕಾರ ತಲಕಾಡು ಚಿಕ್ಕರಂಗೇಗೌಡ ಮಾತನಾಡಿದರು. ಶಾಸಕ ಎಸ್. ಮುನಿರಾಜು ಅವರಿಗೆ ಶಾಸಕ ಸರ್ವೋತ್ತಮ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಾಹಿತಿ ವೈ.ಬಿ.ಎಚ್. ಜಯದೇವ್ ರಚಿಸಿರುವ 'ನಾಡಪ್ರಭು ಕೆಂಪೇಗೌಡ' ಕಾದಂಬರಿ ಬಿಡುಗಡೆ ಮಾಡಲಾಯಿತು. 200ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಹತ್ತು ಸಾಧಕರಿಗೆ ಕೆಂಪೇಗೌಡ ಪ್ರಶಸ್ತಿ ನೀಡಲಾಯಿತು.

# ಬೆಂಗಳೂರು ಏರ್‌ಪೋರ್ಟ್‌ನಲ್ಲಿ 2020 ರಿಂದ ಇಲ್ಲಿಯವರೆಗೆ 343 ಬಾರಿ ಪಕ್ಷಿಗಳು ಡಿಕ್ಕಿ

• ಉದಯವಾಹಿನಿ, ಬೆಂಗಳೂರು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 2020 ರಿಂದ ಇಲ್ಲಿಯವರೆಗೆ 343 ಬಾರಿ ಪಕ್ಷಿಗಳು ವಿಮಾನಗಳಿಗೆ ಡಿಕ್ಕಿ ಹೊಡೆದಿವೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಕೇಂದ್ರ ನಾಗರಿಕ ವಿಮಾನಯಾನ ರಾಜ್ಯ ಸಚಿವ ಮುರಳೀಧರ್ ಮೊಹೋಲ್ ಅವರು ರಾಜ್ಯಸಭೆಗೆ ಈ ಮಾಹಿತಿ ನೀಡಿದ್ದಾರೆ.

ಭಾರತದಲ್ಲಿರುವ ಪ್ರಮುಖ ವಿಮಾನ ನಿಲ್ದಾಣಗಳಿಗೆ ಹೋಲಿಸಿದರೆ ದೆಹಲಿಯಲ್ಲಿ ಅತಿ ಹೆಚ್ಚು ಬಾರಿ ಪಕ್ಷಿಗಳು ಡಿಕ್ಕಿ ಹೊಡೆದಿವೆ. 2020 ರಿಂದ ದೆಹಲಿ ವಿಮಾನ ನಿಲ್ದಾಣದಲ್ಲಿ 695 ಬಾರಿ ಪಕ್ಷಿಗಳು ವಿಮಾನಕ್ಕೆ ಡಿಕ್ಕಿಯಾಗಿವೆ.



ದೆಹಲಿಯ ಬಳಿಕ ಮುಂಬೈ (407), ಮೂರನೇ ಸ್ಥಾನದಲ್ಲಿ ಅಹಮದಾಬಾದ್ (337), ನಾಲ್ಕನೇ ಸ್ಥಾನದಲ್ಲಿ ಬೆಂಗಳೂರು (343) ಇದೆ.

ದೇಶದ ಅತಿದೊಡ್ಡ ವಿಮಾನ ನಿಲ್ದಾಣ ಆಗಿರುವ ದೆಹಲಿಯ ಇಂದಿರಾ ಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈ ವರ್ಷ ಜೂನ್ ವರೆಗೆ 41 ಬಾರಿ ಪಕ್ಷಿಗಳು ಡಿಕ್ಕಿ ಹೊಡೆದಿವೆ. 2023 ರಲ್ಲಿ 185, 2022ರಲ್ಲಿ 183, 2024 ರಲ್ಲಿ 130 ಬಾರಿ ಪಕ್ಷಿ ಡಿಕ್ಕಿ ಪ್ರಕರಣ ವರದಿಯಾಗಿದೆ.ವಿಶೇಷವಾಗಿ ವಿಮಾನ ಟೇಕಾಫ್ ಮತ್ತು ಲ್ಯಾಂಡಿಂಗ್ ಹಂತದಲ್ಲಿ ಪಕ್ಷಿಗಳು ಡಿಕ್ಕಿಯಾಗುತ್ತವೆ. ಪಕ್ಷಿ ಡಿಕ್ಕಿಯಾಗುವುದನ್ನು ತಪ್ಪಿಸಲು ವಿಮಾನ ನಿಲ್ದಾಣಗಳು ಹಲವಾರು ಕ್ರಮಗಳನ್ನು ಕೈಗೊಂಡಿವೆ.

ವಿಮಾನ ನಿಲ್ದಾಣದ ಬಳಿ ಮನೆ ಮತ್ತು ಅಡುಗೆ ತ್ಯಾಜ್ಯವನ್ನು ಎಸೆಯುವುದನ್ನು ತಪ್ಪಿಸಬೇಕು ಮತ್ತು ಪಕ್ಷಿಗಳು ಮತ್ತು ಪಾರಿವಾಳಗಳಿಗೆ ಆಹಾರವನ್ನು ನೀಡಬಾರದು ಎಂದು ಹೇಳಿವೆ. ಆಹಾರ ಹಾಕಿದಾಗ ಮತ್ತು ತ್ಯಾಜ್ಯ ಎಸೆದಾಗ ಅವುಗಳನ್ನು ತಿನ್ನಲು ಪಕ್ಷಿಗಳು ಹಾರುತ್ತಾ ಬರುವುದರಿಂದ ವಿಮಾನಗಳಿಗೆ ಡಿಕ್ಕಿ ಹೊಡೆಯುವ ಸಾಧ್ಯತೆ ಹೆಚ್ಚಿರುತ್ತದೆ.

ತೆರೆದ ಪ್ರದೇಶಗಳಲ್ಲಿ ಪ್ರಾಣಿಗಳನ್ನು ಮಾಂಸಕ್ಕಾಗಿ ವಧಿಸಬಾರದು. ಮುಖ್ಯವಾಗಿ ಖಾಲಿ ಇರುವ ಕಟ್ಟಡಗಳಿದ್ದಲ್ಲಿ ತಿಳಿಸಬೇಕು ಎಂದು ವಿಮಾನ ನಿಲ್ದಾಣಗಳು ಆಗಾಗ ಮನವಿ ಮಾಡುತ್ತಿರುತ್ತವೆ. ಕಟ್ಟಡಗಳು ಖಾಲಿ ಇದ್ದಲ್ಲಿ ಬಾವಲಿಗಳು ಆ ಜಾಗಕ್ಕೆ ಬರುವ ಸಾಧ್ಯತೆಗಳಿರುತ್ತವೆ.

# ನಾಗಸಂದ್ರ ಟೋಲ್: ಕೇಂದ್ರಕ್ಕೆ ನೋಟಿಸ್

## ಆಗಸ್ಟ್ ಮೊದಲ ಅಥವಾ ಎರಡನೇ ವಾರದಲ್ಲಿ ಹಳದಿ ಮಾರ್ಗದ ಉದ್ಘಾಟನೆ

• ಉದಯ ವಾಹಿನಿ, ಬೆಂಗಳೂರು

ನಮ್ಮ ಮೆಟ್ರೊ ಹಳದಿ ಮಾರ್ಗದ ಮೊದಲ ಹಂತದ ಸುರಕ್ಷತಾ ಪರಿಶೀಲನೆ ಕಾರ್ಯ ಆರಂಭವಾಗಿದ್ದು, ಜುಲೈ 25ರವರೆಗೆ ಮುಂದುವರಿಯಲಿದೆ. ಮೆಟ್ರೊ ರೈಲ್ವೆ ಸುರಕ್ಷತಾ ಆಯುಕ್ತರ (ಸಿಎಂಆರ್‌ಎಸ್) ಅಧಿಕಾರಿಗಳ ತಂಡ, ಮೊದಲ ದಿನ ಆರ್.ವಿ.ರಸ್ತೆ-ಬೊಮ್ಮಸಂದ್ರದ ಮಾರ್ಗದಲ್ಲಿ ಸುರಕ್ಷತಾ ಪರೀಕ್ಷೆ ಕೈಗೊಂಡಿತು. 19.15 ಕಿ.ಮೀ ಉದ್ದದ ಈ ಮಾರ್ಗದಲ್ಲಿ ಮೂರರಿಂದ ನಾಲ್ಕು ನಿಲ್ದಾಣಗಳು ಹಾಗೂ ಮಾರ್ಗದಲ್ಲಿ ಅಳವಡಿಸಿರುವ ಹಳಿ, ಅದಕ್ಕೆ ಹೊಂದಿಕೊಂಡಿರುವ ವಿದ್ಯುತ್ ಸಂಪರ್ಕ, ಸಿಗ್ನಲಿಂಗ್ ವ್ಯವಸ್ಥೆ, ನಿಲ್ದಾಣಗಳಲ್ಲಿರುವ ಸೌಲಭ್ಯ, ತುರ್ತು ನಿರ್ಗಮನ ಸೇರಿದಂತೆ ಸಿವಿಲ್ ಕಾಮಗಾರಿಯಿಂದ ಹಿಡಿದು ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಪರಿಶೀಲನೆ ನಡೆಸಿತು. ಪರಿಶೀಲನಾ ಕಾರ್ಯ ಪೂರ್ಣಗೊಂಡ ನಂತರ ವಾಣಿಜ್ಯ ಸೇವೆಗೆ ಅನುಮತಿ ನೀಡಲಾಗುತ್ತದೆ.

ಪರಿಶೀಲನೆ ನಂತರ ಅಗತ್ಯವಿದ್ದರೆ ಸಣ್ಣಪುಟ್ಟ ಮಾರ್ಪಾಡು ಅಥವಾ ಸೂಚನೆಗಳೊಂದಿಗೆ ಸಿಎಂಆರ್‌ಎಸ್ ಅನುಮತಿ ನೀಡಬಹುದು. ಪರಿಶೀಲನೆ ನಂತರ ಗರಿಷ್ಠ ಒಂದು ವಾರದಲ್ಲಿ ಸಿಎಂಆರ್‌ಎಸ್‌ನಿಂದ ಹಸಿರು ನಿಶಾನೆ ಸಿಗುವ ಸಾಧ್ಯತೆಗಳಿವೆ' ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಮೂಲಗಳು ತಿಳಿಸಿವೆ.



ಉದಯವಾಹಿನಿ ಚಿತ್ರ

ಸಿಎಂಎಸ್ ಆರ್ ಆಯುಕ್ತರಿಂದ ಪರಿಶೀಲನೆ

ಪರಿಶೀಲನಾ ವರದಿ ಬಂದ ನಂತರವೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚನೆ ನಡೆಸಿ, ಉದ್ಘಾಟನೆಗೆ ದಿನಾಂಕ ನಿಗದಿಪಡಿಸಲಾಗುತ್ತದೆ' ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.

- ಸಿಎಂಎಸ್‌ಆರ್ ಆಯುಕ್ತರಿಂದ ಪರಿಶೀಲನೆ
- ಪರಿಶೀಲನಾ ವರದಿ ನಂತರ ಉದ್ಘಾಟನೆಗೆ ದಿನ ನಿಗದಿ
- ಕೇಂದ್ರ-ರಾಜ್ಯ ಸರ್ಕಾರಗಳಿಗೆ ಕಾರ್ಯಕ್ರಮದ ವರದಿ ಸಲ್ಲಿಕೆ

ಆಗಸ್ಟ್ ಮೊದಲ ಅಥವಾ ಎರಡನೇ ವಾರದಲ್ಲಿ ಹಳದಿ ಮಾರ್ಗದ ಉದ್ಘಾಟನೆ ನಡೆಯುವ ಸಾಧ್ಯತೆಯಿದೆ. ಈ ಮಾರ್ಗದ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸುವ ಆಲೋಚನೆ ಇದೆ. ಆದರೆ ಕಾರ್ಯಕ್ರಮದ ಬಗ್ಗೆ ಯಾವುದೇ ತೀರ್ಮಾನವಾಗಿಲ್ಲ' ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.

ಆದರೆ, ಈ ಮಾರ್ಗದ ಮೆಟ್ರೊ ಸಂಚಾರಕ್ಕೆ ಅದ್ದೂರಿ ಚಾಲನೆ ನೀಡಲು ಬಿಎಂಆರ್‌ಸಿಎಲ್ ಸಿದ್ಧತೆ ನಡೆಸಿದ್ದು, ಈಗಾಗಲೇ ಈ ಮಾರ್ಗದಲ್ಲಿನ ಪ್ರಯಾಣ, ನಿಲ್ದಾಣಗಳ ದೃಶ್ಯಗಳ ವಿಡಿಯೋ ಡ್ರೋನ್ ದೃಶ್ಯಗಳೊಂದಿಗೆ ಸಾಕ್ಷ್ಯಚಿತ್ರ ನಿರ್ಮಿಸಲು ಖಾಸಗಿ ಸಂಸ್ಥೆ ಜತೆ ಒಪ್ಪಂದ ಮಾಡಿಕೊಂಡಿದೆ. ಈ ವಿಡಿಯೋವನ್ನು ಉದ್ಘಾಟನಾ ಸಮಾರಂಭದಲ್ಲಿ ಪ್ರದರ್ಶಿಸುವ ನಿರೀಕ್ಷೆಯಿದೆ.

**16 ನಿಲ್ದಾಣಗಳನ್ನೊಳಗೊಂಡ, ಸಂಪೂರ್ಣ ಎತ್ತರಿಸಿದ ಮಾರ್ಗವಾಗಿರುವ ಈ ಹಳದಿ ಮಾರ್ಗದಲ್ಲಿ ಹಲವು ಬಡಾವಣೆಗಳ ಜೊತೆಗೆ, ಐ.ಟಿ.ಕಾರಿಡಾರ್‌ಗೂ ವಿಸ್ತರಿಸುತ್ತದೆ. ನಗರದ ಕೇಂದ್ರ ಭಾಗಕ್ಕೆ ಸಂಪರ್ಕ ಕಲ್ಪಿಸಲು ಇದು ಸಹಕಾರಿಯಾಗಲಿದೆ. ಪ್ರಸ್ತುತ ಈ ಮಾರ್ಗದಲ್ಲಿ ಕಾರ್ಯಾಚರಣೆಗಾಗಿ ಮೂರು ರೈಲುಗಳು ಬಂದಿಳಿದಿವೆ.**

ಹಳದಿ ಮಾರ್ಗದ ನಿಲ್ದಾಣಗಳು ಬೊಮ್ಮಸಂದ್ರ, ಹೆಬ್ಬಗೋಡಿ ಹುಸ್ಕೂರು ರಸ್ತೆ ಇನ್ಫೋಸಿಸ್ ಫೌಂಡೇಷನ್ (ಕೋನಪ್ಪನ ಅಗ್ರಹಾರ) ಎಲೆಕ್ಟ್ರಾನಿಕ್ ಸಿಟಿ ಬೆರಟೇನ ಅಗ್ರಹಾರ ಹೊಸ ರಸ್ತೆ ಸಿಂಗಸಂದ್ರ, ಕೂಡ್ಲು ಗೇಟ್ ಹೊಂಗಸಂದ್ರ, ಬೊಮ್ಮನಹಳ್ಳಿ ಸೆಂಟ್ರಲ್ ಸಿಲ್ಕ್ ಬೋರ್ಡ್ ಬಿಟಿಎಂ ಲೇಔಟ್ ಜಯದೇವ ಆಸ್ಪತ್ರೆ ರಾಗಿಗುಡ್ಡ ಆರ್.ವಿ. ರಸ್ತೆ ನಿಲ್ದಾಣಗಳನ್ನು ಹೊಂದಿದೆ.

ದಕ್ಷಿಣ ಬೆಂಗಳೂರನ್ನು (ಎಲೆಕ್ಟ್ರಾನಿಕ್ ಸಿಟಿ) ನಗರದ ಕೇಂದ್ರಕ್ಕೆ ಸಂಪರ್ಕಿಸುತ್ತದೆ.

## ಕೆಜಿಎಫ್ ಬಾಬುಗೆ ಆರ್‌ಟಿಓ ಶಾಕ್

• ಉದಯವಾಹಿನಿ, ಬೆಂಗಳೂರು

ಕೆಜಿಎಫ್ ಬಾಬು ನಿವಾಸದ ಮೇಲೆ ಆರ್‌ಟಿಒ ಅಧಿಕಾರಿಗಳು ದಿಢೀರ್ ದಾಳಿ ನಡೆಸಿದ್ದಾರೆ. ಕೆಜಿಎಫ್ ಬಾಬು ಅವರ ಬಳಿಯಿದ್ದ ಐಷಾರಾಮಿ ಕಾರುಗಳನ್ನು ಸೀಜ್ ಮಾಡಿದ್ದಾರೆ ಎಂದು ತಿಳಿದು ಬಂದಿದೆ.

ಬೆಂಗಳೂರಿನ ವಸಂತ ನಗರದಲ್ಲಿರುವ ಕೆಜಿಎಫ್ ಬಾಬು ಅವರ ರುಕ್ಸಾನಾ ಪ್ಯಾಲೇಸ್ ಮನೆ ಮೇಲೆ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ಐಷಾರಾಮಿ ಕಾರುಗಳಿಗೆ ತೆರಿಗೆ ಕಟ್ಟದ ಹಿನ್ನೆಲೆಯಲ್ಲಿ ಆರ್‌ಟಿಒ ಅಧಿಕಾರಿಗಳು ಕೆಜಿಎಫ್ ಬಾಬು ಮನೆ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ.
ಕೆಜಿಎಫ್ ಬಾಬುಗೆ ಸೆಲೆಬ್ರಿಟಿಗಳು ಬಳಕೆ ಮಾಡಿದ ಕಾರುಗಳನ್ನು ಖರೀದಿ ಮಾಡುವ ಕ್ರೇಜ್ ಇದೆ. ಅದರಲ್ಲೂ ಬಾಲಿವುಡ್ ಸೆಲೆಬ್ರಿಟಿಗಳ ಕಾರು ಎಂದರೆ ಅವರು ಖರೀದಿಸಿ ತರುತ್ತಾರೆ. ಕೆಜಿಎಫ್ ಬಾಬು ಬಳಿ ಎರಡು ರೋಲ್ಸ್ ರಾಯ್ಸ್ ಕಾರಿದೆ. ಅಮಿತಾಭ್ ಬಚ್ಚನ್ ಬಳಸುತ್ತಿದ್ದ MH 11 AX 1 ಹಾಗೂ ಆಮಿರ್ ಖಾನ್ ಒಂದು ವರ್ಷ ಮಾತ್ರ ಬಳಸಿದ್ದ MH 02 BB 2 ಸಂಖ್ಯೆಯ ಕಾರನ್ನು ಕೆಜಿಎಫ್ ಬಾಬು ಖರೀದಿಸಿ ತಂದಿದ್ದರು.
ಈಗ ಬಾಬು ತೆರಿಗೆ ಕಟ್ಟದ ಕಾರಣ ಆರ್‌ಟಿಒ ಜಂಟಿ ಆಯುಕ್ತೆ ಶೋಭಾ ನೇತೃತ್ವದ ತಂಡ ಬಾಬು ಮನೆಯ ಮೇಲೆ ದಾಳಿ ನಡೆಸಿತು. ಈ ವೇಳೆ ಗೇಟ್ ತೆಗೆಯದೆ ಕೆಜಿಎಫ್ ಬಾಬು ಮೊಂಡಾಟ ಪ್ರದರ್ಶಿಸಿದರು.



ಉದಯವಾಹಿನಿ ಚಿತ್ರ

**ನಾನು ಟ್ಯಾಕ್ಸ್ ಕಟ್ಟಲು ಸಿದ್ಧನಿದ್ದೇನೆ. ನನ್ನ ಎರಡು ಕಾರುಗಳಿಗೆ ಮಹಾರಾಷ್ಟ್ರದಲ್ಲಿ ನೋಂದಣಿ ಆಗಿದೆ. 2 ಕಾರುಗಳಿಗೆ ಮಹಾರಾಷ್ಟ್ರದಲ್ಲಿ ಲೈಫ್‌ಟೈಮ್ ಟ್ಯಾಕ್ಸ್ ಕಟ್ಟಿದ್ದೇನೆ. ಈಗ ಆರ್‌ಟಿಓ ಅಧಿಕಾರಿಗಳು ಕರ್ನಾಟಕ ತೆರಿಗೆ ಕಟ್ಟಿ ಎನ್ನುತ್ತಿದ್ದಾರೆ. ಒಬ್ಬ ಜವಾಬ್ದಾರಿಯುತ ವ್ಯಕ್ತಿಯಾಗಿ ಟ್ಯಾಕ್ಸ್ ಕಟ್ಟದೇ ಇರಲ್ಲ. ಆರ್‌ಟಿಒ ಈಗ ಅವಕಾಶ ಕೊಟ್ಟರೆ ಈಗಲೇ ತೆರಿಗೆ ಕಟ್ಟುತ್ತೇನೆ' ಎಂದು ಅವರು ಹೇಳಿದ್ದಾರೆ.**

## ಮೂವರು ಕ್ಲಾಸ್‌ಮೇಟ್‌ಗಳ ವಿರುದ್ಧ ಕೇಸ್ ದಾಖಲು

• ಉದಯವಾಹಿನಿ, ಬೆಂಗಳೂರು

22 ವರ್ಷದ ಕಾಲೇಜು ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದು, ಆತನ ಮೂವರು ಕ್ಲಾಸ್‌ಮೇಟ್‌ಗಳ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಹಾಸನದ ಮೃತ ಅರುಣ್ ಸಿ, ಕಳೆದ ಜುಲೈ 11 ರಂದು ತನ್ನ ಮನೆಯಲ್ಲಿ ಸೀರೆಯಿಂದ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ.

ಬೆಂಗಳೂರಿನ ಖಾಸಗಿ ಕಾಲೇಜಿನಲ್ಲಿ ಆರ್ಕಿಟೆಕ್ಚರ್ ವಿದ್ಯಾರ್ಥಿಯಾಗಿದ್ದ ಅರುಣ್, ಎಂಟನೇ ಸೆಮಿಸ್ಟರ್ ಪರೀಕ್ಷೆ ಮುಗಿಸಿ ರಜೆಗಾಗಿ ಮನೆಗೆ ಹೋಗಿದ್ದ ವೇಳೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯ ಸಮಯದಲ್ಲಿ, ದಿನಗೂಲಿ ಕಾರ್ಮಿಕರಾಗಿರುವ ಅರುಣ್ ಪೋಷಕರು ಕೆಲಸಕ್ಕೆ ಹೋಗಿದ್ದರು.

ಪೊಲೀಸರು ಡೆತ್ ನೋಟ್ ಅನ್ನು ವಶಪಡಿಸಿಕೊಂಡಿದ್ದು, ಅದರಲ್ಲಿ ಅರುಣ್, ಯಾರ ಹೆಸರನ್ನೂ ಬರೆದಿಲ್ಲ ಮತ್ತು ಆತ್ಮಹತ್ಯೆಗೆ ಕಾರಣ ಸಹ ನೀಡಿಲ್ಲ.


ಉದಯವಾಹಿನಿ ಚಿತ್ರ

ಆರಂಭದಲ್ಲಿ ಇದನ್ನು ಅಸ್ವಾಭಾವಿಕ ಸಾವು ಪ್ರಕರಣ ಎಂದು ದಾಖಲಿಸಲಾಗಿತ್ತು. ಆದರೆ, ಅರುಣ್ ಪೋಷಕರು ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ ನಂತರ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ. ಕಾಲೇಜಿನ ವಾಟ್ಸಾಪ್ ಗ್ರೂಪ್‌ನಲ್ಲಿ ಅವರ ಮೂವರು ಕ್ಲಾಸ್ ಮೇಟ್‌ಗಳು ತಮ್ಮ ಮಗನಿಗೆ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಕಿರುಕುಳ ತಮ್ಮ ಮಗನ ಸಾವಿಗೆ ಕಾರಣವಾಯಿತು ಎಂದು ಅವರು ದೂರಿದ್ದಾರೆ. ಮೂವರು ಕ್ಲಾಸ್ ಮೇಟ್ ಗಳು ಅರುಣ್‌ಗೆ ಒಂದು ವರ್ಷಕ್ಕೂ ಹೆಚ್ಚು ಕಾಲ ಮಾನಸಿಕ ಕಿರುಕುಳ ನೀಡಿದ್ದಾರೆ ಮತ್ತು ಅವಮಾನ ಮಾಡಿದ್ದಾರೆ ಎಂದು ಪೋಷಕರು ಆರೋಪಿಸಿದ್ದಾರೆ.

ಅರುಣ್ ವೀಡಿಯೋ ರೆಕಾರ್ಡ್ ಮಾಡಿ ಅದರಲ್ಲಿ ತನ್ನ ದುಃಖವನ್ನು ಹೇಳಿಕೊಂಡಿದ್ದು, ಅದನ್ನು ಸಾವಿಗೆ ಸ್ವಲ್ಪ ಮೊದಲು ತರಗತಿಯ ವಾಟ್ಸಾಪ್ ಗ್ರೂಪ್‌ನಲ್ಲಿ ಹಂಚಿಕೊಂಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

**ದೂರಿನ ಆಧಾರದ ಮೇಲೆ, ನಾವು ಮೂವರು ವಿದ್ಯಾರ್ಥಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 108 (ಆತ್ಮಹತ್ಯೆಗೆ ಪ್ರಚೋದನೆ) 3(5) (ಸಾಮಾನ್ಯ ಉದ್ದೇಶ) ಅಡಿಯಲ್ಲಿ ಎಫ್ ಐಆರ್ ದಾಖಲಿಸಿದ್ದೇವೆ. ಪ್ರಕರಣದ ತನಿಖೆ ನಡೆಯುತ್ತಿದೆ ಮತ್ತು ತನಿಖೆ ಆಧಾರದ ಮೇಲೆ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

## ತೆರಿಗೆ ಪಾವತಿ; ನೋಟಿಸ್ ಹಿಂಪಡೆಯಲು ಆಗ್ರಹ

• ಉದಯವಾಹಿನಿ, ಬೆಂಗಳೂರು

ಬೇಕರಿ ಕಾಂಡಿಮೆಂಟ್ಸ್ ಸೇರಿದಂತೆ ಸಣ್ಣ ವ್ಯಾಪಾರಿಗಳಿಗೆ ತೆರಿಗೆ ಪಾವತಿ ಸಂಬಂಧ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೀಡಿರುವ ನೋಟಿಸ್‌ಗಳನ್ನು ಕೂಡಲೇ ಹಿಂಪಡೆಯುವಂತೆ ಆಗ್ರಹಿಸಿ ಜುಲೈ 24ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಬೇಕರಿ, ಕಾಂಡಿಮೆಂಟ್ಸ್ ಮತ್ತು ಸಣ್ಣ ಉದ್ದಿಮೆದಾರರ ಒಕ್ಕೂಟ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಕರುಣಾಕರ ಶೆಟ್ಟಿ ಹಟ್ಟಿಯಂಗಡಿ, 'ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ಕಾಂಡಿಮೆಂಟ್ಸ್, ಬೇಕರಿ, ಹಾಲು, ತರಕಾರಿ ಅಂಗಡಿ ಸೇರಿದಂತೆ ಸಣ್ಣ ಉದ್ದಿಮೆದಾರರಿಗೆ ಜಿಎಸ್‌ಟಿ ನೋಟಿಸ್ ನೀಡಿ, ಒಂದು ವಾರದಲ್ಲಿ ಉತ್ತರಿಸುವಂತೆ ತಿಳಿಸಿದೆ. ಇದರಿಂದ ನಮ್ಮಲ್ಲಿ ಭೀತಿಯ ವಾತಾವರಣ ನಿರ್ಮಾಣವಾಗಿದೆ. ನಾಲ್ಕು ವರ್ಷದ ಬ್ಯಾಂಕ್ ವಹಿವಾಟು, ಖರೀದಿ ರಸೀದಿ, ವ್ಯಾಪಾರ-ವಹಿವಾಟಿನ ಮಾಹಿತಿ ನೀಡುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿದೆ. ಆದರೆ ನಮ್ಮ ಬಳಿ ಯಾವುದೇ ರೀತಿಯ ದಾಖಲೆಗಳಿಲ್ಲ' ಎಂದು ಮಾಹಿತಿ ನೀಡಿದರು.


ಉದಯವಾಹಿನಿ ಚಿತ್ರ

'ಒಂದು ವಾರದಲ್ಲಿ ಮಾಹಿತಿ ಸಲ್ಲಿಸಿ ಎಂದರೆ ಹೇಗೆ ನಮ್ಮವರು ವ್ಯಾಪಾರದ ಪುಸ್ತಕ ನಿರ್ವಹಣೆ ಮಾಡಿಲ್ಲ. ಇಲ್ಲಿ ಮಾಲೀಕರೇ ಕೆಲಸಗಾರರು. ನಾಳಿನ ವ್ಯಾಪಾರಕ್ಕೆ ಯಾವ ವಸ್ತುಗಳನ್ನು ತರಬೇಕು ಎಂಬುದನ್ನು ಯೋಚಿಸುತ್ತಾರೆಯೇ ಹೊರತು, ಲೆಕ್ಕ ಬರೆಯಲು ಯಾರಿಗೂ ಸಮಯವಿಲ್ಲ' ಎಂದರು.

**ನಮ್ಮ ಅಂಗಡಿಗಳಿಗೆ ಬರುವ ಶೇಕಡ 95ರಷ್ಟು ಜನ ಡಿಜಿಟಲ್ ಪಾವತಿ ಮಾಡುತ್ತಾರೆ. ವಾರ್ಷಿಕ 40 ಲಕ್ಷ ವಹಿವಾಟು ದಾಟಿರುವ ವ್ಯಾಪಾರಿಗಳಿಂದ ಲಭ್ಯವಿರುವ ದಾಖಲೆಗಳನ್ನು ಪಡೆದುಕೊಂಡು ಶೇ 1ರಷ್ಟು ರಾಜೀ ತೆರಿಗೆ ಪರಿಹಾರ ಯೋಜನೆಯಡಿ ತೆರಿಗೆ ಪಾವತಿಸಲು ಅವಕಾಶ ನೀಡಬೇಕು' ಎಂದು ಮನವಿ ಮಾಡಿದರು.**

## ವಿವಿಧ ಇಲಾಖೆಯ ಸರ್ಕಾರಿ ಅಧಿಕಾರಿಗಳಿಗೆ ಬೆದರಿಸಿ ಹಣ ವಸೂಲಿ ಮಾಡಿದ್ದ ಆರೋಪ

• ಉದಯವಾಹಿನಿ, ಬೆಂಗಳೂರು

ಲೋಕಾಯುಕ್ತ ಪೊಲೀಸರ ಹೆಸರಿನಲ್ಲಿ ವಿವಿಧ ಇಲಾಖೆಯ ಸರ್ಕಾರಿ ಅಧಿಕಾರಿಗಳಿಗೆ ಬೆದರಿಸಿ ಹಣ ವಸೂಲಿ ಮಾಡಿದ್ದ ಆರೋಪಿ ನಿಂಗಪ್ಪನ ಬಂಧನ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು, ಐಪಿಎಸ್ ಅಧಿಕಾರಿ ಶ್ರೀನಾಥ್ ಜೋಷಿಗೆ ಸೇರಿದ್ದ ಮೊಬೈಲ್ ಅನ್ನು ಗುಜರಾತ್ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್ ಎಲ್) ರವಾನಿಸಿದ್ದಾರೆ. ಆರೋಪಿ ನಿಂಗಪ್ಪ ಜತೆ ಸಂಪರ್ಕ ಹೊಂದಿರುವ ಆರೋಪ ಎದುರಿಸುತ್ತಿರುವ ಲೋಕಾಯುಕ್ತ ಎಸ್.ಪಿ ಯಾಗಿದ್ದ ಶ್ರೀನಾಥ್ ಜೋಷಿ ಅವರಿಗೆ ನೋಟಿಸ್ ನೀಡಿದ್ದ ಲೋಕಾಯುಕ್ತ ಪೊಲೀಸರು, ಜುಲೈ 15ರಂದು ವಿಚಾರಣೆ ನಡೆಸಿದ್ದರು. ಆಗ ಜೋಷಿ ಅವರ ಎರಡು ಮೊಬೈಲ್‌ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತು. ಆ 2 ಮೊಬೈಲ್‌ಗಳ ಪೈಕಿ ಒಂದು ಮೊಬೈಲ್‌ಗೆ ಹಾನಿಯಾಗಿದ್ದು, ಅದರಲ್ಲಿರುವ ದತ್ತಾಂಶ ಮರು ಸಂಗ್ರಹ ಮಾಡುವುದು ಸವಾಲಿನ ಕೆಲಸವಾಗಿದ್ದು. ಹೀಗಾಗಿ ಗುಜರಾತ್‌ನಲ್ಲಿರುವ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ.



ಅದರಲ್ಲಿರುವ ದತ್ತಾಂಶ ಮರುಸಂಗ್ರಹ ಆದ ನಂತರ, ಅದರಲ್ಲಿರುವ ದತ್ತಾಂಶದ ಆಧಾರದ ಮೇಲೆ ಜೋಷಿ ಅವರಿಗೆ ಮತ್ತೊಂದು ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ. ಮತ್ತೊಂದೆಡೆ ಆರೋಪಿ ನಿಂಗಪ್ಪ ವಿಚಾರಣೆ ನಡೆಸಲು ಕಾನೂನಿನ ತೊಡಕು ಇದ್ದು. ಇದನ್ನು ಬಗೆಹರಿಸಲು ಲೋಕಾಯುಕ್ತ ಪೊಲೀಸರು ಹೈಕೋರ್ಟ್ ಮೊರೆ ಹೋಗಿದ್ದಾರೆ.

# ಬೆಂಗಳೂರು ರಿಂಗ್ ರಸ್ತೆ ಟ್ರಾಫಿಕ್ ಸಮಸ್ಯೆಗೆ ಮಾಸ್ಟರ್ ಪ್ಲ್ಯಾನ್

## ಐಟಿ ಕಂಪನಿಗಳಿಗೆ ಕೆಲಸದ ಅವಧಿ ಬದಲಾವಣೆ, ವರ್ಕ್ ಫ್ರಂ ಹೋಂ ಸಲಹೆ ಕೊಟ್ಟ ಐಪಿಎಸ್ ಕಾರ್ತಿಕ್ ರೆಡ್ಡಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಲ್ಲಿ ಅತಿ ಹೆಚ್ಚು ಸಂಚಾರ ದಟ್ಟಣೆಗೆ ಒಳಗಾಗ್ತಿರೋದು ಹೊರ ವರ್ತುಲ ರಸ್ತೆ . ಅದರಲ್ಲೂ ಪ್ರಮುಖವಾಗಿ ಐಟಿ ಕಂಪನಿಗಳೇ ಅತಿಹೆಚ್ಚು ಇರುವ ಸಿಲ್ಕ್‌ಬೋರ್ಡ್-ಕೆಆರ್‌ಪುರಂ ವರೆಗಿನ ರಸ್ತೆಯಲ್ಲಿ ಗಂಟೆಗಟ್ಟಲೆ ವಾಹನಗಳು ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ಇದೆ. ಹೊಸದಾಗಿ ನೇಮಕವಾಗಿರುವ ಸಂಚಾರ ವಿಭಾಗದ ಬೆಂಗಳೂರು ಜಂಟಿ ಆಯುಕ್ತ ಕಾರ್ತಿಕ್ ರೆಡ್ಡಿ ಹಾಗೂ ತಂಡ ಮಾಸ್ಟರ್ ಪ್ಲ್ಯಾನ್ ಸಿದ್ಧಗೊಳಿಸಿದೆ.

ಟೆಕ್ ಕಾರಿಡಾರ್‌ನಲ್ಲಿ ಟ್ರಾಫಿಕ್ ಜಾಮ್ ಕಡಿಮೆ ಮಾಡಲು ಮೊದಲು ಆದ್ಯತೆ ನೀಡಿ ಹಲವು ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ. ಈ ಬಗ್ಗೆ ಬಿಬಿಎಂಪಿ, ಬಿಎಂಟಿಸಿ ಹಾಗೂ ಸಂಚಾರ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಲಾಗಿದೆ. ಈ ಸಭೆಯಲ್ಲಿ ಬಿಬಿಎಂಪಿ ವಲಯ ಆಯುಕ್ತರು, ಬಿಎಂಟಿಸಿ ಮುಖ್ಯ ಟ್ರಾಫಿಕ್ ವ್ಯವಸ್ಥಾಪಕರು ಮತ್ತು ಜಂಟಿ ಆಯುಕ್ತ ರೆಡ್ಡಿ ಭಾಗವಹಿಸಿದ್ದರು.

ಐಟಿ ಕಂಪನಿಗಳಿಗೆ ವಾರದಲ್ಲಿ ಒಂದು ದಿನ ವರ್ಕ್ ಫ್ರಂ ಹೋಂ ಹೊರ ವರ್ತುಲ ರಸ್ತೆ ಐಟಿ ಕಾರಿಡಾರ್ ಆಗಿದ್ದು, ಬೆಳಗ್ಗೆ 9 ರಿಂದ 10 ಗಂಟೆಯ ಅವಧಿಯಲ್ಲೇ ಅತಿಹೆಚ್ಚು ದಟ್ಟಣೆ ಉಂಟಾಗುತ್ತದೆ. ಇದನ್ನು ಕಡಿಮೆ ಮಾಡಲು ಬೆಳಗ್ಗೆ ಕೆಲಸದ ಸಮಯವನ್ನು ಬೆಳಗ್ಗೆ 7.30 ರಿಂದ ಪ್ರಾರಂಭಿಸಲು ಸೂಚಿಸಲಾಗಿದೆ. ಅಲ್ಲದೆ ಬುಧವಾರದಂದು ಒಂದು ದಿನ ವರ್ಕ್‌ಫ್ರಂ ಹೋಂ ಕೊಡಲು ಸಹ ಕೇಳಿದ್ದೇವೆ ಎಂದು ಕಾರ್ತಿಕ್ ರೆಡ್ಡಿ ಹೇಳಿದ್ದಾರೆ. ಇದರಿಂದ ಟ್ರಾಫಿಕ್ ಜಾಮ್ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದು ಎಂದು ಅಂದಾಜಿಸಲಾಗಿದೆ.

**ಸುಧಾರಿತ ಟ್ರಾಫಿಕ್ ಕ್ರಮಗಳ ಅಳವಡಿಕೆ:** ಸಂಚಾರ ದಟ್ಟಣೆಯ ರಿಯಲ್ ಟೈಂ ಪರಿಸ್ಥಿತಿ ತಿಳಿಯಲು ರಸ್ತೆಗಳಲ್ಲಿ ಕ್ಯಾಮೆರಾಗಳನ್ನು ಹಾಕಲಾಗುತ್ತದೆ. ಮೂರು ದಿನಗಳವರೆಗೆ ವಾಹನಗಳ ಒಳಹರಿವು ಮತ್ತು ಹೊರಹರಿವನ್ನು ಗಮನಿಸಲಾಗುತ್ತದೆ ಎನ್ನಲಾಗಿದೆ.

ಟ್ರಾಫಿಕ್ ಸಮಸ್ಯೆ ನಿವಾರಣೆಗೆ ಐಟಿ ಕಂಪನಿಗಳು ಮತ್ತು ಸಂಘಗಳು ಕೆಲವು ಸಲಹೆಗಳನ್ನು ನೀಡಿವೆ. ಎಲ್ಲಾ ಆರು ದಿನಗಳ ಕೆಲಸದ ದಿನಗಳಲ್ಲಿ ಕೆಲಸದ ಸಮಯವನ್ನು ಬದಲಾಯಿಸಬೇಕು. ಕಾರ್‌ಪೂಲಿಂಗ್ ಅನ್ನು ಪ್ರೋತ್ಸಾಹಿಸಬೇಕು. ಬಿಎಂಟಿಸಿ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಟೆಕ್ ಪಾರ್ಕ್ ಮಟ್ಟದಲ್ಲಿ ಶಟಲ್ ಪೂಲಿಂಗ್ ಮಾಡಬೇಕು. ಟ್ರಾಫಿಕ್ ಮಾರ್ಷಲ್‌ಗಳು ಮತ್ತು ಬೈಕ್ ಪೆಟ್ರೋಲ್ ಘಟಕಗಳನ್ನು ನಿಯೋಜಿಸಬೇಕು. ಉದ್ಯೋಗಿಗಳನ್ನು ಟ್ರಾಫಿಕ್ ವಾರ್ಡನ್‌ಗಳಾಗಿ ಕೆಲಸ ಮಾಡಲು ಪ್ರೋತ್ಸಾಹಿಸಬೇಕು ಎಂಬ ಸಲಹೆಗಳು ಕೂಡಾ ಸಂಚಾರ ಆಯುಕ್ತರ ಸಭೆಯಲ್ಲಿ ಚರ್ಚಿಸಲಾಗಿದೆ.

**ಟ್ರಾಫಿಕ್ ನಿಯಮ ಮೀರಿದರೆ ದಂಡ:** ಅಲ್ಲೆಂದರಲ್ಲಿ ಪಾರ್ಕಿಂಗ್ ಮಾಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು.



ಹೊರವರ್ತುಲ ರಸ್ತೆ ಜಂಕ್ಷನ್‌ಗಳ ಬಳಿ ಮತ್ತು ಟೆಕ್ ಕ್ಯಾಂಪಸ್‌ಗಳ ಒಳಗೆ ಪಾರ್ಕಿಂಗ್ ನಿಯಮಗಳನ್ನು ಉಲ್ಲಂಘಿಸುವ ವಾಹನಗಳನ್ನು ತಕ್ಷಣವೇ ಟೋ ಮಾಡಬೇಕು. ಬಸ್ಸುಗಳು, ಟ್ರಕ್‌ಗಳು ಅಥವಾ ಟ್ಯಾಂಕರ್‌ಗಳು ಕೆಟ್ಟು ನಿಂತರೆ ಟ್ರಾಫಿಕ್ ಜಾಮ್ ಆಗದಂತೆ ನೋಡಿಕೊಳ್ಳಲು ಯೋಜನೆಗಳನ್ನು ರೂಪಿಸಬೇಕು. ಭಾರೀ ವಾಹನಗಳ ಸಂಚಾರವನ್ನು ಪೀಕ್ ಅವರ್‌ನಲ್ಲಿ ನಿಷೇಧಿಸಬೇಕು. ಮನೆಯಿಂದ ಕೆಲಸ ಮಾಡುವ ದಿನಗಳನ್ನು ಮೊದಲೇ ತಿಳಿಸಬೇಕು, ವಿಶೇಷವಾಗಿ ಬುಧವಾರ ಮತ್ತು ಶನಿವಾರದಂದು ವರ್ಕ್ ಫ್ರಂ ಹೋಂ ನೀಡಬೇಕು ಎಂದು ಐಟಿ ಕಂಪನಿಗಳು ಕೇಳಿಕೊಂಡಿವೆ.

### ಬಸ್ ಓಡಾಟ ಹೆಚ್ಚಳಕ್ಕೆ ಕ್ರಮ

ಇದಲ್ಲದೆ ಸಭೆಯಲ್ಲಿ ಕೆಲವು ಮುಖ್ಯ ನಿರ್ದೇಶನಗಳನ್ನು ನೀಡಲಾಗಿದ್ದು, ಒಆರ್‌ಆರ್ ಸುತ್ತಮುತ್ತಲಿನ ರಸ್ತೆ ಕಾಮಗಾರಿಗಳನ್ನು ಬೇಗ ಮುಗಿಸಬೇಕು. ಪ್ರಯಾಣಿಕರಿಗೆ ಅನುಕೂಲವಾಗುವಂತೆ ಪ್ರಮುಖ ಜಂಕ್ಷನ್‌ಗಳ ಬಳಿ ಬಸ್ ನಿಲ್ದಾಣಗಳನ್ನು ನಿರ್ಮಿಸಬೇಕು ಎಂದು ಸಲಹೆ ಕೊಡಲಾಗಿದೆ. ಇನ್ನು ಬಿಎಂಟಿಸಿ ಟೆಕ್ ಪಾರ್ಕ್ ಉದ್ಯೋಗಿಗಳಿಗೆ ಎಸಿ ಬಸ್‌ಗಳನ್ನು ನಿಯೋಜಿಸಲು ಸಲಹೆ ಕೊಟ್ಟಾಗ ಇದನ್ನು ಒಪ್ಪಿಕೊಂಡಿದೆ. ಅಲ್ಲದೆ ಕಂಪನಿಗಳಿಗೆ ಉದ್ಯೋಗಿಗಳಿಗಾಗಿ ಖಾಸಗಿ ವಾಹನಗಳ ಬದಲು ಶಟಲ್ ಬಸ್‌ಗಳನ್ನು ಬಾಡಿಗೆಗೆ ಪಡೆಯಲು ಪ್ರೋತ್ಸಾಹಿಸಲಾಗಿದೆ. ಈ ಎಲ್ಲಾ ಕ್ರಮಗಳನ್ನು ಕಂಪನಿಗಳ ಜೊತೆ ಚರ್ಚಿಸಲು ಪರಸ್ಪರ ಸಂಪರ್ಕಿಸಲು ಯೋಜನೆಗಳು ನಡೆಯುತ್ತಿವೆ.

**ಗ್ರೇಟರ್ ಬೆಂಗಳೂರು ಐಟಿ ಮತ್ತು ಕಂಪೆನಿಗಳ ಸಂಘದ ಉಪಾಧ್ಯಕ್ಷ ಕೃಷ್ಣ ಕುಮಾರ್ ಗೌಡ ಅವರು ಮಾತನಾಡಿ, ಬೆಂಗಳೂರಿನ ಟೆಕ್ ವಲಯಗಳಲ್ಲಿ ಟ್ರಾಫಿಕ್ ಸಮಸ್ಯೆ ತುಂಬಾ ಹೆಚ್ಚಾಗಿದೆ. ನಾವು ನಮ್ಮ ಕೈಲಾದಷ್ಟು ಸಹಾಯ ಮಾಡುತ್ತೇವೆ. ಆದರೆ ಸರ್ಕಾರವು ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಮತ್ತು ಮೂಲಸೌಕರ್ಯಗಳನ್ನು ಸರಿಪಡಿಸಬೇಕು. ಪ್ರತಿಯೊಂದು ಕಂಪನಿಯು ಕೆಲಸದ ಸಮಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ವರ್ಕ್ ಫ್ರಾಂ ಹೋಂ ಮಾರ್ಗಸೂಚಿಗಳನ್ನು ಸರಿಯಾಗಿ ತಿಳಿಸಬೇಕು ಎಂದು ಅವರು ಹೇಳಿದ್ದಾರೆ.**

# ಖರೀದಿ ಪ್ರಮಾಣ, ಅವಧಿ ವಿಸ್ತರಣೆಗೆ ರೈತರ ಆಗ್ರಹ

## ಬೆಂಗಳೂರಿನಲ್ಲಿ ಕೃಷಿ ಸಚಿವ ಎನ್.ಚಲುವನಾರಾಯಣಸ್ವಾಮಿ ನೇತೃತ್ವದ ಸಭೆಯಲ್ಲಿ ಚರ್ಚೆ

• ಉದಯವಾಹಿನಿ, ಕೋಲಾರ

ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಮಾವು ಮಾರಾಟಕ್ಕೆ ನೋಂದಣಿ ಮಾಡಿಕೊಳ್ಳಲು ಜುಲೈ 24 ಕಡೆಯ ದಿನವಾಗಿದ್ದು, ಅವಧಿ ವಿಸ್ತರಣೆಗೆ ಜಿಲ್ಲೆಯ ಮಾವು ಬೆಳೆಗಾರರು, ರೈತ ಸಂಘಟನೆಗಳ ಮುಖಂಡರು ಆಗ್ರಹಿಸಿದ್ದಾರೆ. ತೋಟದಲ್ಲಿ ಮಾವು ಫಸಲು ಇದ್ದು ಕಟಾವು ಹಾಗೂ ಸಾಗಣೆಗೆ ಸಮಯಾವಕಾಶ ನೀಡುವಂತೆ ಕೋರಿದ್ದಾರೆ. ಜೊತೆಗೆ ಖರೀದಿ ಪ್ರಮಾಣ ಹೆಚ್ಚಳಕ್ಕೂ ಆಗ್ರಹಿಸಿದ್ದಾರೆ.ಮಾವು ಖರೀದಿ ಅವಧಿ ವಿಸ್ತರಣೆ ಹಾಗೂ ಪ್ರಮಾಣ ಹೆಚ್ಚಳಕ್ಕೆ ಈಗಾಗಲೇ ಸರ್ಕಾರಕ್ಕೆ ಜಿಲ್ಲಾಡಳಿತ ಪ್ರಸ್ತಾವ ಸಲ್ಲಿಸಿದೆ. ಬೆಂಗಳೂರಿನಲ್ಲಿ ಕೃಷಿ ಸಚಿವ ಎನ್.ಚಲುವನಾರಾಯಣಸ್ವಾಮಿ ನೇತೃತ್ವದ ಸಭೆಯಲ್ಲಿ ಚರ್ಚೆ ನಡೆದು ಕಾಲಾವಧಿ ವಿಸ್ತರಣೆಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆಯಲಾಗಿದೆ. ಆಗಸ್ಟ್ 12ರವರೆಗೆ ವಿಸ್ತರಣೆ ಮಾಡುವಂತೆ ಸಚಿವರು ಕೋರಿದ್ದಾರೆ. ಅಧಿಕಾರಿಗಳು ವಿಸ್ತರಣೆಯ ಆಶಾಭಾವದಲ್ಲಿದ್ದಾರೆ. ಆದರೆ, ರೈತರು ಮಾತ್ರ ಆತಂಕಗೊಂಡಿದ್ದು, ಶ್ರೀನಿವಾಸಪುರದ ಎಂಪಿಎಂಸಿ ಕೌಂಟರ್‌ಗಳಲ್ಲಿ ದಟ್ಟಣೆ ಕಂಡುಬಂತು.

ಹೆಚ್ಚಿನ ರೈತರು ನೋಂದಣಿ ಮಾಡಿಸಲು ಹಾಗೂ ಮಾರಾಟದ ದಾಖಲೆ ಸಲ್ಲಿಸಲು ಪ್ರತ್ಯೇಕ ಕೌಂಟರ್‌ಗಳಲ್ಲಿ ಸರತಿ ಸಾಲಿನಲ್ಲಿ ನಿಂತಿದ್ದರು. ಜೊತೆಗೆ ಸರ್ವರ್ ಸಮಸ್ಯೆ ಕಾರಣ ನೋಂದಣಿಗೆ ಸ್ವಲ್ಪ ತೊಂದರೆಯೂ ಆಯಿತು.


ಉದಯವಾಹಿನಿ ಚಿತ್ರ

ಮಾವು ಧಾರಣೆ ಕುಸಿತದಿಂದ ಸಂಕಷ್ಟದಲ್ಲಿರುವ ಬೆಳೆಗಾರರಿಗೆ ಸರ್ಕಾರವು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಕೆ.ಜಿಗೆ 4 ಬೆಂಬಲ ಬೆಲೆ ಕೊಡುತ್ತಿದೆ. ಈ ಯೋಜನೆಯಡಿ ಪ್ರತಿ ಎಕರೆಗೆ 20 ಕ್ವಿಂಟಲ್‌ನಂತೆ ಗರಿಷ್ಠ 5 ಎಕರೆಗೆ 100 ಕ್ವಿಂಟಲ್‌ವರೆಗೆ ಮಿತಿಗೊಳಿಸಿ ವ್ಯತ್ಯಾಸದ ಮೊತ್ತವನ್ನು ಪಾವತಿ ಮಾಡಲಾಗುತ್ತಿದೆ.

ಖರೀದಿ ಪ್ರಮಾಣ ಹೆಚ್ಚಿಸಲೂ ಜಿಲ್ಲಾಡಳಿತವು ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವ ಕಳಿಸಿದೆ. ನೀಲಂ ಮತ್ತು ತೋತಾಪುರಿ ತಳಿಯ ಮಾವನ್ನು ರೈತರು ಹೆಚ್ಚಾಗಿ ಮಾರಾಟ ಮಾಡುತ್ತಿದ್ದಾರೆ. ಸದ್ಯ ಮಾರುಕಟ್ಟೆಯಲ್ಲಿ ಕೆ.ಜಿ ನೀಲಂ ತಳಿಗೆ ★ 3ರಿಂದ 4. ತೋತಾಪುರಿಗೆ 5ರಿಂದ 7 ದರ ಸಿಗುತ್ತಿದೆ. ಜೊತೆಗೆ ಬೆಂಬಲ ಬೆಲೆ ಲಭ್ಯವಾಗುತ್ತದೆ. ಮಾರುಕಟ್ಟೆಯಲ್ಲಿ ಕೆ.ಜಿ ಮಾವಿಗೆ 16ಕ್ಕಿಂತ ಹೆಚ್ಚು ದರ ಲಭಿಸಿದರೆ ಬೆಂಬಲ ಬೆಲೆ ಸಿಗಲ್ಲ.

ಈವರೆಗೆ ಸುಮಾರು 14,500 ಮಾವು ಬೆಳೆಗಾರರು ನೋಂದಣಿ ಮಾಡಿಕೊಂಡಿದ್ದು, ಸುಮಾರು ಸುಮಾರು 9 ಸಾವಿರ ಮಂದಿ ಬಿಲ್ ಸಲ್ಲಿಸಿದ್ದಾರೆ. ಕೆಲವರು ನೋಂದಣಿ ಮಾಡಿಕೊಂಡಿದ್ದು, ಬಿಲ್ ಸಲ್ಲಿಸಿಲ್ಲ. ಹಲವು ರೈತರು ತಮ್ಮ ತೋಟದಲ್ಲಿನ ಮಾವು ಕಟಾವು ಮಾಡಬೇಕಿದೆ. ಅದನ್ನು ಮಾರುಕಟ್ಟೆಗೆ ತರಲು ಸಮಯಬೇಕಿದೆ. ಹೀಗಾಗಿ, ಅನುದಾನ ವಾಪಸ್ ಹೋಗುವ ಆತಂಕ ವ್ಯಕ್ತಪಡಿಸಿ ಕಾಲಾವಕಾಶ ವಿಸ್ತರಿಸಲು ಕೋರಿದ್ದಾರೆ.

> ರೈತರು ಜುಲೈ 24ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ನೋಂದಣಿಗೆ ಯಾವುದೇ ಸಮಸ್ಯೆ ಇಲ್ಲ. ಕೌಂಟರ್ ಹೆಚ್ಚು ಮಾಡಲು ಸೂಚಿಸಲಾಗಿದೆ. ದಿನಾಂಕ ವಿಸ್ತರಣೆಗೆ ಪ್ರಸ್ತಾವ ಸಲ್ಲಿಸಲಾಗಿದೆ
>
> ಎಸ್.ಆರ್.ಕುಮಾರಸ್ವಾಮಿ ಉಪನಿರ್ದೇಶಕ
> ತೋಟಗಾರಿಕೆ ಇಲಾಖೆ

> ''ನಾನು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ನೋಂದಣಿ ಮಾಡಿಕೊಳ್ಳಲು ಹಾಗೂ ದಾಖಲಾತಿ ಸಲ್ಲಿಸಲು ಯಾವುದೇ ಸಮಸ್ಯೆ ಆಗಿಲ್ಲ. ಗಡುವು ಮುಗಿಯುವುದರೊಳಗೆ ರೈತರು ಸಮರ್ಪಕ ದಾಖಲೆ ಸಲ್ಲಿಸಿ ಬೇಗನೇ ನೋಂದಣಿ ಮಾಡಿಕೊಂಡು, ಬಿಲ್ ನೀಡಬೇಕು. ಅವಧಿ ವಿಸ್ತರಣೆ ಆಗುತ್ತೋ ಇಲ್ಲವೋ ಎಂಬುದು ಖಚಿತವಾಗಿಲ್ಲ' ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಎಸ್.ಆರ್. ಕುಮಾರಸ್ವಾಮಿ 'ತಿಳಿಸಿದರು.

'ಒಂದು ಎಕರೆಯಲ್ಲಿ ಸುಮಾರು 40ರಿಂದ 50 ಕ್ವಿಂಟಲ್ ಮಾವಿನ ಫಸಲು ಬರುತ್ತದೆ. ಆದರೆ, ಸರ್ಕಾರ ಬೆಂಬಲ ಬೆಲೆಯಡಿ ಎಕರೆಗೆ 2 ಟನ್ ಮಾವು ಮಾತ್ರ ಖರೀದಿ ಮಾಡುತ್ತಿದೆ. ಇದರಿಂದ ನಮಗೆ ನಷ್ಟವಾಗಿದೆ. ಪ್ರಮಾಣ ಹೆಚ್ಚಿಸಬೇಕು' ಎಂದು ಮಾವು ಬೆಳೆಗಾರ ತೊಟ್ಲಿ ರಮೇಶ್ ಮನವಿ ಮಾಡಿದರು.

ಬೆಂಬಲ ಬೆಲೆ ಯೋಜನೆಯಡಿ ಎಪಿಎಂಸಿಯಲ್ಲಿ ಮಾರಾಟವಾದ ಉತ್ಪನ್ನದ ಧಾರಣೆಯ ಆಧಾರದ ಮೇಲೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲಾಗುತ್ತದೆ. ಸರ್ಕಾರದ ಮಾರ್ಗಸೂಚಿಯನ್ವಯ ರೈತರು ಮಾವು ಮಾರಾಟಕ್ಕೂ ಮೊದಲು ನೋಂದಣಿ ಮಾಡಿಕೊಳ್ಳಬೇಕು.

# ರಂಗನಾಥ ಬೆಟ್ಟದಲ್ಲಿ ಅವ್ಯವಸ್ಥೆ ಸರಿಪಡಿಸಲು ಒತ್ತಾಯ

• ಉದಯವಾಹಿನಿ, ಕುಣಿಗಲ್

ಬೆಟ್ಟದ ರಂಗನಾಥ ದೇವಾಲಯಕ್ಕೆ ಶ್ರಾವಣದಲ್ಲಿ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ.

ಸುಮಾರು ವರ್ಷಗಳಿಂದ ಅವ್ಯವಸ್ಥೆ ಜತೆಗೆ ವಿವಾದಿತ ಕೇಂದ್ರವಾಗಿರುವ ಕ್ಷೇತ್ರದಲ್ಲಿ ಭಕ್ತರ ಅನುಕೂಲಕ್ಕೆ ತಾಲ್ಲೂಕು ಆಡಳಿತ ಕ್ರಮ ತೆಗೆದುಕೊಳ್ಳಲು ಭಕ್ತರು ಮನವಿ ಮಾಡಿದ್ದಾರೆ. ದೇವಾಲಯ ವಿವಾದಿತ ಕೇಂದ್ರವಾಗಿ ಗಮನ ಸೆಳೆದಿದೆ. ಅರ್ಚಕರ ಗುಂಪಿನಲ್ಲಿ ಹೊಡೆದಾಟ ನಡೆದು ಪೊಲೀಸ್ ಠಾಣೆ ಮೆಟ್ಟಿಲೇರಿದ ಪ್ರಸಂಗವೂ ನಡೆದಿತ್ತು. ದೇವಾಲಯದ ಹುಂಡಿ ಕಳವಿನ ಪ್ರಸಂಗ ಹೆಚ್ಚಾಗಿದ್ದು, ಕಳೆದ ವರ್ಷ ನಾಲ್ಕು ಬಾರಿ ಹುಂಡಿ ಕಳವು ನಡೆದಿತ್ತು. ಬೆಟ್ಟದ ಮೆಟ್ಟಿಲ ಮುಂಭಾಗದಲ್ಲಿ ವಿಷ್ಣುಮೂರ್ತಿ ಇದ್ದು, ಸಮೀಪದ ಗ್ರಾಮದ ಕಿಡಿಗೇಡಿಗಳು ಭಗ್ನ ಮಾಡಿದ್ದರು. ಹುಂಡಿ ಕಳವು ತಡೆಯಲು ದೇವಾಲಯದ ಪಕ್ಕದಲ್ಲಿ ಕೊಠಡಿ ನಿರ್ಮಿಸಿ ಸಿಸಿ ಕ್ಯಾಮರಾ ಅಳವಡಿಸಿದ್ದರೂ ಅದರ ಸಂಪರ್ಕ ತೆರವುಗೊಳಿಸಿ ಕನ್ನ ಕೊರೆದು ಹುಂಡಿ ಕಳವು ನಡೆದಿತ್ತು. ಇದರ ನಿಯಂತ್ರಣಕ್ಕೆ ಸಂಬಂಧಪಟ್ಟವರು ಗಮನಹರಿಸಿಲ್ಲ ಎಂದು ರಂಗಸ್ವಾಮಿ, ನಾರಾಯಣ ದೂರಿದ್ದಾರೆ.


ಉದಯವಾಹಿನಿ ಚಿತ್ರ

ಬೆಟ್ಟದಲ್ಲಿ ಅಧಿಕೃತ ಮತ್ತು ಅನಧಿಕೃತ ಅರ್ಚಕರ ನಡುವೆ ಪೈಪೋಟಿ ನಡೆಯುತ್ತಿದೆ.

ಶ್ರಾವಣ ಮಾಸದ ಪೂಜೆ ಸಮಯದಲ್ಲಿ ದೇವರಿಗೆ ಅಭಿಷೇಕ ಮಾಡಿಸುವ ಭಕ್ತರ ಸಂಖ್ಯೆ ಹೆಚ್ಚಾಗಿದೆ. ನಿಗದಿತ ಸಮಯದಲ್ಲಿ ಮಾತ್ರ ಅಭಿಷೇಕ ಮಾಡುವ ಮೂಲಕ ಭಕ್ತರ ಭಾವನೆಗಳಿಗೆ ಸ್ಪಂದಿಸುವ ಕಾರ್ಯವನ್ನು ಅಧಿಕಾರಿಗಳು ಮಾಡಬೇಕು ಎಂದು ಯತೀಶ್ ಒತ್ತಾಯಿಸಿದರು. ರಂಗಸ್ವಾಮಿ ಬೆಟ್ಟದ ಅವ್ಯವಸ್ಥೆಗಳ ಬಗ್ಗೆ ಗಮನಹರಿಸಿರುವ ಶಾಸಕ ಡಾ.ರಂಗನಾಥ ಈಚೆಗೆ ಬೆಂಗಳೂರಿನಲ್ಲಿ ಅರ್ಚಕ ವರ್ಗದ ಸಭೆ ನಡೆಸಿ, ಶ್ರಾವಣ ಮಾಸದಲ್ಲಿ ಭಕ್ತರ ಭಾವನೆಗಳಿಗೆ ಧಕ್ಕೆ ಬರದಂತೆ, ಅವ್ಯವಸ್ಥೆಯಾಗದಂತೆ ಕಾರ್ಯನಿರ್ವಹಿಸಲು ಸೂಚನೆ ನೀಡಿದ್ದಾರೆ.

ಅವ್ಯವಸ್ಥೆಯಾದರೆ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದ್ದಾರೆ.


> ಶ್ರಾವಣ ಮಾಸದ ಶನಿವಾರ ಮತ್ತು ಭಾನುವಾರ ಬರುವ ಭಕ್ತರಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲು ಕಂದಾಯ, ಮುಜರಾಯಿ, ಪೊಲೀಸ್ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕಿದೆ. ದಾನಿಗಳು ಮತ್ತು ಭಕ್ತರಿಂದ ಸಂಗ್ರಹಿಸಿದ ಹಣ ಮತ್ತು ಚಿನ್ನ, ಬೆಳ್ಳಿ ವಸ್ತುಗಳಿಗೆ ದಾಖಲೆಗಳೇ ಇಲ್ಲದಾಗಿವೆ ಎಂದು ರಾಮಕೃಷ್ಣ ಹೇಳಿದರು.

# ಕಂದಾಯ ಗ್ರಾಮ ರಚನೆಗೆ ಚಾಲನೆ

• ಉದಯವಾಹಿನಿ, ತುಮಕೂರು

ಜಿಲ್ಲೆಯಲ್ಲಿ ಹೊಸದಾಗಿ ಕಂದಾಯ ಗ್ರಾಮ, ಉಪಗ್ರಾಮ, ಬಡಾವಣೆ ರಚನೆ ಬಗ್ಗೆ ಒಂದು ವಾರದಲ್ಲಿ ಪ್ರಸ್ತಾವ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಕಂದಾಯ ಇಲಾಖೆ ಅಧಿಕಾರಿಗಳಿಗೆ ಇಲ್ಲಿ ನಿರ್ದೇಶಿಸಿದರು. ಕಂದಾಯ ಇಲಾಖೆ, ಜಿಲ್ಲಾ ಪಂಚಾಯಿತಿ, ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಸಹಯೋಗದಲ್ಲಿ ಕಂದಾಯ ಗ್ರಾಮ, ಉಪಗ್ರಾಮ ಹಾಗೂ ಬಡಾವಣೆ ರಚನೆ ಸಂಬಂಧ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

50ಕ್ಕೂ ಹೆಚ್ಚಿನ ಸಂಖ್ಯೆಯ ಮನೆಗಳು ಅಥವಾ 250ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದ್ದರೆ ಕಂದಾಯ ಗ್ರಾಮವನ್ನಾಗಿ ಗುರುತಿಸಬೇಕು. ಇಂತಹ ಗ್ರಾಮ ಮೂಲ ಗ್ರಾಮದಿಂದ 1 ಕಿ.ಮೀ ಅಂತರದಲ್ಲಿ ಇರಬೇಕು. 10ಕ್ಕೂ ಅಧಿಕ, 50ಕ್ಕಿಂತ ಕಡಿಮೆ ಮನೆಗಳನ್ನು ಹೊಂದಿರುವ ಹಾಗೂ ಕಂದಾಯ ಗ್ರಾಮವಾಗಲು ಅರ್ಹವಲ್ಲದ ಜನವಸತಿ ಪ್ರದೇಶವನ್ನು ಉಪ ಗ್ರಾಮವನ್ನಾಗಿ ಪರಿಗಣಿಸಿ ಪ್ರಸ್ತಾವ ಸಲ್ಲಿಸಬೇಕು ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

ಕಂದಾಯ ಇಲಾಖೆ ಆಯುಕ್ತಾಲಯದ ತಹಶೀಲ್ದಾರ್ ಗಣಪತಿಶಾಸ್ತ್ರಿ, ಕಂದಾಯ ಗ್ರಾಮ ರಚನೆಯ ಕಾಯ್ದೆ, ನಿಯಮ, ಉಪ ಗ್ರಾಮಗಳಿಗಿರಬೇಕಾದ ಅರ್ಹತೆ, ಪ್ರಸ್ತಾವ ತಯಾರಿಕೆ, ಕಂದಾಯ ಗ್ರಾಮಗಳನ್ನಾಗಿ ಮಾಡುವ ಮುನ್ನ ಅಧಿಸೂಚನೆ, ಹಕ್ಕುಪತ್ರ ನೀಡಿಕೆ, ಹಕ್ಕುಪತ್ರ ತಂತ್ರಾಂಶ ನಿರ್ವಹಣೆ, ಹಕ್ಕುಪತ್ರ ತಿದ್ದುಪಡಿ ಬಗ್ಗೆ ಮಾಹಿತಿ ನೀಡಿದರು.

# ಶಾಸಕರ ಮೇಲಿನ ಇಡಿ ದಾಳಿ, ಮುನಿರಾಜುಗೆ, ಬಿಜೆಪಿಗೆ ಸಂಬಂಧ ಇಲ್ಲ

• ಉದಯವಾಹಿನಿ, ಬಾಗೇಪಲ್ಲಿ

'ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಮೇಲಿನ ಇಡಿ ದಾಳಿಗೂ, ಬಿಜೆಪಿ ರಾಜ್ಯ ಕಾರ್ಯದರ್ಶಿ ಸಿ.ಮುನಿರಾಜು, ಬಿಜೆಪಿ ಮುಖಂಡರಿಗೆ ಸಂಬಂಧ ಇಲ್ಲ. ವಿನಾಃಕಾರಣ ಸಿ.ಮುನಿರಾಜು ಮೇಲೆ ಶಾಸಕರು ಸುಳ್ಳು ಆರೋಪ ಹೊರಿಸಿ ಪ್ರಕರಣ ದಾಖಲಿಸಿರುವುದು ರಾಜಕೀಯ ದುರುದ್ದೇಶ' ಎಂದು ಬಿಜೆಪಿ ಮಂಡಲ ಅಧ್ಯಕ್ಷ ಆರ್.ಪ್ರತಾಪ್ ಆರೋಪಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 2023ರ ವಿಧಾನಸಭಾ ಚುನಾವಣೆಯಲ್ಲಿ ಕ್ಷೇತ್ರದಿಂದ ಶಾಸಕರು ಸಲ್ಲಿಸಿದ ನಾಮಪತ್ರದ ಜೊತೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಕೆಲವು ದೋಷ ಇರುವುದಾಗಿ ಮತ್ತು ಅಸ್ತಿಯನ್ನು ಮರೆ ಮಾಚಿರುವುದಾಗಿ ಸಿ.ಮುನಿರಾಜು ಹೈಕೋರ್ಟ್‌ನಲ್ಲಿ ದಾವೆ ಹೂಡಿರುವುದು ನಿಜ. ಆದರೆ ವಿದೇಶಗಳಲ್ಲಿ ಹೂಡಿಕೆ, ಬ್ಯಾಂಕ್ ಖಾತೆ ಹೊಂದಿದ್ದಾರೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಸಿ.ಮುನಿರಾಜು ಆಗಲಿ, ಬಿಜೆಪಿ ಮುಖಂಡರಾಗಲಿ ನಕಲಿ ದಾಖಲೆ ಸೃಷ್ಟಿ ಮಾಡಿಲ್ಲ. ನಾವು ಇಡಿಗೆ ದಾಖಲೆ ನೀಡಿಲ್ಲ' ಎಂದರು.


ಉದಯವಾಹಿನಿ ಚಿತ್ರ

ಸುಬ್ಬಾರೆಡ್ಡಿ ಮೇಲೆ ಇಡಿ ದಾಳಿಗೂ, ನಮಗೆ ಸಂಬಂಧ ಇಲ್ಲ. ವಿನಾಃಕಾರಣ ರಾಜಕೀಯ ದುರುದ್ದೇಶದಿಂದ ಸಿ.ಮುನಿರಾಜು ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿರುವುದು ಖಂಡನೀಯ' ಎಂದರು. ಪೊಲೀಸರು ಶಾಸಕರ ಅಣತಿಯಂತೆ ವರ್ತಿಸಿದ್ದಾರೆ.

ಇಡಿಯಲ್ಲಿ ಶಾಸಕರ ಮೇಲೆ ತನಿಖೆ ಮಾಡಲು ಆರಂಭಿಸಿದ್ದಾರೆ. ಇಡಿಯ ಸತ್ಯಾಸತ್ಯತೆ ಹೊರಬರುವವರಿಗೂ ಹಾಗೂ ಚುನಾವಣಾ ಸಿ.ಮುನಿರಾಜು ಹೈಕೋರ್ಟ್‌ನಲ್ಲಿ ದಾವ ಹೂಡುವ ಸಂದರ್ಭದಲ್ಲಿ ಶಾಸಕರು ಪ್ರಕರಣ ದಾಖಲು ಮಾಡಿಲ್ಲ. ಇದೀಗ ಇಡಿ ದಾಳಿ ಮಾಡಿದ ನಂತರ ಪ್ರಕರಣ ದಾಖಲು ಮಾಡಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು. ಇಡಿ ದಾಳಿಗೆ ಸಿ.ಮುನಿರಾಜು ಅವರೇ ಕಾರಣ ಎಂದು ಹೇಳಲು ತಮ್ಮ ಬಳಿ ದಾಖಲೆ ಇದ್ದರೆ ಬಿಡುಗಡೆ ಮಾಡಲಿ. ಧರ್ಮಸ್ಥಳದ ಮಂಜುನಾಥಸ್ವಾಮಿರವರ ಮುಂದೆ ಪ್ರಮಾಣ ಮಾಡಲಿ ಎಂದು ಶಾಸಕ ಎಸ್.ಎನ್.ಸುಬ್ಬಾರೆಡ್ಡಿಗೆ ಬಹಿರಂಗ ಸವಾಲು ಹಾಕಿದರು. ಸುಳ್ಳು ಪ್ರಕರಣವನ್ನು ವಾಪಸ್ ಪಡೆಯಬೇಕು. ಇಲ್ಲವಾದರೆ ಬಿಜೆಪಿ ಮುಖಂಡರು, ಕಾರ್ಯಕರ್ತರು ನೇತೃತ್ವದಲ್ಲಿ ಬೀದಿಗಿಳಿದು ಹೋರಾಟ ಮಾಡುತ್ತೇವೆ ಎಂದು ತಿಳಿಸಿದರು.

ಗುಡಿಬಂಡೆ ಬಿಜೆಪಿ ಮಂಡಲ ಅಧ್ಯಕ್ಷ ಗೆಂಗಿರೆಡ್ಡಿ, ಗುಜೇಪಲ್ಲಿ ಸುಧಾಕರರೆಡ್ಡಿ, ಚೇಳೂರು ಆಂಜನೇಯರೆಡ್ಡಿ, ರಂಗಾರೆಡ್ಡಿ, ಮಧು, ಲೋಕೇಶಕುಮಾರ್, ರಾಮಪ್ಪ, ಸುರೇಶ್, ಅಶ್ವಥರೆಡ್ಡಿ, ರಮೇಶ್, ಮಂಜುಳ, ರೂಪ, ನಂದಿನಿ, ಕೃಷ್ಣವೇಣಿ, ಗಂಗರತ್ನಮ್ಮ, ಗಾಯಿತ್ರಿ, ರಾಧ ಇದ್ದರು.

> ಶಾಸಕರು ತಮ್ಮ ಅಕ್ರಮ ಆಸ್ತಿ ಉಳಿಸಲು, ತಪ್ಪುಗಳನ್ನು ಮುಚ್ಚಿಡಲು ಪೊಲೀಸರನ್ನು ಬಳಕೆ ಮಾಡಿಕೊಂಡು ವಿನಾಃಕಾರಣ ಮುನಿರಾಜು ಹಾಗೂ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ. ಶಾಸಕರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು.
>
> ಬಿಜೆಪಿ ಎಸ್‌ಟಿ ಮೋರ್ಚಾ
> ಜಿಲ್ಲಾ ಮುಖಂಡ ವೆಂಕಟೇಶ್

# ಗುಡಿಸಲು ವಾಸ: ಮಹಿಳಾ ಆಯೋಗ ಅಸಮಾಧಾನ

• ಉದಯವಾಹಿನಿ, ತುಮಕೂರು

ತಾಲ್ಲೂಕಿನ ಸೀನಪ್ಪನಹಳ್ಳಿ ಜನತಾ ಕಾಲೊನಿಯಲ್ಲಿ ಜನರು ಮನೆ ಇಲ್ಲದೆ ಇನ್ನೂ ಗುಡಿಸಲಿನಲ್ಲಿ ವಾಸಿಸುತ್ತಿರುವುದಕ್ಕೆ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಅಸಮಾಧಾನ ವ್ಯಕ್ತಪಡಿಸಿದರು.

ಸೀನಪ್ಪನಹಳ್ಳಿ ಜನತಾ ಕಾಲೊನಿಗೆ ಭೇಟಿ ನೀಡಿ ಪರಿಶೀಲಿಸಿದರು. ಮಹಿಳೆಯರು ಹೊರಗಡೆ ಬಟ್ಟೆ ಕಟ್ಟಿಕೊಂಡು ಮರೆಯಲ್ಲಿ ಸ್ನಾನ ಮಾಡುತ್ತಿರುವುದು ಶೋಚನೀಯ. ಕೂಡಲೇ ನಿವೇಶನ ಮಂಜೂರು ಮಾಡಿ ಆಶ್ರಯ ಮನೆ ನಿರ್ಮಾಣಕ್ಕೆ ಅಗತ್ಯ ಕ್ರಮ ವಹಿಸುವಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಸಿರಿವರ, ನಾಗವಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸಿಬ್ಬಂದಿ ಕೊರತೆ ಬಗ್ಗೆ ಮಾಹಿತಿ ಪಡೆದುಕೊಂಡರು. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ತಾಲ್ಲೂಕಿನ ರಾಯಪುರ ಗ್ರಾಮದಲ್ಲಿ ಸಾಯಿ ಸೇವಾಶ್ರಮ ಸೇವಾ ಸಂಸ್ಥೆ ಏರ್ಪಡಿಸಿದ್ದ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿದರು.


ಉದಯವಾಹಿನಿ ಚಿತ್ರ

**ಆರೋಗ್ಯ ತಪಾಸಣಾ ಶಿಬಿರ**

ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಮತ್ತು ಮಕ್ಕಳ ನೆರವಿಗಾಗಿ ಕಾರ್ಯನಿರ್ವಹಿಸುತ್ತಿರುವ ಸಹಾಯವಾಣಿ 1098, 112 ಮತ್ತು 181ರ ಬಗ್ಗೆ ಹೆಚ್ಚಿನ ಪ್ರಚಾರ ಮಾಡಬೇಕು. ಇಂತಹ ಸಂದರ್ಭದಲ್ಲಿ ಮಹಿಳಾ ಸಾಂತ್ವನ ಕೇಂದ್ರಗಳ ನೆರವು ಪಡೆದುಕೊಳ್ಳಬೇಕು ಎಂದು ಸಲಹೆ ಮಾಡಿದರು. ನಾಗವಲ್ಲಿ ಲಕ್ಕೇನಹಳ್ಳಿಯ ಸ್ಫೂರ್ತಿಧಾಮ ಸೇವಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ವೈದ್ಯಕೀಯ ತಪಾಸಣಾ ಶಿಬಿರ ಉದ್ಘಾಟಿಸಿದರು.

# ಜನ ಸಂವೇದನೆಯ ಹೊಸಗನ್ನಡ ಸಾಹಿತ್ಯ: ನಂಜಯ್ಯ

• ಉದಯವಾಹಿನಿ, ಮೈಸೂರು

ಮಹಿಳೆಯರು, ದಲಿತರು, ಆದಿವಾಸಿಗಳು ಹಾಗೂ ಹಿಂದುಳಿದ ಜನ ಸಮುದಾಯದ ಸಂವೇದನೆಯು ಹೊಸಗನ್ನಡ ಸಾಹಿತ್ಯದಲ್ಲಿ ಜೀವಂತವಾಗಿದೆ' ಎಂದು ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು ಹೇಳಿದರು.

ಮಾನಸ ಗಂಗೋತ್ರಿಯ ಪ್ರಸಾರಾಂಗದಲ್ಲಿ ರಾಜ್ಯ ಜಾನಪದ ಸಂಶೋಧಕರ ಒಕ್ಕೂಟವು ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೊಂಬಯ್ಯ ಹೊನ್ನಲಗೆರೆ ಮತ್ತು ಶ್ರೀನಾಥ ಬಿ.ಕಾಂಬಳೆ ಅವರ 'ಹೊಸಗನ್ನಡ ಸಾಹಿತ್ಯ ಚರಿತ್ರೆ: ಪಂಥಗಳು' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಹೊಸಗನ್ನಡ ಸಾಹಿತ್ಯ ಪರಂಪರೆಯ ಹೂರಣವೆ ವಸ್ತು ವೈವಿಧ್ಯತೆಯಾಗಿದೆ.

ದನಿ ಇಲ್ಲದ ಎಲ್ಲಾ ಸ್ತರದ ಜನರನ್ನು ಅದು ಮುಖಾಮುಖಿಯಾಗಿಸಿದೆ.

ನಾಡು ನುಡಿಯ ಅಭಿಮಾನ, ಚಳವಳಿ, ಪ್ರತಿಭಟನೆ, ವೈಜ್ಞಾನಿಕ, ರಾಜಕೀಯ ಮತ್ತು ಸಾಮಾಜಿಕ ಕೊಡುಗೆಗಳನ್ನು ಈ ಕೃತಿಯಲ್ಲೂ ನೋಡಬಹುದು ಎಂದರು. ಹಳಗನ್ನಡದ ವಸ್ತು, ಆಶಯ ರಾಜಪ್ರಭುತ್ವದ ಮಹತ್ವ ಸಾರಿದರೆ ಹೊಸಗನ್ನಡದ್ದು ಜನಪ್ರಭುತ್ವವಾದಿಯಾಗಿದೆ ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

> ಲೇಖಕರಾದ ಶ್ರೀನಾಥ್ ಬಿ.ಕಾಂಬಳೆ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗೆ ಪೂರಕವಾದ ಅಂಶಗಳು ಕೃತಿಯಲ್ಲಿವೆ' ಎಂದರೆ, ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಹಾಗೂ ಮಹಿಳಾ ಸಾಹಿತ್ಯದ ಪ್ರೇರಣೆ ಧೋರಣೆ ಪುಸ್ತಕದಲ್ಲಿದೆ ಎಂದು ಹೊಂಬಯ್ಯ ಹೊನ್ನಲಗೆರೆ ಹೇಳಿದರು.

## ಮಿನಿ ನ್ಯೂಸ್

### ಕನಕಪುರ: ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆ

• ಉದಯವಾಹಿನಿ, ಕನಕಪುರ

ಮುಂಗಾರು ಪ್ರಾರಂಭವಾಗಿದ್ದು ಕೃಷಿ ಇಲಾಖೆಯಿಂದ ಗುಣಮಟ್ಟದ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತಿದೆ ಎಂದು ಕನಕಪುರ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ರಾಧಾಕೃಷ್ಣ ತಿಳಿಸಿದ್ದಾರೆ. ತಾಲ್ಲೂಕಿನ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಆಗಸ್ಟ್ 15ರವರೆಗೆ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತಿದ್ದು, ಸೂಕ್ತ ದಾಖಲೆಗಳನ್ನು ತೋರಿಸಿ ರೈತರು ರಾಗಿ, ಭತ್ತ, ಮುಸಕಿನ ಜೋಳ, ತೊಗರಿ, ಅಲಸಂದೆ ಸೇರಿದಂತೆ ವಿವಿಧ ಬಿತ್ತನೆ ಬೀಜಗಳನ್ನು ಪಡೆಯಬಹುದು. ಕೃಷಿ ಯಾಂತ್ರೀಕರಣ ಯೋಜನೆಯಡಿ ಪವರ್ ಟಿಲ್ಲರ್, ಪವರ್ ವೀಡರ್, ಬ್ರಷ್ ಕಟರ್, ಚಾಫ್ ಕಟರ್, ರಾಗಿ ಕಟಾವು ರೀಪರ್, ಒಕ್ಕಣೆಯಂತ್ರ ಟ್ರಾಕ್ಟರ್‌ಗಳಿಗೆ ರೋಟವೇಟರ್, ಕಲ್ಟಿವೇಟರ್, ಡಿಸ್ಕ್ ನೇಗಿಲು, ರಾಗಿ ಬಿತ್ತನೆ ಕೂರಿಗೆ ಮುಂತಾದ ಉಪಕರಣಗಳನ್ನು ಶೇ.50 ರಷ್ಟು ಸಹಾಯಧನದಲ್ಲಿ ವಿತರಿಸಲಾಗುತ್ತದೆ. ಜೊತೆಗೆ ಸ್ಪಿಂಕ್ಲರ್ ಘಟಕವನ್ನು ಶೇ.90ರಷ್ಟು ರಿಯಾಯಿತಿಯಲ್ಲಿ ನೀಡಲಾಗುತ್ತಿದೆ. ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯಡಿ ರಾಗಿ ಕ್ಲೀನಿಂಗ್ ಯಂತ್ರ, ರಾಗಿ ಫ್ಲೋರ್ ಮಿಲ್, ಪಲ್ವರೈಸರ್, ದಾಲ್ ಮೇಕಿಂಗ್ ಮಷಿನ್, ಸಣ್ಣ ಎಣ್ಣೆ ಗಾಣವನ್ನು ಶೇ. 50ರ ಸಹಾಯಧನದಲ್ಲಿ ನೀಡಲಾಗುತ್ತದೆ. ಕೃಷಿಹೊಂಡಗಳಿಗೆ ಪಾಲಿಥಿನ್ ಹೊದಿಕೆ, ಡೀಸೆಲ್ ಪಂಪ್‌ಸೆಟ್, ತುಂತುರು ನೀರಾವರಿ ಘಟಕಗಳಿಗೆ ಶೇ 80ರಷ್ಟು ಸಹಾಯಧನ. ಹೊಂಡದ ಸುತ್ತ ತಂತಿ ಬೇಲಿ ನಿರ್ಮಾಣಕ್ಕೇ ಶೇ 40ರಷ್ಟು ಸಹಾಯಧನ ಸಿಗಲಿದೆ. ಆಸಕ್ತ ರೈತರು ಹೋಬಳಿಯ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆದು ಇದರ ಉಪಯೋಗ ಪಡೆದುಕೊಳ್ಳಿ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ನಗರದಲ್ಲಿ ಟೀಮ್ ಹಲ್ಕ್‌ವತಿಯಿಂದ ಮಿಸ್ಟರ್ ತಿಪಟೂರು ದೇಹದಾರ್ಢ್ಯ ಸ್ಪರ್ಧೆ

• ಉದಯವಾಹಿನಿ, ತಿಪಟೂರು

ಜಿಕೆಎಂ ನಗರದಲ್ಲಿ ಟೀಮ್ ಹಲ್ಕ್ ವತಿಯಿಂದ ಮಿಸ್ಟರ್ ತಿಪಟೂರು ದೇಹದಾರ್ಢ್ಯ ಸ್ಪರ್ಧೆ ನಡೆಯಿತು. 50ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ಪ್ರಜ್ವಲ್ ಪ್ರಥಮ ಸ್ಥಾನ, ಸೈಯದ್ ದ್ವಿತೀಯ, ಭರತ್ ತೃತೀಯ ಬಹುಮಾನ ಪಡೆದರು. ಪ್ರಜ್ವಲ್‌ಗೆ ಮಿಸ್ಟರ್ ತಿಪಟೂರು 2025 ಪ್ರಶಸ್ತಿ ಪಡೆದರು. ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಮಾತನಾಡಿ, ಮನುಷ್ಯನಿಗೆ ಆರೋಗ್ಯ ಬಹು ಮುಖ್ಯ, ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ನಿರಂತರ ವ್ಯಾಯಾಮ ಮುಖ್ಯವಾಗುತ್ತವೆ. ಯುವಕರು ದುಶ್ಚಟಗಳಿಗೆ ಬಿದ್ದು ಹಾಳಾಗದೆ ಸದೃಡ ಆರೋಗ್ಯ ಕಾಪಾಡಿಕೊಳ್ಳಲು ವ್ಯಾಯಾಮಗಳಿಗೆ ಒತ್ತು ನೀಡಬೇಕು ಎಂದರು. ನಿವೃತ್ತ ಎಸಿಪಿ ಲೋಕೇಶ್ವರ್, ನಗರಸಭೆ ಅಧ್ಯಕ್ಷೆ ಯಮುನಾ ಧರಣೇಶ್, ಉಪಾಧ್ಯಕ್ಷೆ ಮೇಘನಾ ಸುಜಿತ್ ಭೂಷಣ್, ವೈದ್ಯ ಶ್ರೀಧರ್, ರಕ್ಷಿತ್ ಗೌಡ, ಎಂ.ಸೈಫುಲ್ಲ. ಜಿ.ಕೆ.ನಟರಾಜ್, ಮುತ್ತಾವಲ್ಲಿ ಮಹಮದ್ ದಸ್ತಗೀರ್, ಸಮೀಉಲ್ಲಾ ಹಾಜರಿದ್ದರು.

### ಪರಿಸರ ಸಂರಕ್ಷಣೆ ಭವಿಷ್ಯ ರಕ್ಷಿಸುವ ಪ್ರಮುಖ ಹೆಜ್ಜೆ

• ಉದಯವಾಹಿನಿ, ಬಂಗಾರಪೇಟೆ

ಪರಿಸರ ಸಂರಕ್ಷಣೆ ಭವಿಷ್ಯ ರಕ್ಷಿಸುವ ಒಂದು ಪ್ರಮುಖ ಹೆಜ್ಜೆ. ಪರಿಸರ ಸಂರಕ್ಷಣೆ ಕೇವಲ ಸರ್ಕಾರದ ಜವಾಬ್ದಾರಿಯಲ್ಲ. ಆದರೆ, ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿ ಎಂದು ಗ್ರಾಮ ಪಂ.ಅಧ್ಯಕ್ಷೆ ಆಶಾ ರಮೇಶ್ ಹೇಳಿದರು. ತಾಲ್ಲೂಕಿನ ಹುಲಿಬೆಲೆ ಗ್ರಾಮದ ಕೆರೆ ಅಂಗಳದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಮ್ಮಿಕೊಂಡಿದ್ದ ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಸುತ್ತಮುತ್ತಲಿನ ಪರಿಸರ ನಿರಂತರವಾಗಿ ಮತ್ತು ಆರೋಗ್ಯಕರವಾಗಿ ಇಟ್ಟುಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿ ಜವಾಬ್ದಾರಿ.

ಪರಿಸರ ನಾಶದಿಂದ ಅನೇಕ ತೊಂದರೆ ಉಂಟಾಗುತ್ತದೆ. ಎಲ್ಲರೂ ಪರಿಸರ ರಕ್ಷಿಸಬೇಕು ಎಂದರು. ಮಾನವ ಚಟುವಟಿಕೆಗಳಿಂದ ಪರಿಸರ ವೇಗವಾಗಿ ಹಾಳಾಗುತ್ತಿದೆ. ಕೈಗಾರಿಕೆ. ವಾಹನ ಮತ್ತು ಕೃಷಿಯಿಂದ ಹೊರಸೂಸುವ ವಿಷಕಾರಿ ವಸ್ತುಗಳು ಪರಿಸರ ಕಲುಷಿತಗೊಳಿಸುತ್ತಿದೆ. ಅರಣ್ಯ ನಾಶದಿಂದಾಗಿ ಮಣ್ಣು ಸವೆತ, ಪ್ರವಾಹ ಮತ್ತು ಬರಗಾಲ ಸಮಸ್ಯೆ ಉಂಟಾಗುತ್ತಿದೆ. ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ ಎಂದರು. ಪರಿಸರ ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಪರಿಸರ ಸಂರಕ್ಷಣೆ ಬಗ್ಗೆ ಜಾಗೃತರಾಗಿ ಮತ್ತು ಸಕ್ರಿಯವಾಗಿ ಭಾಗವಹಿಸಿದರೆ ಪರಿಸರ ನಿರಂತರವಾಗಿ ಮತ್ತು ಆರೋಗ್ಯಕರವಾಗಿ ಇಡಬಹುದು ಎಂದರು. ಒಕ್ಕೂಟದ ಅಧ್ಯಕ್ಷೆ ಆರತಿ, ವಲಯ ಮೇಲ್ವಿಚಾರಕಿ ಭವ್ಯ, ಗ್ರಾಮ ಪಂಚಾಯಿತಿ ಸದಸ್ಯ ಚಲಪತಿ, ಗ್ರಾಮ ಆಡಳಿತ ಅಧಿಕಾರಿ ಅಂಬರೀಶ್ ಇತರರು ಇದ್ದರು.

# ರೈತ ವಿರೋಧಿ ನೀತಿ ಸಲ್ಲದು: ನಲ್ಲಹಳ್ಳಿ ಶ್ರೀನಿವಾಸ್

## ರಾಜ್ಯದಾದ್ಯಂತ ರೈತ ಸಂಘವು ಹುತಾತ್ಮ ರೈತ ದಿನಾಚರಣೆ ಕಾರ್ಯಕ್ರಮ

• ಉದಯವಾಹಿನಿ, ರಾಮನಗರ

ಆಳುವ ಸರ್ಕಾರಗಳು ಇತ್ತೀಚೆಗೆ ರೈತ ವಿರೋಧಿ ನೀತಿಗೆ ಹೆಚ್ಚು ಒತ್ತು ನೀಡುತ್ತಿವೆ. ಇದೇ ಕಾರಣಕ್ಕೆ ಕೃಷಿ ಕ್ಷೇತ್ರವು ಬಡವಾಗುತ್ತಿದೆ. ಕೃಷಿಯು ಈ ದೇಶದ ಬೆನ್ನೆಲುಬು ಎಂಬುದನ್ನು ಸರ್ಕಾರ ಮರೆತಿದೆ. ರೈತ ಉಳುಮೆ ಮಾಡಿದರಷ್ಟೇ ತಿನ್ನಲು ಆಹಾರ ಸಿಗುತ್ತದೆಯೇ ಹೊರತು, ಯಾವುದೊ ಸಾಫ್ಟ್‌ವೇರ್‌ನಿಂದ ಆಹಾರ ಉತ್ಪಾದಿಸಲು ಆಗದು ಎಂದು ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ನಲ್ಲಹಳ್ಳಿ ಶ್ರೀನಿವಾಸ್ ಹೇಳಿದರು. ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ವತಿಯಿಂದ ನಗರದ ಎಪಿಎಂಸಿಯಲ್ಲಿ ಹಮ್ಮಿಕೊಂಡಿದ್ದ 46ನೇ ರೈತ ಹುತಾತ್ಮ ದಿನಾಚರಣೆಯಲ್ಲಿ ಮಾತನಾಡಿದ ಅವರು, 'ಪ್ರಸ್ತುತ ನಗರೀಕರಣ, ಬೆಲೆ ಕುಸಿತ, ಸರ್ಕಾರಿ ಕಚೇರಿಗಳಲ್ಲಿ ಮಿತಿ ಮೀರಿದ ಭ್ರಷ್ಟಾಚಾರ, ಅಭಿವೃದ್ಧಿ ಹೆಸರಿನಲ್ಲಿ ಫಲವತ್ತಾದ ಭೂಮಿ ಸ್ವಾಧೀನವು ರೈತರು ಮತ್ತು ಕೃಷಿ ಕ್ಷೇತ್ರವನ್ನು ಬಿಕ್ಕಟ್ಟಿಗೆ ಸಿಲುಕಿಸಿವೆ' ಎಂದರು.

'ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಹುಟ್ಟುವ ಮಲಪ್ರಭಾ ನದಿಯ ಅಣೆಕಟ್ಟೆಯ ಜಲಾನಯನ ಪ್ರದೇಶಗಳಿಗೆ ನೀರುಣಿಸುವ ನೀರಾವರಿ ಯೋಜನೆಯನ್ನು ಸರ್ಕಾರ 1960ರಲ್ಲಿ ಘೋಷಿಸಿ ಶಂಕುಸ್ಥಾಪನೆ ಮಾಡಿತ್ತು. ಆದರೆ ಕಾಮಗಾರಿ ನಿಗದಿ ಅವಧಿಯಲ್ಲಿ ಮುಗಿಯಲಿಲ್ಲ. ಇದರ ಬೆನ್ನಲ್ಲೇ ಸರ್ಕಾರ ತೆರಿಗೆಯ ಬರೆ ಹಾಕಿತ್ತು. ಈ ವಿಷಯವನ್ನು ಅಂದಿನ ಮುಖ್ಯಮಂತ್ರಿ ಗುಂಡೂರಾವ್ ಗಮನಕ್ಕೆ ತಂದರೂ ನಿರ್ಲಕ್ಷಿಸಿದರು' ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

> 'ರೈತರು ಸಮಿತಿ ರಚಿಸಿಕೊಂಡು ನಿರಂತರವಾಗಿ ಸತ್ಯಾಗ್ರಹ, ಅರೆಬೆತ್ತಲೆ ಮೆರವಣಿಗೆ, ಬಾರುಕೋಲು ಚಳುವಳಿ, ಇಡೀ ದಿನ ಒಂಟಿ ಕಾಲಿನ ಚಳುವಳಿ ಹೀಗೆ ಅನೇಕ ಹೋರಾಟಗಳನ್ನು ಮಾಡಿದರು. ಸರ್ಕಾರವು ರೈತರ ಸಂಕಷ್ಟಕ್ಕೆ ಸ್ಪಂದಿಸಲಿಲ್ಲ. ಆಗ ರೈತರು, 1980 ಜುಲೈ 21ರಂದು ಏಕಕಾಲಕ್ಕೆ ನರಗುಂದ, ಸವದತ್ತಿ, ರಾಯದುರ್ಗದ ತಹಶೀಲ್ದಾರ್ ಕಚೇರಿ ಸೇರಿದಂತೆ ಇತರ ಸರ್ಕಾರಿ ಕಚೇರಿಗಳಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು' ಎಂದು ಹೇಳಿದರು.

> ಸಂಘದ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಮಾತನಾಡಿ, ಹೆಚ್ಚುತ್ತಿರುವ ನಗರೀಕರಣ, ರಿಯಲ್ ಎಸ್ಟೇಟ್ ಹಾಗೂ ಭೂಗಳ್ಳರ ಕಾಟದಿಂದಾಗಿ ರೈತರು ತಮ್ಮ ಬೆಲೆಬಾಳುವ ಕೃಷಿ ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ರೈತನನ್ನೇ ರಾಜಕಾರಣದ ವಸ್ತುವಾಗಿ ಬಳಸಿಕೊಳ್ಳುತ್ತಿದ್ದಾರೆ. ರೈತರ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕೊಡುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

**1960ರಲ್ಲಿ ಘೋಷಿಸಿ ಶಂಕುಸ್ಥಾಪನೆ**

'ಈ ವೇಳೆ ನಡೆದ ಗಲಾಟೆಯಲ್ಲಿ ಪೊಲೀಸರ ಗುಂಡೇಟಿಗೆ ಇಬ್ಬರು ರೈತರು ಬಲಿಯಾದರು. ಅವರ ಸ್ಮರಣಾರ್ಥ ರಾಜ್ಯದಾದ್ಯಂತ ರೈತ ಸಂಘವು ಹುತಾತ್ಮ ರೈತ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಂಡು ರೈತರ ಸಮಸ್ಯೆಗಳ ಕುರಿತು 46 ವರ್ಷಗಳಿಂದ ಚರ್ಚಿಸುತ್ತಾ ಬರುತ್ತಿದೆ. ಕಾರ್ಯಕರ್ತರು ರೈತ ಹೋರಾಟದ ಹಿನ್ನೆಲೆಗಳನ್ನು ಅರಿತುಕೊಂಡಾಗ ಮಾತ್ರ ಸಂಘ ಬಲಿಷ್ಠವಾಗಲು ಸಾಧ್ಯ ಎಂದು ತಿಳಿಸಿದರು.

ಸಂಘದ ಪದಾಧಿಕಾರಿಗಳಾದ ರಮೇಶ್ ಶಿವರಾಜು, ರಾಜೇಗೌಡ, ಗಂಗಣ್ಣ, ದುಂಡಪ್ಪ, ದೇವರಾಜು, ತಿಮ್ಮೇಗೌಡ, ಗೌರಮ್ಮ, ಶೋಭಾ, ತಾರಾ, ಸುನೀತಾ ಹಾಗೂ ಇತರರು ಇದ್ದರು.

# ಚಿಕ್ಕಬಳ್ಳಾಪುರ: ಬಿಜಿಎಸ್‌ನಲ್ಲಿ ಶುಭಾರಂಭ್

• ಉದಯವಾಹಿನಿ, ಚಿಕ್ಕಬಳ್ಳಾಪುರ

ನಗರದ ಬಿಜಿಎಸ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಸ್ಟಡೀಸ್ ಸಂಸ್ಥೆಯಿಂದ ಪ್ರಥಮ ವರ್ಷದ ಬಿಬಿಎ, ಬಿಕಾಂ ಪದವಿ ತರಗತಿಗಳ ಉದ್ಘಾಟನಾ ಕಾರ್ಯಕ್ರಮ 'ಶುಭಾರಂಭ್' ನಡೆಯಿತು. ಕಾರ್ಯಕ್ರಮದ ಸಾನ್ನಿಧ್ಯವಹಿಸಿದ್ದ ಆದಿಚುಂಚನಗಿರಿ ಶಾಖಾ ಮಠದ ಮಂಗಳಾನಂದನಾಥ ಸ್ವಾಮೀಜಿ, ವಿದ್ಯಾರ್ಥಿಗಳು ಜೀವನದಲ್ಲಿ ಒಳ್ಳೆಯ ಗುರಿ ಇಟ್ಟುಕೊಂಡು ದೃಢ ಸಂಕಲ್ಪದಲ್ಲಿ ಮುನ್ನಡೆಯಬೇಕು. ಪ್ರಾಮಾಣಿಕತೆ, ನಿರಂತರ ಶ್ರಮ ಇದ್ದರೆ ಯಾರೇ ಆಗಲಿ ಜೀವನದಲ್ಲಿ ಮುಂದೆ ಬರಬಹುದು ಎಂದು ಹೇಳಿದರು. ಶ್ರಮವೇ ಸಾಧನೆಯ ರಹದಾರಿ. ವಿದ್ಯಾರ್ಥಿಗಳು ಉತ್ತಮ ಸಂಸ್ಕಾರ ಮತ್ತು ಶಿಕ್ಷಣದ ಮೂಲಕ ಉನ್ನತ ಸ್ಥಾನ ಪಡೆಯಬೇಕು. ಆ ಮೂಲಕ ಪೋಷಕರಿಗೆ ಒಳ್ಳೆಯ ಹೆಸರನ್ನು ತರಬೇಕು ಎಂದರು.

ವಿದ್ಯಾರ್ಥಿಗಳು ಕಾಲೇಜು ದಿನಗಳಿಂದಲೇ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಆ ವ್ಯಕ್ತಿತ್ವವು ನಿಮ್ಮನ್ನು ಉತ್ತಮ ಸ್ಥಾನಕ್ಕೆ ಕೊಂಡೊಯ್ಯಬೇಕು ಎಂದು ಹೇಳಿದರು.

ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಎನ್. ಶಿವರಾಮ್ ರೆಡ್ಡಿ ಮಾತನಾಡಿ.

ವಿದ್ಯಾರ್ಥಿಗಳು ಪದವಿ ಅವಧಿಯ ಪ್ರತಿ ಕ್ಷಣವನ್ನೂ ಅರ್ಥಪೂರ್ಣವಾಗಿ ಕಳೆಯಬೇಕು. ವಿದ್ಯಾಭ್ಯಾಸದ ಜೊತೆಗೆ ಶಿಸ್ತು, ಸಂಸ್ಕಾರ, ಪ್ರತಿಭೆ ಹಾಗೂ ಉತ್ತಮ ಆಶಯಗಳನ್ನು ತುಂಬಿಕೊಂಡು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಲೋಕನಾಥ್, ಬಿಜಿಎಸ್ ವಿದ್ಯಾ ಸಂಸ್ಥೆಗಳ ಸೇವಾ ಕೈಂಕರ್ಯವನ್ನು ಶ್ಲಾಘಿಸಿದರು.


ಉದಯವಾಹಿನಿ ಚಿತ್ರ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಪ್ರಥಮ ರ್‍ಯಾಂಕ್ ಪಡೆದ ಕಾಲೇಜಿನ ಎಂ.ಕಾಂ. ವಿದ್ಯಾರ್ಥಿನಿ ಶ್ರೀವಲ್ಲಿ ಎಚ್.ಎನ್., ಬಿಬಿಎ ವಿಭಾಗದಲ್ಲಿ ತೃತೀಯ ರ್‍ಯಾಂಕ್ ಪಡೆದ ಪಲ್ಲವಿ.ಎಸ್. ಮತ್ತು ಎಸ್.ಶ್ರವಣ್ ಅವರನ್ನು ಅಭಿನಂದಿಸಲಾಯಿತು. ಪಿಯು ವಿಭಾಗದಲ್ಲಿ ಅತ್ಯುತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಎಸ್‌ಜೆಸಿಐಟಿ ಕಾಲೇಜಿನ ಪ್ರಾಂಶುಪಾಲ ಜಿ.ಟಿ.ರಾಜು, ಪ್ರಾಂಶುಪಾಲ ವೆಂಕಟೇಶ್ ಬಾಬು ಬಿ.ಆರ್ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಪಾಲ್ಗೊಂಡಿದ್ದರು.

ಅಂತರಾಳದಿಂದ.. EDITORIAL

# ಮುಂಬೈ ರೈಲು ಸ್ಫೋಟ: ಹಳಿ ತಪ್ಪಿದ ತನಿಖೆಗೆ ಬಲಿಯಾದವರು

ಈ ದೇಶದಲ್ಲಿ ಎಲ್ಲಿ ಯಾರೇ ಸ್ಫೋಟಗಳನ್ನು ನಡೆಸಲಿ, ಕೃತ್ಯದ ಬೆನ್ನಿಗೇ ಆರೋಪಿಗಳನ್ನು ಅವರ ಹಿಂದಿರುವ ಸಂಘಟನೆಗಳನ್ನು ಪೊಲೀಸ್ ಇಲಾಖೆ ಘೋಷಿಸಿ ಬಿಡುತ್ತದೆ. ಸ್ಫೋಟ ನಡೆಸಿದ ಕೆಲವೇ ಗಂಟೆಗಳಲ್ಲಿ ಮಾಧ್ಯಮಗಳು ಅದರ ಹಿಂದಿರುವ ಸಂಚುಗಳ ಬಗ್ಗೆ ಕುಳಿತಲ್ಲೇ ಕಥೆಗಳ ಮೇಲೆ ಕಥೆಗಳನ್ನು ಹೆಣೆಯುತ್ತವೆ. 2006ರಂದು ಮುಂಬೈನ ಲೋಕಲ್ ಟ್ರೈನ್ ಸ್ಫೋಟದಲ್ಲೂ ಇದೇ ನಡೆಯಿತು. 180ಕ್ಕೂ ಅಧಿಕ ಮಂದಿಯನ್ನು ಬಲಿತೆಗೆದುಕೊಂಡ ಈ ಸ್ಫೋಟಕ್ಕೆ ಸಂಬಂಧಿಸಿ ಮಾಧ್ಯಮಗಳು ಪುಂಖಾನುಪುಂಖವಾಗಿ ಕಥೆಗಳನ್ನು ಹೆಣೆದವು. ಆ ಕಥೆಗಳನ್ನು ಆಧರಿಸಿಕೊಂಡು ಬಳಿಕ ತನಿಖೆ ನಡೆಯಿತು. ಪರಿಣಾಮವಾಗಿ ಕೃತ್ಯಕ್ಕೆ ಸಂಬಂಧಿಸಿ 12 ಜನರನ್ನು ಪ್ರಮುಖ ಆರೋಪಿಗಳಾಗಿ ತನಿಖೆ ಗುರುತಿಸಿತು. ಅಷ್ಟೇ ಅಲ್ಲ ಮಾನಸಿಕವಾಗಿ ಅವರು ಅನುಭವಿಸಿರುವ ಸಂಕಟಗಳಿಗೆ ಪದಗಳೇ ಇಲ್ಲ. ಶಿಕ್ಷೆಯನ್ನು ಅನುಭವಿಸಿರುವುದು ಈ ಆರೋಪಿಗಳಷ್ಟೇ ಅಲ್ಲ ಇವರ ಕುಟುಂಬವೂ ಸಾಕಷ್ಟು ನೋವುಗಳನ್ನು ತಿಂದಿದೆ. ಭಯೋತ್ಪಾದಕರ ಸಂಬಂಧಿಕರೆಂಬ ಹಣೆಪಟ್ಟಿಯನ್ನು ಅಂಟಿಸಿಕೊಂಡು ಕಳೆದ 19 ವರ್ಷಗಳಿಂದ ಸಮಾಜದ ಪಾಲಿಗೆ ಅಸ್ಪೃಶ್ಯರಾಗಿ ಬದುಕುತ್ತಿದ್ದಾರೆ. ಬಿಡುಗಡೆಗೊಂಡ ಬಳಿಕವೂ ಈ ಹಣೆಪಟ್ಟಿಯನ್ನು ಅಳಿಸಿ ಹಾಕುವುದು ಅಷ್ಟು ಸುಲಭವಿಲ್ಲ.ಈ ತನಿಖೆ ಅನ್ಯಾಯ ಮಾಡಿರುವುದು ಕೇವಲ ಈ 12 ಆರೋಪಿಗಳು ಮತ್ತು ಅವರ ಕುಟುಂಬಗಳಿಗಷ್ಟೇ ಅಲ್ಲ. ಸ್ಫೋಟದಲ್ಲಿ ಮೃತಪಟ್ಟ ನೊಂದ ಅಷ್ಟೂ ಕುಟುಂಬಗಳಿಗೂ ಅನ್ಯಾಯವೆಸಗಿದೆ. ಸ್ಫೋಟ ನಡೆಸಿದ ಪಾತಕಿಗಳು ಸ್ವಚ್ಛಂದವಾಗಿ ಓಡಾಡುತ್ತಿದ್ದಾರೆ. ಇಂತಹ ಪೂರ್ವಾಗ್ರಹ ಪೀಡಿತ ತನಿಖೆ ಈ ಹಿಂದೆ ಮಕ್ಕಾ ಮಸೀದಿ ಸ್ಫೋಟ, ಸಂತಾ ಎಕ್ಸ್‌ಪ್ರೆಸ್ ಸ್ಫೋಟ, ಮಾಲೆಗಾಂವ್ ಸ್ಫೋಟದಲ್ಲೂ ನಡೆದಿತ್ತು. ಈ ಸ್ಫೋಟಗಳು ನಡೆದಾಗ ಆರಂಭದಲ್ಲಿ ಅಮಾಯಕ ಮುಸ್ಲಿಮರನ್ನೇ ಬಂಧಿಸಲಾಯಿತು. ಈ ಸ್ಫೋಟಗಳ ಹಿಂದೆ ಯಾವೆಲ್ಲ ಉಗ್ರವಾದಿ ಸಂಘಟನೆಗಳ ಕೈವಾಡವಿದೆ, ಅವರೆಲ್ಲ ಪಾಕಿಸ್ತಾನದಲ್ಲಿ ಎಲ್ಲಿ, ಯಾವಾಗ ತರಬೇತಿ ಪಡೆದರು ಎನ್ನುವ ಕಥೆಗಳನ್ನು ಕಟ್ಟಿ ಮಾಧ್ಯಮಗಳು ಊಳಿಟ್ಟವು. ಆದರೆ ಎಟಿಎಸ್ ಮುಖ್ಯಸ್ಥ ಹೇಮಂತ್ ಕರ್ಕರೆ ತಂಡ ತನ್ನ ತನಿಖೆಯನ್ನು ಆಳಕ್ಕಿಳಿಸಿದಂತೆಯೇ ಭಯೋತ್ಪಾದಕರ 'ಬಣ್ಣ' ಬದಲಾಯಿತು. ಪುರೋಹಿತ್, ಅಸೀಮಾನಂದ, ಪ್ರಜ್ಞಾಸಿಂಗ್ ಠಾಕೂರ್ ಮೊದಲಾದ ಹೆಸರುಗಳು ಕೇಳಿ ಬರತೊಡಗಿದವು. ಈ ತಂಡ ಭಯೋತ್ಪಾದಕರ ಬೇರುಗಳನ್ನು ಅರಸುತ್ತಾ ಕೆಲವು ಕೇಸರಿ ಸಂಘಟನೆಗಳವರೆಗೂ ತಲುಪಿತು. ಆದರೆ ಅಷ್ಟರಲ್ಲೇ ಈ ತಂಡದ ನೇತೃತ್ವವಹಿಸಿದ್ದ ಅಷ್ಟೂ ಅಧಿಕಾರಿಗಳು ಮುಂಬಯಿ ದಾಳಿಯಲ್ಲಿ ನಿಗೂಢವಾಗಿ ಮೃತಪಟ್ಟರು. ಇದೀಗ ಮುಂಬೈ ರೈಲು ಸ್ಫೋಟದಲ್ಲಿ ಪೊಲೀಸರು ಬಂಧಿಸಿದ ಅಷ್ಟೂ ಜನರನ್ನು ನಿರಪರಾಧಿಗಳು ಎಂದು ನ್ಯಾಯಾಲಯ ಘೋಷಿಸಿದ ಬಳಿಕ, ಹಾಗಾದರೆ ರೈಲು ಸ್ಫೋಟ ನಡೆಸಿದ ನಿಜವಾದ ಭಯೋತ್ಪಾದಕರು ಯಾರು? ತನಿಖೆಯನ್ನು ಉದ್ದೇಶಪೂರ್ವಕವಾಗಿ ದಾರಿ ತಪ್ಪಿಸಲಾಯಿತೆ ಎಂಬ ಪ್ರಶ್ನೆಗಳು ಎದ್ದಿವೆ. ಕಳೆದ ಮೂರು ದಶಕಗಳಿಂದ ಭಯೋತ್ಪಾದನೆಗಳನ್ನು ಮುಂದಿಟ್ಟುಕೊಂಡು ಕೆಲವು ರಾಜಕೀಯ ಪಕ್ಷಗಳು ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆಲ್ಲುತ್ತಾ ಬರುತ್ತಿವೆ. ಮೊದಲು ಸ್ಫೋಟಗಳು ಸಂಭವಿಸುತ್ತವೆ. ಇಲ್ಲಿ ನೂರಾರು ಅಮಾಯಕರು ಬಲಿಯಾಗುತ್ತಾರೆ. ಇದಾದ ಬಳಿಕ ಭಯೋತ್ಪಾದನೆಗಾಗಿ ಒಂದು ಧರ್ಮವನ್ನು ಹೊಣೆ ಮಾಡುತ್ತಾ ಇನ್ನೊಂದು ಧರ್ಮದ ವಿರುದ್ಧ ಎತ್ತಿಕಟ್ಟಲು ಶುರು ಹಚ್ಚುತ್ತಾರೆ. ತನಿಖೆ ನಡೆಯುವ ಮೊದಲೇ ಆರೋಪಿಗಳನ್ನು ಗುರುತಿಸಿ ಬಂಧಿಸುವ ಕೆಲಸಗಳು ನಡೆಯುತ್ತವೆ. ಪೊಲೀಸರ ತನಿಖೆ ಆರಂಭವಾಗುವ ಮೊದಲೇ ಮಾಧ್ಯಮಗಳು ಆರೋಪಿಗಳನ್ನು ವಿಚಾರಣೆ ನಡೆಸಿ, ಅವರನ್ನು ಗಲ್ಲಿಗೇರಿಸಿಯೇ ಬಿಡುತ್ತವೆ. ಇಲ್ಲಿ ಇಂತಹ ತನಿಖೆಗಳನ್ನು ನಡೆಸುವುದರ ಹಿಂದೆ ರಾಜಕೀಯ ದುರುದ್ದೇಶಗಳೂ ಇರುತ್ತವೆ. ಆರೋಪವನ್ನು ಒಂದು ಸಮುದಾಯದ ತಲೆಗೆ ಕಟ್ಟುವುದು ಮೊದಲ ಉದ್ದೇಶವಾದರೆ, ನಿಜವಾದ ಆರೋಪಿಗಳನ್ನು ರಕ್ಷಿಸುವುದು ಎರಡನೇ ಉದ್ದೇಶ.ದೇಶದಲ್ಲಿ ನಡೆದ ಹೆಚ್ಚಿನ ಭಯೋತ್ಪಾದನಾ ಕೃತ್ಯಕ್ಕೆ ಸಂಬಂಧಿಸಿದ ತನಿಖೆಗಳಲ್ಲಿ ಇದುವೇ ನಡೆದಿದೆ. ಅಮಾಯಕರು ಆರೋಪಿಗಳಾಗಿ ಕಟಕಟೆಯಲ್ಲಿ ನಿಂತರೆ, ನಿಜವಾದ ಆರೋಪಿಗಳು 'ದೇಶಭಕ್ತರ ವೇಶದಲ್ಲಿ ಸಾರ್ವಜನಿಕ ವೇದಿಕೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಭಯೋತ್ಪಾದಕರ ಕುರಿತಂತೆ ಸರಕಾರ ಮತ್ತು ತನಿಖಾ ಸಂಸ್ಥೆಗಳ ಈ ದ್ವಂದ್ವ ನಿಲುವುಗಳೇ ಭಾರತದಲ್ಲಿ ಭಯೋತ್ಪಾದನಾ ಕೃತ್ಯಗಳನ್ನು ಪೋಷಿಸುತ್ತಾ ಬಂದಿವೆ. ಒಂದೆಡೆ ಈ ದೇಶದ ಒಂದು ನಿರ್ದಿಷ್ಟ ಸಮುದಾಯವನ್ನು ಭಯೋತ್ಪಾದನೆಯ ಹೆಸರಿನಲ್ಲಿ ಮಾನಸಿಕವಾಗಿ, ದೈಹಿಕವಾಗಿ ಹಿಂಸಿಸಿ ಅವರಿಗೆ ಭಾರತದ ನ್ಯಾಯ ವ್ಯವಸ್ಥೆಯ ಮೇಲೆ ಭ್ರಮನಿರಸನವನ್ನು ಉಂಟು ಮಾಡಲು ಹವಣಿಸಲಾಗುತ್ತದೆ. ಮಗದೊಂದೆಡೆ, ಶಂಕಿತ ಉಗ್ರಗಾಮಿಗಳಿಗೆ ಪಕ್ಷದಿಂದ ಚುನಾವಣಾ ಟಿಕೆಟ್ ನೀಡಿ ಗೆಲ್ಲಿಸಿ ಸಂಸತ್ ಪ್ರವೇಶಿಸುವಂತೆ ಮಾಡುತ್ತದೆ. ಮಾಲೆಗಾಂವ್ ಸ್ಫೋಟ ಆರೋಪಿ ಪ್ರಜ್ಞಾಸಿಂಗ್ ಭಯೋತ್ಪಾದನಾ ಕೃತ್ಯದ ಆರೋಪ

**2015ರಲ್ಲಿ ಐವರಿಗೆ ಮರಣದಂಡನೆ ಮತ್ತು ಏಳು ಜನರಿಗೆ ಜೀವಾವಧಿ ಶಿಕ್ಷೆಯನ್ನು ನ್ಯಾಯಾಲಯ ಘೋಷಿಸಿತು. ಆದರೆ ಇದೀಗ ಸುಮಾರು 19 ವರ್ಷಗಳ ಬಳಿಕ ಮುಂಬೈ ಹೈಕೋರ್ಟ್ ಎಲ್ಲಾ ಆರೋಪಿಗಳನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಿದೆ. ಆರೋಪಿಗಳು ಸ್ಫೋಟದಲ್ಲಿ ಭಾಗವಹಿಸಿದ್ದಾರೆ ಎನ್ನುವುದಕ್ಕೆ ಯಾವ ಸಾಕ್ಷ್ಯವೂ ಇಲ್ಲ ಎನ್ನುವುದನ್ನು ನ್ಯಾಯಾಲಯ ತೀರ್ಪಿನಲ್ಲಿ ತಿಳಿಸಿದೆ. ಹೈಕೋರ್ಟ್ ಆರೋಪಿಗಳನ್ನೇನೋ ಬಿಡುಗಡೆ ಮಾಡಲು ಆದೇಶ ನೀಡಿದೆ. ಆದರೆ ಈ 19 ವರ್ಷಗಳಲ್ಲಿ ಅವರು ತಾವು ಮಾಡದ ತಪ್ಪಿಗಾಗಿ ಅತ್ಯಂತ ಕಠಿಣ ಶಿಕ್ಷೆಯನ್ನು ಅನುಭವಿಸಿಯಾಗಿದೆ. ದೈಹಿಕವಾಗಿ ಅವರಿಗೆ ಅಧಿಕಾರಿಗಳು ಬರ್ಬರ ಚಿತ್ರ ಹಿಂಸೆಗಳನ್ನು ನೀಡಿರುವ ಬಗ್ಗೆ ನ್ಯಾಯಾಲಯವೇ ತನ್ನ ಆಕ್ಷೇಪವನ್ನು ವ್ಯಕ್ತಪಡಿಸಿದೆ.**



## ರಾಮಾಯಣ


ಶ್ರೀರಾಮನು ರಾಜ್ಯಭಾರವನ್ನು ಒಪ್ಪದಿದ್ದುದು

• ಹಿಂದಿನ ಸಂಚಿಕೆಯಿಂದ 101ನೆಯ ಅಧ್ಯಾಯ

ಕಾರಣ್ಯದಲ್ಲಿ ವನವಾಸವನ್ನು ಮಾಡಬೇಕೆಂದು ಆಜ್ಞಾಪಿಸಿದ ನನ್ನ ಇಷ್ಟದೇವತಾಸ್ವರೂಪನಾದ ದಶರಥಮಹಾರಾಜನು ಹೇಳಿದಂತೆ ನಾನು ಇರುವೆನಲ್ಲದೆ ಸಮಸ್ತ ಲೋಕಾಧಿಪತ್ಯವನ್ನಾದರೂ ಬಯಸುವವನಲ್ಲ ಎಂದು ನುಡಿದನು. ಶ್ರೀರಾಮನು ಭರತನಿಗೆ ತತ್ತ್ವವಿಚಾರವನ್ನು ತಿಳಿಸಿದ್ದು ಆಮೇಲೆ ಸಾಯಂಕಾಲವು ಪ್ರಾಪ್ತವಾಗಲು ಆ ರಾತ್ರಿಯನ್ನು ಅತ್ಯಂತ ಪ್ರಯಾಸದಿಂದ ಕಳೆದು ಮಾರನೆಯ ಪ್ರಾತಃಕಾಲದಲ್ಲಿದ್ದು ರಾಮಲಕ್ಷ್ಮಣ ಭರತಶತ್ರುಘ್ನರು ಮಂದಾಕಿನೀತೀರಕ್ಕೆ ಹೋಗಿ ಸ್ನಾನ ಸಂಧ್ಯಾವಂದನ ಜಪ ಹೋಮ ದೇವತಾರ್ಚನೆ ಮೊದಲಾದ ನಿತ್ಯಕರ್ಮಗಳನ್ನು ತೀರಿಸಿ ಕೊಂಡು ಆಶ್ರಮಕ್ಕೆ ಬಂದು ಚಿಂತಾಕ್ರಾಂತರಾಗಿ ಕುಳಿತಿದ್ದರು. ಆಗ ಭರತನು ಸಮಸ್ತ ಪ್ರಧಾನಿಗಳೂ ಕೇಳುವಹಾಗೆ ಶ್ರೀರಾಮನನ್ನು ಕುರಿತು ಎಲೈ ಸ್ವಾಮಿಯೆ, ನನ್ನ ತಾಯಿಯಾದ ಕೈಕೇಯಾದೇವಿಗೆ ಒಡಂಬಡಿಕೆಯನ್ನು ಹೇಳಿ ಸಂತವಿಸಿರುವೆನು. ನೀನು ನನ್ನ ವಶದಲ್ಲಿರುವ ರಾಜ್ಯವನ್ನು ಪರಿಪಾಲಿಸು. ವರ್ಷಾಕಾಲದಲ್ಲಿ ಹಳ್ಳಗಳು ಉಕ್ಕಿ ತುಂಬುವ ಪ್ರವಾಹದ ವೇಗದಿಂದ ಒಡೆಯುವ ಅಣೆಯನ್ನು ತಡೆಯುವುದಕ್ಕೆ ಹೇಗೆ ಮನುಷ್ಯರು ಸಮರ್ಥರಲ್ಲವೋ, ಹಾಗೆ ದಶರಥರಾಯನು ಸ್ವರ್ಗಸ್ಥನಾದಮೇಲೆ ನೀನು ಹೊರತಾಗಿ ರಾಜ್ಯಭಾರವನ್ನು ಹೊರುವವರಾರು ಉತ್ತಮಾಶ್ವದ ನಡಿಗೆಯನ್ನು ಅನುಕರಿಸಲು ಗಾರ್ದಭಕ್ಕೆ ಶಕ್ತಿಯಿಲ್ಲದಂತೆಯೂ ಗರುತ್ಮಂತನ ಗಮನವನ್ನು ಅನುಸರಿಸಲು ಮಿಕ್ಕ ಪಕ್ಷಿಗಳಿಗೆ ಶಕ್ತಿಯಿಲ್ಲದಂತೆಯೂ ನಿನ್ನಿಂದ ವಹಿಸಲು ಯೋಗ್ಯವಾದ ರಾಜ್ಯಭಾರವನ್ನು ವಹಿಸುವುದಕ್ಕೆ ನನಗೆ ಸಾಮರ್ಥ್ಯವಿಲ್ಲ. ಲೋಕದಲ್ಲಿ ಯಾವ ಪುರುಷನಿಂದ ಬಹುಮಂದಿ ಜೀವಿಸಿಕೊಂಡಿರುವರೋ ಆತನ ಬದುಕೇ ಬದುಕು. ಪರಾಧೀನವಾಗಿ ಬದುಕುವವನ ಜೀವನವು ವ್ಯರ್ಥಜೀವನ, ಒಬ್ಬ ಪುರುಷನು ಬೀಜವನ್ನು ಬಿತ್ತಿ ಸಸಿಯಾಗಿ ಮಾಡಿ ನೀರು ಹುಯ್ದು ಸಾಕಿ ಅದು ತಳಿರುಗಳೂ ದೊಡ್ಡ ಕೊಂಬೆಗಳೂ ಉಳ್ಳ ಮರವಾಗಿ ಬೆಳೆದು ಪುಷ್ಪಗಳಿಂದ ತುಂಬಿದರೂ ಮುಂದೆ ಫಲವನ್ನು ಬಿಡದಿದ್ದರೆ ಸಸಿಯನ್ನು ನೆಟ್ಟವನಿಗೆ ಹೇಗೆ ಸಂತೋಷವಿಲ್ಲವೋ ಹಾಗೆ ನೀನು ರಾಜನಾಗದಿದ್ದರೆ ನಮಗೆ ಸಂತೋಷವಿಲ್ಲ. ರಾಜ್ಯಭಾರವನ್ನು ವಹಿಸುವುದಕ್ಕೆ ನನ್ನ ಕೈಯಲ್ಲಾಗದು. ಅದಕ್ಕೆ ಕಾರಣವೇನೆಂದರೆ, ಈಗ ಸಕಲ ಪ್ರಧಾನರು ಸೇನಾನಾಯಕರು ಪುರಜನರು ಪರಿಜನರು ಮೊದಲಾದವರೆಲ್ಲರೂ ನಿನ್ನನ್ನೇ ಬಯಸುತ್ತಲಿದ್ದಾರೆ. ಅಂಧಕಾರದಲ್ಲಿ ಯಾವ ವಸ್ತುವನ್ನೂ ಕಾಣವೆ ವ್ಯಥೆಪಡುತ್ತಿರುವವರು ಸೂರ್ಯೋದಯವನ್ನು ಹೇಗೆ ಬಯಸುವರೋ ಆ ಬಗೆಯಲ್ಲಿ ಎಲ್ಲರೂ ನಿನ್ನ ಬರುವಿಕೆಯನ್ನೇ ಬಯಸುತ್ತಿದ್ದಾರೆ. ಅಂತಃಪುರದ ಸ್ತ್ರೀಯರೆಲ್ಲರೂ ನಿನಗೆ ರಾಜ್ಯಾಧಿಪತ್ಯವಾಗಲಾಗಿ ಸಂತೋಷದಿಂದ ಹಿಗ್ಗಲಿ ಎಂದು ಪ್ರಾರ್ಥನೆ ಮಾಡಿದನು. ಬಳಿಕ ಶ್ರೀರಾಮನು ದುಃಖದಿಂದ ವಿಲಾಪಿಸುತ್ತಿರುವ ಕೀರ್ತಿಸಂಪನ್ನನಾದ ಭರತನನ್ನು ಸಂತವಿಸಿ ಭರತ, ತನ್ನಿಷ್ಟದಂತೆ ಯಾವನೂ ಯಾವುದನ್ನೂ ಮಾಡಲಾರ. ಪುರುಷನು ಅಸ್ವತಂತ್ರ. ಪುರುಷನನ್ನು ವಿಧಿಯು ಇಲ್ಲಿಂದ ಅಲ್ಲಿಗೂ ಅಲ್ಲಿಂದ ಇಲ್ಲಿಗೂ ಎಳೆಯುತ್ತದೆ.

ಮುಂದುವರಿಯುವುದು...

# ನಾಗರಪಂಚಮಿ: ಸಂಸ್ಕೃತಿ, ವಿಜ್ಞಾನ ಬಾಂಧವ್ಯದ ಬೆಸುಗೆ



■ ಅನಿಲ್ ಕುಮಾರ್ ತೇಲಂಗಿ

ನಾಗರಪಂಚಮಿ, ಭಾರತದ ನೆಲದಲ್ಲಿ ಸಾವಿರಾರು ವರ್ಷಗಳಿಂದ ಆಚರಿಸಲ್ಪಡುತ್ತಿರುವ ಒಂದು ವಿಶೇಷ ಹಬ್ಬ. ಇದು ಕೇವಲ ಒಂದು ಧಾರ್ಮಿಕ ಆಚರಣೆಯಲ್ಲ, ಬದಲಿಗೆ ಪ್ರಕೃತಿಯೊಂದಿಗಿನ ಮಾನವನ ಅವಿನಾಭಾವ ಸಂಬಂಧ, ಕೃತಜ್ಞತೆ, ಆಳವಾದ ಆಧ್ಯಾತ್ಮಿಕ ನಂಬಿಕೆಗಳ ಸಂಕೇತವಾಗಿದೆ. ನಾಗಾರಾಧನೆಯು ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿದೆ. ಶಿವನ ಕೊರಳಲ್ಲಿ ಸರ್ಪ, ವಿಷ್ಣುವಿನ ಶಯನಕ್ಕೆ ಆದಿಶೇಷ – ಹೀಗೆ ಹಲವು ದೈವಿಕ ಸಂಬಂಧಗಳಿಂದ ನಾಗರಪಂಚಮಿ ಪ್ರಾಮುಖ್ಯತೆ ಪಡೆದಿದೆ.

ವೈಜ್ಞಾನಿಕ ಹಿನ್ನೆಲೆಯಲ್ಲಿ ನಾಗರ ಪಂಚಮಿ ಶ್ರಾವಣ ಮಾಸದ ಶುಕ್ಲ ಪಕ್ಷದ ಪಂಚಮಿಯಂದು ಆಚರಿಸಲಾಗುವ ನಾಗರಪಂಚಮಿಗೆ ವೈಜ್ಞಾನಿಕ ಕಾರಣಗಳೂ ಇವೆ. ಮಳೆಗಾಲದ ಅವಧಿ ಇದಾಗಿರುವುದರಿಂದ ಹಾವುಗಳು ತಮ್ಮ ಬಿಲಗಳಿಂದ ಹೊರಬರುತ್ತವೆ. ನೀರಿನಿಂದ ತುಂಬಿದ ಹುತ್ತಗಳು ಮತ್ತು ಬಿಲಗಳಿಂದ ಹೊರಬಂದ ಹಾವುಗಳು ಮನುಷ್ಯರ ವಾಸಸ್ಥಳಗಳಿಗೆ ಬರುವ ಸಾಧ್ಯತೆ ಹೆಚ್ಚು. ಈ ಸಮಯದಲ್ಲಿ ಮಾನವ–ಸರ್ಪ ಸಂಘರ್ಷ ಹೆಚ್ಚಾಗಬಹುದು. ನಾಗಗಳನ್ನು ಪೂಜಿಸುವುದರ ಮೂಲಕ, ಅವುಗಳ ಬಗ್ಗೆ ಇರುವ ಭಯವನ್ನು ಕಡಿಮೆ ಮಾಡಿ, ಅವುಗಳಿಗೆ ಹಾನಿ ಮಾಡದಂತೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶ ಈ ಹಬ್ಬಕ್ಕಿದೆ. ಇದು ಹಾವುಗಳ ಸಂರಕ್ಷಣೆಗೆ ಒಂದು ಪರೋಕ್ಷ ಮಾರ್ಗ ಹಾವುಗಳು ಪರಿಸರ ಸಮತೋಲನದಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಇಲಿಗಳು, ಕೀಟಗಳು ಮತ್ತು ಬೆಳೆಗಳಿಗೆ ಹಾನಿ ಮಾಡುವ ಇತರ ಪ್ರಾಣಿಗಳನ್ನು ನಿಯಂತ್ರಿಸುವ ಮೂಲಕ ಹಾವುಗಳು ರೈತರಿಗೆ ಉಪಕಾರಿ. ಹೀಗೆ ಪರಿಸರಕ್ಕೆ ಅಪಾರ ಕೊಡುಗೆ ನೀಡುವ ಹಾವುಗಳಿಗೆ ಕೃತಜ್ಞತೆ ಸಲ್ಲಿಸುವ ಒಂದು ಮಾರ್ಗವಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ನಾಗರಪಂಚಮಿಯಂದು ಭೂಮಿ ಅಗೆಯುವುದನ್ನು ನಿಷಿದ್ಧವೆಂದು ಪರಿಗಣಿಸಲಾಗುತ್ತದೆ. ಇದು ಮಣ್ಣಿನೊಳಗಿರುವ ಹಾವುಗಳಿಗೆ ಹಾನಿಯಾಗುವುದನ್ನು ತಡೆಯಲು ಇರುವ ಒಂದು ಜಾಗರೂಕ ವೈಜ್ಞಾನಿಕ ನಿರ್ಧಾರವೇ ಹೌದು. ನಾಗರಪಂಚಮಿಯ ಐತಿಹ್ಯ ಮತ್ತು ಆಳವಾದ ನಂಬಿಕೆಗಳು ನಾಗರಪಂಚಮಿಯ ಆಚರಣೆಗೆ ಹಲವಾರು ಪೌರಾಣಿಕ ಕಥೆಗಳು ಆಧಾರವಾಗಿವೆ. ಮಹಾಭಾರತದ



ಉದಯವಾಹಿನಿ ಚಿತ್ರ

ಪ್ರಸಂಗವೊಂದು ಈ ಹಬ್ಬದ ಆಚರಣೆಗೆ ಪ್ರಮುಖ ಕಾರಣವಾಗಿದೆ. ಪರೀಕ್ಷಿತ ಮಹಾರಾಜನನ್ನು ತಕ್ಷಕ ಎಂಬ ಸರ್ಪ ಕೊಂದಾಗ, ಅವನ ಮಗ ಜನಮೇಜಯನು ಸರ್ಪಕುಲವನ್ನೇ ನಾಶಮಾಡಲು ಸರ್ಪಯಜ್ಞವನ್ನು ಪ್ರಾರಂಭಿಸುತ್ತಾನೆ. ಆಸ್ತಿಕ ಮುನಿಯ ಮಧ್ಯಪ್ರವೇಶದಿಂದ ಶ್ರಾವಣ ಶುಕ್ಲ ಪಂಚಮಿಯಂದು ಈ ಯಜ್ಞ ನಿಲ್ಲುತ್ತದೆ, ಸರ್ಪಕುಲ ಉಳಿಯುತ್ತದೆ. ಆ ದಿನವನ್ನು ನಾಗರ ಪಂಚಮಿಯೆಂದು ಆಚರಿಸಲಾಗುತ್ತದೆ.

ಇನ್ನೊಂದು ನಂಬಿಕೆಯ ಪ್ರಕಾರ, ಶ್ರೀ ಕೃಷ್ಣನು ಕಾಳಿಂದಿ ನದಿಯಲ್ಲಿದ್ದ ಕಾಳಿಯ ಸರ್ಪವನ್ನು ಮರ್ದಿಸಿ, ನದಿಯ ನೀರನ್ನು ಶುದ್ಧಗೊಳಿಸಿದ ದಿನ ಇದು. ಇದು ದುಷ್ಟ ಶಕ್ತಿಗಳ ಮೇಲೆ ಶುಭ ಶಕ್ತಿಗಳ ವಿಜಯದ ಸಂಕೇತ. ಆಧ್ಯಾತ್ಮಿಕವಾಗಿ, ನಾಗವು ದೇಹದಲ್ಲಿ ಸುಪ್ತವಾಗಿರುವ ಕುಂಡಲಿನಿ ಶಕ್ತಿಯ ಪ್ರತೀಕ. ಈ ಶಕ್ತಿಯನ್ನು ಜಾಗೃತಗೊಳಿಸುವುದು ಮೋಕ್ಷಕ್ಕೆ ದಾರಿ ಎಂಬ ನಂಬಿಕೆಯೂ ಇದೆ. **ಉತ್ತರ ಕರ್ನಾಟಕದಲ್ಲಿ ನಾಗರಪಂಚಮಿಯ ವೈಶಿಷ್ಟ್ಯ:** ಉತ್ತರ ಕರ್ನಾಟಕದಲ್ಲಿ ನಾಗರಪಂಚಮಿ ಒಂದು ವಿಶಿಷ್ಟವಾದ ಮತ್ತು ಸಂಭ್ರಮದ ಹಬ್ಬವಾಗಿದೆ. ಇಲ್ಲಿನ ಆಚರಣೆಗಳು ಧಾರ್ಮಿಕತೆಯ ಜೊತೆಗೆ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಬಿಂಬಿಸುತ್ತವೆ.

**ಜಾನಪದ ಸಂಸ್ಕೃತಿಯ ಬಿಂಬ**

**ಹಳ್ಳಿಗಳಲ್ಲಿ ನಾಗರ ಪಂಚಮಿ ಹಾಡುಗಳು, ಉಯ್ಯಾಲೆ ಆಟಗಳು, ಮತ್ತು ನಾಗಾರಾಧನೆಗೆ ಸಂಬಂಧಿಸಿದ ಜಾನಪದ ಕಥೆಗಳು ಮತ್ತು ಹಾಡುಗಳು ಮನೆಮಾತಾಗಿವೆ. ಇದು ಗ್ರಾಮೀಣ ಸಂಸ್ಕೃತಿಯ ಶ್ರೀಮಂತಿಕೆಯನ್ನು ಬಿಂಬಿಸುತ್ತದೆ ಮತ್ತು ಹಬ್ಬದ ವಾತಾವರಣವನ್ನು ಇನ್ನಷ್ಟು ಉಲ್ಲಾಸಭರಿತಗೊಳಿಸುತ್ತದೆ. ನಾಗರಪಂಚಮಿಯು ಕೇವಲ ಹಾವುಗಳ ಪೂಜೆಯಲ್ಲ. ಅದು ಪ್ರಕೃತಿಯ ಸಮತೋಲನವನ್ನು ಕಾಪಾಡುವ ಸಂದೇಶ, ಕೌಟುಂಬಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಒಂದು ಸೌಹಾರ್ದಯುತ ಆಚರಣೆ, ಮತ್ತು ನಮ್ಮ ಪೂರ್ವಜರ ನಂಬಿಕೆಗಳನ್ನು ಜೀವಂತವಾಗಿರಿಸುವ ಒಂದು ಸುಂದರ ಸಾಂಸ್ಕೃತಿಕ ಪರಂಪರೆ. ಈ ಹಬ್ಬವು ಇಂದಿಗೂ ಸಮಾಜದಲ್ಲಿ ಸೌಹಾರ್ದತೆ ಮತ್ತು ಭಕ್ತಿಯನ್ನು ಬಿಂಬಿಸುವ ಒಂದು ಮಹತ್ವದ ಆಚರಣೆಯಾಗಿದೆ.**

**ನಾಗರ ಕಲ್ಲುಗಳ ಆರಾಧನೆ:** ಈ ಭಾಗದಲ್ಲಿ ನಾಗರ ಕಲ್ಲುಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ದೇವಾಲಯಗಳಲ್ಲಿ, ಮರಗಳ ಕೆಳಗೆ, ಹಳ್ಳಿಗಳಲ್ಲಿರುವ ನಾಗರ ಕಲ್ಲುಗಳನ್ನು ಶುಚಿಗೊಳಿಸಿ, ಅರಿಶಿನ–ಕುಂಕುಮ ಲೇಪಿಸಿ, ಹೂವುಗಳಿಂದ ಅಲಂಕರಿಸಲಾಗುತ್ತದೆ. ಹಾಲು, ಜೇನುತುಪ್ಪ, ಗಂಧ, ತುಪ್ಪ, ಹಣ್ಣು, ಮತ್ತು ಅರಿಶಿನ–ಕುಂಕುಮ ಮಿಶ್ರಿತ ನೀರಿನಿಂದ ಅಭಿಷೇಕ ಮಾಡಿ, ಭಕ್ತಿಯಿಂದ ಪೂಜಿಸಲಾಗುತ್ತದೆ. ಕೆಲವೆಡೆ ಹುತ್ತಗಳಿಗೆ ಹಾಲು ಮತ್ತು ಸಿಹಿ ಪದಾರ್ಥಗಳನ್ನು ಇಡುವ ಸಂಪ್ರದಾಯವೂ ಇದೆ.


**ಸಿಹಿ ತಿಂಡಿಗಳ ಮಹಾಪೂರ:** ನಾಗರಪಂಚಮಿ ಉತ್ತರ ಕರ್ನಾಟಕದಲ್ಲಿ ಬಗೆಬಗೆಯ ಸಿಹಿ ತಿಂಡಿಗಳ ತಯಾರಿಗೆ ಹೆಸರುವಾಸಿಯಾಗಿದೆ. ಕೋಡುಬಳೆ, ಕಡಬು, ಶೇಂಗಾ ಹೋಳಿಗೆ, ಬೆಲ್ಲದ ಹೋಳಿಗೆ, ತುಪ್ಪದ ಮಂಡಿಗೆ ಮುಂತಾದವುಗಳನ್ನು ಪ್ರೀತಿಯಿಂದ ತಯಾರಿಸಲಾಗುತ್ತದೆ. ಈ ಸಿಹಿ ತಿಂಡಿಗಳು ಹಬ್ಬದ ಸಂಭ್ರಮವನ್ನು ಹೆಚ್ಚಿಸುವುದಲ್ಲದೆ, ಸಂಬಂಧಗಳನ್ನು ಗಟ್ಟಿಗೊಳಿಸುವ ಮಾಧ್ಯಮಗಳಾಗಿವೆ. ಇವುಗಳನ್ನು ನೈವೇದ್ಯ ಮಾಡಿ ನಂತರ ಕುಟುಂಬ ಸದಸ್ಯರು, ಸ್ನೇಹಿತರು, ನೆರೆಹೊರೆಯವರಿಗೆ ಹಂಚಲಾಗುತ್ತದೆ.

**ಅಣ್ಣ–ತಂಗಿಯರ ಬಾಂಧವ್ಯದ ಹಬ್ಬ:** ಉತ್ತರ ಕರ್ನಾಟಕದಲ್ಲಿ ನಾಗರ ಪಂಚಮಿಯನ್ನು ಅಣ್ಣ–ತಂಗಿಯರ ಹಬ್ಬ ಎಂದೇ ಕರೆಯಲಾಗುತ್ತದೆ. ಅಣ್ಣಂದಿರು ತಮ್ಮ ಸಹೋದರಿಯರ ಮನೆಗಳಿಗೆ ಹೋಗಿ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ಸಹೋದರಿಯರು ತಮ್ಮ ಸಹೋದರರ ಯೋಗಕ್ಷೇಮ, ದೀರ್ಘಾಯುಷ್ಯ ಮತ್ತು ಸಮೃದ್ಧಿಗಾಗಿ ನಾಗದೇವತೆಯನ್ನು ಪೂಜಿಸುತ್ತಾರೆ. ಇದು ರಕ್ಷಾಬಂಧನದಂತೆಯೇ ಅಣ್ಣ–ತಂಗಿಯರ ಅನ್ಯೋನ್ಯ ಸಂಬಂಧವನ್ನು ಸಾರುವ ಹಬ್ಬವಾಗಿದೆ.

**ಬಾಗಿನ ಸಂಪ್ರದಾಯ:** ಈ ಪ್ರದೇಶದ ಹಲವು ಭಾಗಗಳಲ್ಲಿ ಬಾಗಿನ ಕೊಡುವ ಸಂಪ್ರದಾಯ ರೂಢಿಯಲ್ಲಿದೆ.

ಅಕ್ಕ– ಪಕ್ಕದ ಮನೆಗಳಿಗೆ, ಸಂಬಂಧಿಕರ ಮನೆಗಳಿಗೆ ಅರಿಶಿನ, ಕುಂಕುಮ, ಗೆಜ್ಜೆವಸ್ತ್ರ, ಹಣ್ಣು, ಬೆಲ್ಲ, ಇತರ ಶುಭ ವಸ್ತುಗಳನ್ನೊಳಗೊಂಡ ಬಾಗಿನವನ್ನು ವಿನಿಮಯ ಮಾಡಿ ಕೊಳ್ಳಲಾಗುತ್ತದೆ. ಇದು ಸೌಹಾರ್ದತೆ, ಸಂಬಂಧಗಳನ್ನು ಬೆಸೆಯುವ ಸುಂದರ ಸಂಪ್ರದಾಯ.

# ಕಾರವಾರ ಸರಕಾರಿ ಗೋಶಾಲೆಯ ಕಾಮಗಾರಿಯಲ್ಲಿ ಲಕ್ಷಾಂತರ ರೂಪಾಯಿ ಹಗರಣ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕಾರವಾರ

ಕಾರವಾರ ತಾಲ್ಲೂಕಿನ ಕಣಸಗಿರಿ ಗ್ರಾಮದ ಸರ್ವೆ ನಂಬರ್ 95 ರಲ್ಲಿ ಜಿಲ್ಲಾ ನಿರ್ಮಿತಿ ಕೇಂದ್ರದ ವತಿಯಿಂದ 2023 ರಿಂದ ಗೋಶಾಲೆ ನಿರ್ಮಾಣ ಕಾಮಗಾರಿ ಮಾಡಿದ್ದು, ಇದರಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ, ಅತ್ಯಂತ ಕಳಪೆ ಗುಣಮಟ್ಟದ ಕಾಮಗಾರಿ ಮತ್ತು ಕಾನೂನುಬಾಹಿರ ಕಾಮಗಾರಿ ಹಾಗೂ ಅವಶ್ಯಕತೆ ಇರುವ ಸಾಮಗ್ರಿಗಳ ಖರೀದಿಯಲ್ಲೂ ಅವ್ಯವಹಾರ ನಡೆದಿರುವುದು ಗಮನಕ್ಕೆ ಬಂದಿದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು, ಅತ್ಯಂತ ಕಳಪೆ ಮಟ್ಟದ ಕಾಮಗಾರಿಯನ್ನು ಮಾಡಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಮಾಡಿದ್ದು, ಅವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರರಾದ ಶ್ರೀ. ಮೋಹನ ಗೌಡ ಒತ್ತಾಯಿಸಿದ್ದಾರೆ. ಅವರು ಬುಧವಾರ 23 ಜುಲೈ ರಂದು ಕಾರವಾರದ ಜಿಲ್ಲಾ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತಿದ್ದರು. ಈ ವೇಳೆ ಸನಾತನ ಗೋಮಾತಾ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ. ಸಂದೀಪ ಆರ್ ಗೋಕರ್ಣಕರ್, ಸನಾತನ ರಾಷ್ಟ್ರೀಯ ಸೇವಾ ಸಂಘದ ಅಧ್ಯಕ್ಷರಾದ ಶ್ರೀ. ಶರತ್, ಗೋರಕ್ಷಕರು ಮತ್ತು ಭಜರಂಗದಳದ ಪ್ರಮುಖರಾದ ಶ್ರೀ. ಅಮಿತ್ ಮಾಳಶೇಖರ, ಮತ್ತು ಭಗತ್ ಸಿಂಗ್ ಸೇನೆ ಅಧ್ಯಕ್ಷರಾದ ಶ್ರೀ. ಸೂರ್ಯಕಾಂತ ಇವರು ಉಪಸ್ಥಿತರಿದ್ದರು.

ಶ್ರೀ. ಮೋಹನ ಗೌಡ ಮುಂದೆ ಮಾತನಾಡಿ, ನಿರ್ಮಿತಿ ಕೇಂದ್ರವು ಈ ಕಾಮಗಾರಿಯನ್ನು 17–01–2023 ರಂದು ಪ್ರಾರಂಭಿಸಿದೆ. ಆದರೆ ಈ ಕಾಮಗಾರಿಗೆ ಪಶುಪಾಲನೆ ಇಲಾಖೆಯ ತಾಂತ್ರಿಕ ಅನುಮೋದನೆಯನ್ನು ಕಾಮಗಾರಿ ಮುಗಿದ ನಂತರ ಅಂದರೆ 22.10.2024 ರಂದು ಪಡೆದುಕೊಂಡಿದ್ದಾರೆ. ನಿಯಮಾನುಸಾರ ತಾಂತ್ರಿಕ ಅನುಮತಿಯನ್ನು ಕಾಮಗಾರಿ ಪ್ರಾರಂಭವಾಗುವ ಮೊದಲೇ ಪಡೆದುಕೊಳ್ಳಬೇಕು. ಗೋಶಾಲೆ ಕಾಮಗಾರಿಯ ಅಂದಾಜು ಮೊತ್ತ 50 ಲಕ್ಷ ರೂಪಾಯಿಗಳು. ಇಲ್ಲಿಯವರೆಗೆ ಅಪೂರ್ಣಗೊಂಡ ಕಾಮಗಾರಿಯ ಮೊತ್ತ 42.12ಲಕ್ಷಗಳು. ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ನಮಗೆ ನೀಡಿರುವ ಮಾಹಿತಿ ಪ್ರಕಾರ ಬಿಲ್‌ನ ಮೊತ್ತ 38.90 ಲಕ್ಷ ರೂಪಾಯಿಗಳು ಹೀಗೆ ವ್ಯತ್ಯಾಸ ಕಂಡು ಬರುತ್ತಿದೆ, ಗೋಡೆಗಳ ನಿರ್ಮಾಣದ ಕೆಲಸಕ್ಕೆ ಅಂದಾಜು 5300/– ರೂಗಳ ಕಾಂಕ್ರೀಟ್ ಬ್ಲಾಕ್ ಗಳ ಅವಶ್ಯಕತೆ ಇದ್ದು, ಆವಶ್ಯವಿರುವ ಗೋಡೆಗಳ ನಿರ್ಮಾಣ ಕೆಲಸ ಪೂರ್ಣಗೊಂಡಿದೆ. ಆದರೆ ನಮಗೆ ನೀಡಿರುವ ಬಿಲ್ಲುಗಳ ಪ್ರಕಾರ ಇಲ್ಲಿವರೆಗೆ 3120 ರೂಪಾಯಿಯ ಕಾಂಕ್ರೀಟ್ ಬ್ಲಾಕ್‌ಗಳು ಖರೀದಿಸಲಾಗಿದೆ. ಉಳಿದ ಬ್ಲಾಕುಗಳ ಖರೀದಿ ಬಗ್ಗೆ ಯಾವುದೇ ಬಿಲ್ಲುಗಳು ಲಭ್ಯ ಇಲ್ಲ, ಕಬ್ಬಿಣದ ಸರಳುಗಳ ಪ್ರಮಾಣ ಅಂದಾಜು ಪತ್ರಿಕೆಯಲ್ಲಿ 2601.05 ಕೆಜಿ ಇದೆ. ಆದರೆ ನಮಗೆ ನೀಡಿರುವ ಬಿಲ್ಲುಗಳ ಪ್ರಕಾರ 4248.10 ಕೆ.ಜಿ ಖರೀದಿಸಲಾಗಿದೆ. ಆವಶ್ಯಕತೆ ಪ್ರಮಾಣಕ್ಕಿಂತ ಜಾಸ್ತಿ ಖರೀದಿಸಲಾಗಿದೆ. ಹೀಗೆ ಅಲ್ಲಿಯ ಟೈಲ್ಸ್, ಪೈಪ್‌ಗಳು, ಮೇಲ್ಛಾವಣಿ, ಚೇನ್ ಲಿಂಕ್, ಎಲೆಕ್ಟ್ರಿಕ್ ವೈರ್, ಪೇಂಟ್, ಪ್ಲೈವುಡ್, ಸಿಮೆಂಟ್ ಈ ಎಲ್ಲಾ ವಸ್ತುಗಳ ಖರೀದಿ ಪ್ರಕ್ರಿಯೆಯಲ್ಲಿ ದೊಡ್ಡ ಮಟ್ಟದ ಹಗರಣ ನಡೆದಿದ್ದು ಬಿಲ್ ಗಳಲ್ಲಿರುವ ಮಾಹಿತಿ ಮತ್ತು ಪ್ರತ್ಯಕ್ಷದಲ್ಲಿರುವ ವಸ್ತುಗಳಿಗೆ ತಾಳೆ ಆಗುತ್ತಿಲ್ಲ ಎಂಬುದನ್ನು ಬೆಳಕಿಗೆ ತಂದರು. ಈ ಎಲ್ಲಾ ಅಂಶಗಳು ಗಮನಿಸಿದಾಗ ಈ ಕಾಮಗಾರಿಯಲ್ಲಿ ನಿರ್ಮಿತಿ ಕೇಂದ್ರದ ಯೋಜನೆ ವ್ಯವಸ್ಥಾಪಕರಾದ ಹರ್ಷ ಶೆಟ್ಟಿಗಾರ ಮತ್ತು ಅಭಿಯಂತರರಾದ ಕಾಮರಾಜ್ ಇವರುಗಳು ಲಕ್ಷಾಂತರ ರೂಪಾಯಿಗಳ ಬಹುದೊಡ್ಡ ಅವ್ಯವಹಾರ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ ಮಾಡಿರುವುದು ಗಮನಕ್ಕೆ ಬರುತ್ತದೆ. ಆದ್ದರಿಂದ ಸದರಿ ಅಧಿಕಾರಿಗಳ ಮೇಲೆ ಆಡಳಿತಾತ್ಮಕವಾಗಿ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ಅವರನ್ನು ಕೂಡಲೇ ಅವರು ನಿರ್ವಹಿಸುತ್ತಿರುವ ಹುದ್ದೆಯಿಂದ ಅಮಾನತು ಮಾಡಬೇಕು. ನಿರ್ಮಿತಿ ಕೇಂದ್ರದಿಂದ ಒಳ್ಳೆ ಗುಣಮಟ್ಟದ ಕಾಮಗಾರಿ ನಿರ್ಮಾಣ ಮಾಡುವಲ್ಲಿ ಸೂಕ್ತ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

**ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕಠಿಣ ಕ್ರಮ**

# ಎಲೆ ಮಲ್ಲಪ್ಪ ಶೆಟ್ಟಿ ಕೆರೆಗೆ ಬೇಲಿ ಹಾಕಲು ಸೂಚನೆ

• ಉದಯವಾಹಿನಿ, ಬೆಂಗಳೂರು



ಎಲೆ ಮಲ್ಲಪ್ಪ ಶೆಟ್ಟಿ ಕೆರೆಗೆ 10 ದಿನದೊಳಗೆ ಬೇಲಿ ಹಾಕಬೇಕು ಎಂದು ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಪಂ. ರಾಜ್ ಸಂಸ್ಥೆಗಳ ಸಮಿತಿ ಸೂಚಿಸಿದೆ. ವರ್ತೂರು ಕೆರೆಗೆ ಚರಂಡಿ ನೀರು ಸೇರದಂತೆ ಕ್ರಮ ಕೈಗೊಳ್ಳಲಾಗಿದೆ. ಮಳೆ ನೀರು ಮಾತ್ರ ಹರಿಯುತ್ತಿದೆ.

ಯಾವುದೇ ಒತ್ತುವರಿ ಇರುವುದಿಲ್ಲ. ಬಿಬಿಎಂಪಿಗೆ ಕೆರೆ ನಿರ್ವಹಣೆಯನ್ನು ವರ್ಗಾಯಿಸುವ ಬಗ್ಗೆ ಮಾತುಕತೆ ನಡೆದಿದೆ ಎಂದು ಬಿಡಿಎ ಅಧಿಕಾರಿಗಳು ಮಾಹಿತಿ ನೀಡಿದರು.

ಕೆರೆಯ ಸುತ್ತಲಿನ ಸ್ವಚ್ಛತೆ ಕುರಿತಂತೆ ಬಿಡಿಎ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಅಧ್ಯಕ್ಷರು, ಬಿಡಿಎ, ಬಿಬಿಎಂಪಿ, ಕಂದಾಯ ಕೆರೆಗಳಿಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳನ್ನು ಒಳಗೊಂಡ ಸಭೆಯನ್ನು ಶೀಘ್ರದಲ್ಲಿ ಹಮ್ಮಿಕೊಳ್ಳಬೇಕು ಬಿಡಿಎ ಇಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ಅವರಿಗೆ ಸೂಚಿಸಿದರು.

# ವೈರಾಗ್ಯ ಮತ್ತು ವಿರಹ..!



☛ ವಿಶ್ವಾಸ್.ಡಿ.ಗೌಡ

• ಉದಯವಾಹಿನಿ, ವಿಶೇಷ

ಇವೆರಡೂ ಪರಸ್ಪರ ವಿರೋಧಿ ಅಂಶಗಳು. ರಾಗ ವಿಮುಖತೆಯಿಂದ ವೈರಾಗ್ಯ ಉಂಟಾದರೆ, ರಾಗ ತೀವ್ರತೆಯಿಂದ ವಿರಹ ಉಂಟಾಗುತ್ತದೆ. ಆದರೂ ಇವೆರಡೂ ತಮ್ಮ ತಮ್ಮ ನೆಲೆಗಟ್ಟಿನಲ್ಲಿ ವ್ಯಕ್ತಿಯನ್ನು ಅಧ್ಯಾತ್ಮಪಥದಲ್ಲಿ ನಡೆಸುವುದು ಹೇಗೆ ಒಂದು ಮತ್ತೊಂದರ ವಿರೋಧ ಅಂಶ ಎಂದಾದಲ್ಲಿ, ಪರಿಣಾಮವೂ ವಿರೋಧವೇ ಆಗಿರಬೇಕಲ್ಲವೆ? ಹೌದು. ಆದರೆ ಹಾಗೆ ಆಗಲೇಬೇಕೆಂದೇನೂ ಇಲ್ಲ.

ಮನುಷ್ಯನ ಭಾವ ಪ್ರಪಂಚದಲ್ಲಿ ಅತ್ಯಂತ ಮಧುರವಾದ, ಅಷ್ಟೇ ಯಾತನಾಮಯವಾದ ಸಂಗತಿ ಏನಾದರೂ ಇದ್ದರೆ, ಅದು ವಿರಹ. ಸಂಬಂಧಗಳನ್ನು ಬೆಸೆದುಕೊಳ್ಳುವ ವ್ಯಕ್ತಿಯ ಮುಂದಿನ ಹೆಜ್ಜೆ, ಅದರ ಸೂತ್ರವನ್ನು ತನ್ನ ಕೈಯಲ್ಲೇ ಹಿಡಿದಿಟ್ಟುಕೊಳ್ಳಲು ಪ್ರಯತ್ನಿಸುವುದು, ತಾನು ಬೆಳೆಸಿದ ಸಂಬಂಧವು ತನ್ನದಾಗಿಯೇ ಉಳಿಯಬೇಕೆನ್ನುವ ಭಾವ ವ್ಯಕ್ತಿಯಲ್ಲಿ ಹೆಚ್ಚು ಅಭದ್ರತೆಯನ್ನೂ ಆತಂಕವನ್ನೂ ಹುಟ್ಟುಹಾಕುತ್ತದೆ. ಪ್ರೀತಿಯ ವ್ಯಕ್ತಿ ದೂರವಾದಾಗ ತಮ್ಮ ನಡುವಿನ ಬಾಂಧವ್ಯದ ಗಾಢತೆಯ ಅರಿವಾಗಿ ಅದು ಸಂತಸವನ್ನೆ ನೀಡಿದರೂ ಅಗಲಿಕೆಯ ದುಃಖ ಹೆಚ್ಚು ತೀವ್ರವಾಗಿ ಕಾಡತೊಡಗುತ್ತದೆ. ಈ ಅಗಲಿಕೆಯು ಆ ವ್ಯಕ್ತಿಯ ನೆನವರಿಕೆಯಲ್ಲಿಯೇ ವ್ಯಸ್ತರಾಗಿರುವಂತೆ ಮಾಡುತ್ತದೆ. ಇಲ್ಲೊಂದು ಸೌಂದರ್ಯವಿದೆ. ವಿರಹಕ್ಕೆ ಕಾರಣವಾಗುವಷ್ಟು

ಆಪ್ತತೆ ಇರುವ ಸಂಬಂಧಗಳು ಇಬ್ಬರು ವ್ಯಕ್ತಿಗಳನ್ನು ಭಾವುಕವಾಗಿ ಬೇರೆಬೇರೆಯಾಗಿ ಇರಿಸುವುದಿಲ್ಲ. ಅವರಲ್ಲಿ ತಾನೇ ಅವರೆಂಬ ತಾದಾತ್ಮ್ಯ ಇರುತ್ತದೆ. ವಿರಹದಲ್ಲಿ ವ್ಯಕ್ತಿಯು ತನ್ನ ಸಂಗಾತಿಯನ್ನು ಎಷ್ಟು ಭಾವಿಸಿಕೊಳ್ಳುತ್ತಾನೋ ಅಷ್ಟೇ ತನ್ನನ್ನೂ ಭಾವಿಸಿಕೊಳ್ಳುತ್ತಾನೆ. ತನ್ನನ್ನೇ ಕಳೆದುಕೊಂಡಂತೆ, ತನ್ನನ್ನೇ ತಾನು ಮರಳಿ ಪಡೆಯಬೇಕೆಂಬಂತೆ ಅವನ ವರ್ತನೆ, ಸಾಧನೆ, ಪ್ರಯತ್ನಗಳೆಲ್ಲವೂ ಇರುತ್ತವೆ. ಈ ಪ್ರಕ್ರಿಯೆ ಮಾನಸಿಕ ಸ್ಥಿತಿಯಲ್ಲಿ ನಿಲ್ಲದೆ ಆತ್ಮಸ್ಥ ಭಾವಕ್ಕೆ ಏರಿದ್ದೇ ಆದರೆ, ವ್ಯಕ್ತಿಯು ಆಧ್ಯಾತ್ಮಿಕ ಶೃಂಗವನ್ನು ತಲುಪುವುದು ನಿಶ್ಚಿತ. ಏಕೆಂದರೆ, ಯಾವಾಗ ಈ ಭಾವನೆಯು ಮನಸ್ಸಿನ ವ್ಯೂಹದಿಂದ ಬಿಡಿಸಿಕೊಂಡು ಆತ್ಮಸ್ಥಗೊಳ್ಳುವುದೋ, ಆಗ ಭೌತಿಕ ವ್ಯಕ್ತಿಯ ವಾಂಛೆ ಅಳಿದು, ಆತ್ಮ ಸಂಗಾತದ ವಾಂಛೆ ಆರಂಭವಾಗುತ್ತದೆ. ಈ ವಾಂಛೆಯು ನಮ್ಮನ್ನು ನಮ್ಮೊಡನೆಯೇ ಬೆಸೆಯುತ್ತ, ನಮ್ಮೊಳಗೆ ನಾವು ಕಳೆದುಹೋಗುತ್ತಲೇ ನಮಗೆ ನಮ್ಮನ್ನು ಕೊಡಿಸುತ್ತ ದಿವ್ಯಾನುಭೂತಿಯನ್ನು ಉಂಟು ಮಾಡುತ್ತದೆ. ಈ ವಿರಹ ವೈಯಕ್ತಿಕ ನೆಲೆಯಲ್ಲಿದ್ದುಕೊಂಡು ಆತ್ಮಸ್ಥಗೊಂಡರೇನೇ ಇಷ್ಟು ಫಲವುಂಟು, ಇನ್ನು ದೈವಿಕ ನೆಲೆಗೆ ಏರಿದರೆ? ಹಾಗೆ ಏರಿದ್ದೇ ಆದರೆ, ದಾಸರು, ಮೀರಾ, ಅಕ್ಕ ಮಹಾದೇವಿ, ಚೈತನ್ಯ ಮಹಾಪ್ರಭು, ರಾಮಕೃಷ್ಣ ಪರಮಹಂಸರಂಥ ಅನುಭಾವಿಗಳ ಫಲ ದೊರಕುವುದು ನಿಶ್ಚಿತ.

**ವೈರುಧ್ಯವೂ ಪೂರಕವೂ.** ರಾಗ ತೀವ್ರತೆಯ ವಿರಹವೂ ಹಾಗೆಯೇ. ವೈರಾಗ್ಯವು ನಮ್ಮನ್ನು ಪ್ರಿಯತಮರಿಂದ ವಿಮುಖರನ್ನಾಗಿಸುವ ಮೂಲಕ ನಮ್ಮ ಜೊತೆ ನಾವು ಇರುವಂತೆ ಮಾಡಿದರೆ, ವಿರಹವು ನಮ್ಮನ್ನು ಪ್ರಿಯತಮರೊಡನೆ ತಾದಾತ್ಮ್ಯಗೊಳಿಸುವ ಮೂಲಕ ನಮ್ಮ ಜೊತೆ ನಾವು ಇರುವಂತೆ ಮಾಡುತ್ತದೆ. ಹೀಗೆ ವೈರಾಗ್ಯ ವಿರಹಗಳೆರಡೂ ನಮ್ಮನ್ನು ಅಧ್ಯಾತ್ಮ ಶೃಂಗದೆಡೆಗೆ ಕರೆದೊಯ್ಯುವ ಮಾರ್ಗಗಳಾಗಿ ಒದಗುತ್ತವೆ.



# ಆಷಾಢ ಅಮಾವಾಸ್ಯೆಯಂದು ದೀಪ ಪೂಜೆ ಮಾಡುವುದರ ಮಹತ್ವ

ಆಷಾಢ ಅಮಾವಾಸ್ಯೆಯಂದು ಅಗ್ನಿಗೆ ಕೃತಜ್ಞತೆಯನ್ನು ಸಲ್ಲಿಸಲು ದೀಪ ಪೂಜೆಯನ್ನು ಮಾಡಬೇಕು.

**1. ದೀಪ ಪೂಜೆಯನ್ನು ಮಾಡುವ ಶಾಸ್ತ್ರ:** ದೀಪದ ಜ್ಯೋತಿಯು ಅಗ್ನಿತತ್ವದ ಪ್ರತೀಕವಾಗಿದೆ. ಅಗ್ನಿಗೆ ಕೃತಜ್ಞತೆಯನ್ನು ಸಲ್ಲಿಸಲು ದೀಪ ಪೂಜೆಯನ್ನು ಮಾಡುತ್ತೇವೆ.

**2. ಪಂಚತತ್ತ್ವಗಳಲ್ಲಿ ಒಂದಾದ ಅಗ್ನಿತತ್ತ್ವದ ಅಸಾಮಾನ್ಯ ಮಹತ್ವ:** ಈ ಸಮಸ್ತ ಸೃಷ್ಟಿಯು ಪಂಚತತ್ತ್ವಗಳಿಂದ ಅಂದರೆ ಪೃಥ್ವಿ, ನೀರು (ಆಪ), ಅಗ್ನಿ (ತೇಜ) ವಾಯು ಮತ್ತು ಆಕಾಶ ಈ ತತ್ತ್ವಗಳಿಂದ ನಿರ್ಮಾಣವಾಗಿದೆ. ಈ ಪಂಚತತ್ತ್ವಗಳಲ್ಲಿ ಅಗ್ನಿ ತತ್ತ್ವದ ಮಹತ್ತ್ವವು ಅಸಾಮಾನ್ಯವಾಗಿದೆ. ನೇತ್ರಗಳು (ಕಣ್ಣುಗಳು) ಇವು ಅಗ್ನಿತತ್ತ್ವಕ್ಕೆ ಸಂಬಂಧಪಡುವ ಜ್ಞಾನೇಂದ್ರಿಯಗಳು, ಅಗ್ನಿ ತತ್ತ್ವದ ಕಾರಣ ನಮಗೆ ನಮ್ಮ ಮುಂದಿರುವ ವಸ್ತುವು ಕಾಣಿಸುತ್ತದೆ. ಅಗ್ನಿಯು ತನ್ನ ಪ್ರಕಾಶದಿಂದ ಅಂಧಕಾರವನ್ನು ದೂರಗೊಳಿಸಿ ಸತ್ಯದ ಜ್ಞಾನವನ್ನು ಪ್ರದಾನಿಸುತ್ತದೆ. ಸಮಸ್ತ ಪ್ರಾಣಿಗಳ ಹೊಟ್ಟೆಯಲ್ಲಿರುವ 'ವೈಶ್ವಾನರ' ಕೂಡ ಇದೇ ಅಗ್ನಿಯ ರೂಪ. ಈ ಅಗ್ನಿಯಿಂದ ನಾವು ಸೇವಿಸುವ ಅನ್ನವು ಜೀರ್ಣವಾಗುತ್ತದೆ. ಗ್ರಹಗಳ ಅಧಿಪತಿ ಸೂರ್ಯನೂ ಅಗ್ನಿಯ ರೂಪವೇ. ಈ ಸೂರ್ಯನು ಸೃಷ್ಟಿಯನ್ನೇ ಸಂಭಾಳಿಸುತ್ತಾನೆ.





ವೈದಿಕ ಸಮಯದಲ್ಲಿ ಅಗ್ನಿದೇವತೆಗೆ ಸರ್ವೋಚ್ಚ ಸ್ಥಾನವನ್ನು ನೀಡಲಾಗಿತ್ತು. ಋಗ್ವೇದದಲ್ಲಿ ಅಗ್ನಿಯನ್ನು ಸಂಬೋಧಿಸುವಾಗ ಹೋತಾ ಎಂಬ ವಿಶೇಷಣವನ್ನು ಉಪಯೋಗಿಸಲಾಗಿದೆ. ಹೋತಾ ಅಂದರೆ ದೇವತೆಗಳನ್ನು ಅಥವಾ ಶಕ್ತಿಯನ್ನು ಆಹ್ವಾನಿಸುವ ಮಾಧ್ಯಮ. ಯಜ್ಞದ ಪ್ರಧಾನ ದೇವತೆಯನ್ನು ಆಹ್ವಾನಿಸಿದ ಮೇಲೆ ಯಜ್ಞದ ಅಗ್ನಿಯು ಆ ದೇವತೆಗೆ ಹವಿಸ್ಸನ್ನು ತಲುಪಿಸುತ್ತದೆ. ಆದುದರಿಂದ ಅಗ್ನಿಯನ್ನು ಮನುಷ್ಯರನ್ನು ಮತ್ತು ದೇವತೆಗಳನ್ನು ಜೋಡಿಸುವ ಕೊಂಡಿ ಎಂದು ಪರಿಗಣಿಸಲಾಗಿದೆ.


**ದೀಪಾನ್ವಿತ್ ಅಮಾವಾಸ್ಯೆ:** ಆಷಾಢ ಅಮಾವಾಸ್ಯೆಯನ್ನು ದೀಪಾನ್ವಿತ್ ಅಮಾವಾಸ್ಯೆ ಎಂದು ಕೂಡ ಕರೆಯುತ್ತಾರೆ.

ಈ ದಿನದಂದು ದೀಪಗಳ ಪೂಜೆಯನ್ನು ಮಾಡುತ್ತಾರೆ. ಸುಮಂಗಲೆಯರು ಮನೆಯಲ್ಲಿರುವ ದೀಪಗಳ ಸ್ವಚ್ಛತೆ ಮಾಡಿ, ಅವುಗಳನ್ನು ಒಂದೆಡೆ ಸೇರಿಸಿ, ದೀಪಗಳನ್ನು ಅಲಂಕರಿಸಿ, ಅವುಗಳ ಸುತ್ತ ರಂಗೋಲಿಯನ್ನು ಬಿಡಿಸುತ್ತಾರೆ. ಈ ದೀಪಗಳನ್ನು ಉರಿಸಿ, ಅವುಗಳ ಪೂಜೆಯನ್ನು ಮಾಡುತ್ತಾರೆ. ನೈವೇದ್ಯವನ್ನು ಇಟ್ಟು, ಮುಂದೆ ನೀಡಿರುವ ಮಂತ್ರಗಳನ್ನು ಹೇಳಿ ದೀಪಗಳಿಗೆ ಪ್ರಾರ್ಥನೆಯನ್ನು ಮಾಡುತ್ತಾರೆ. ದೀಪ ಸೂರ್ಯಾಗ್ನಿರೂಪಾಸ್ತ್ವಮ್ ತೇಜ ಉತ್ತಮಮ್ ।

ಗೃಹಾಣ ಮತ್ಕೃತಾಂ ಪೂಜಾಮ್ ಸರ್ವಕಾಮಪ್ರದೋ ಭಾವ ॥

**ಅರ್ಥ:** ಹೇ ಸೂರ್ಯ ರೂಪ ಮತ್ತು ಅಗ್ನಿ ರೂಪ ದೀಪವೇ, ತೇಜಗಳಲ್ಲಿ ನಿನ್ನ ತೇಜ ಅತ್ಯುತ್ತಮವಾಗಿದೆ. ನಾನು ಮಾಡಿರುವ ಪೂಜೆಯನ್ನು ಸ್ವೀಕರಿಸಿ, ನನ್ನೆಲ್ಲ ಇಚ್ಛೆಗಳನ್ನು ಪೂರ್ಣಗೊಳಿಸು. ಇದಾದ ನಂತರ ದೀಪದ ಕಥೆಯನ್ನು ಕೇಳುತ್ತಾರೆ. ಈ ರೀತಿ ದೀಪ ಪೂಜೆಯನ್ನು ಮಾಡುವುದರಿಂದ ಆಯುರಾರೋಗ್ಯ ಮತ್ತು ಧನಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯಿದೆ.

# ಬಾಯಿಗೆ ಬಂದಿದ್ದು ಹೇಳಿದರೆ ಸುಮ್ಮನಿರಲ್ಲ: ಬರಾಕ್ ಒಬಾಮ



**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ದೇಶದ್ರೋಹ ಆರೋಪಗಳ ಬಗ್ಗೆ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಮೌನ ಮುರಿದಿದ್ದಾರೆ. ರಿಪಬ್ಲಿಕನ್ ನಾಯಕನ ದಾಳಿಯನ್ನು ಗಮನ ಬೇರೆಡೆ ಸೆಳೆಯುವ ದುರ್ಬಲ ಪ್ರಯತ್ನ ಎಂದು ಕರೆದಿರುವ ಅವರು, ಬಾಯಿಗೆ ಬಂದ ರೀತಿಯಲ್ಲಿ ಮಾತನಾಡುವುದನ್ನು ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

2016ರ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ರಷ್ಯಾದ ಹಸ್ತಕ್ಷೇಪದ ಬಗ್ಗೆ, ಒಬಾಮ ಆಡಳಿತದ ಅಧಿಕಾರಿಗಳು ಮಾಹಿತಿಯನ್ನು ಕುಶಲತೆಯಿಂದ ನಿರ್ವಹಿಸಿದ್ದಾರೆ ಎಂಬ ಆರೋಪವನ್ನು, ಡೊನಾಲ್ಡ್ ಟ್ರಂಪ್ ರಾಜಕೀಯ ಅಸ್ತ್ರವಾಗಿ ಬಳಸಿದ್ದಾರೆ. ಈ ವಿಚಾರವಾಗಿ ಬರಾಕ್ ಒಬಾಮ, ಇತರರ ವಿರುದ್ಧ ದೇಶದ್ರೋಹದ ಮೊಕದ್ದಮೆ ಹೂಡಬೇಕು ಎಂದು ಅಮೆರಿಕದ ಅಧ್ಯಕ್ಷರು ಕರೆ ನೀಡಿದ್ದಾರೆ. ಟ್ರಂಪ್ ಇತ್ತೀಚಿಗೆ ಬರಾಕ್ ಒಬಾಮ ಬಂಧನದ ಎಐ ವಿಡಿಯೋ ಹಂಚಿಕೊಂಡಿದ್ದರು. ಕಳೆದ ವಾರ ಅಮೆರಿಕದ ರಾಷ್ಟ್ರೀಯ ಗುಪ್ತಚರ ನಿರ್ದೇಶಕಿ ತುಳಸಿ ಗಬ್ಬಾರ್ಡ್ ಅವರು, ನ್ಯಾಯ ಇಲಾಖೆಗೆ ಕಳುಹಿಸಿದ ವರದಿಯನ್ನು ಉಲ್ಲೇಖಿಸಿರುವ ಡೊನಾಲ್ಡ್ ಟ್ರಂಪ್, ಒಬಾಮಾ ಅಧಿಕಾರಿಗಳು ದೇಶದ್ರೋಹದ ಪಿತೂರಿಯ ಭಾಗವಾಗಿದ್ದಾರೆ. ತಮ್ಮ ವಿರುದ್ಧ ಡೆಮಾಕ್ರಾಟ್‌ಗಳು ಮಾಡಿರುವ ಆರೋಪ ಸುಳ್ಳು ಎಂದು ಸಾಬೀತಾಗಿದ್ದು, ಒಬಾಮ ವಿರುದ್ಧ ಮೊಕದ್ದಮೆ ಹೂಡಬೇಕು ಎಂದು ಒತ್ತಾಯಿಸಿದ್ದಾರೆ. ಅಧ್ಯಕ್ಷರ ಕಚೇರಿಯ ಮೇಲಿನ ಗೌರವದಿಂದಾಗಿ, ನಮ್ಮ ಕಚೇರಿಯು ಶ್ವೇತಭವನದ ಅಸಂಬದ್ಧ ಮತ್ತು ತಪ್ಪು ಮಾಹಿತಿಯ ಬಗ್ಗೆ ಸಾಮಾನ್ಯವಾಗಿ ಪ್ರತಿಕ್ರಿಯೆ ನೀಡುವುದಿಲ್ಲ. ಆದರೆ ಈ ಹೇಳಿಕೆಗಳು ಅತಿರೇಕದಿಂದ ಕೂಡಿದ್ದು, ಈ ವಿಲಕ್ಷಣ ಆರೋಪಗಳು ಹಾಸ್ಯಾಸ್ಪದ, ಗಮನವನ್ನು ಬೇರೆಡೆಗೆ ಸೆಳೆಯುವ ದುರ್ಬಲ ಪ್ರಯತ್ನವಾಗಿದೆ ಎಂದು ಪ್ಯಾಟ್ರಿಕ್ ರೋಡೆನ್‌ಬುಷ್ ತೀವ್ರ ಅಸಮಧಾನ ವ್ಯಕ್ತಪಡಿಸಿದ್ದಾರೆ. ಕಳೆದ ವಾರ ಬಿಡುಗಡೆ ಮಾಡಲಾದ ದಾಖಲೆಯಲ್ಲಿ, ರಷ್ಯಾ 2016ರ ಅಧ್ಯಕ್ಷೀಯ ಚುನಾವಣೆಯ ಮೇಲೆ ಪ್ರಭಾವ ಬೀರಿದೆ ಎಂಬ ಆರೋಪಕ್ಕೆ ಯಾವುದೇ ಸಾಕ್ಷ್ಯಾಧಾರ ಇಲ್ಲ ಎಂದು ಉಲ್ಲೇಖಿಸಲಾಗಿದೆ. ಮಾರ್ಕೊ ರೂಬಿಯೊ ನೇತೃತ್ವದ ದ್ವಿಪಕ್ಷೀಯ ಸೆನೆಟ್ ಗುಪ್ತಚರ ಸಮಿತಿಯು, 2020ರಲ್ಲಿ ನೀಡಿದ ವರದಿಯಲ್ಲಿ ಇದನ್ನು ದೃಢಪಡಿಸಲಾಗಿದೆ ಎಂದು ದಾಖಲೆ ಹೇಳಿದೆ. ಬರಾಕ್ ಒಬಾಮ ಅಸಮರ್ಥ ಅಧ್ಯಕ್ಷ ಎಂದು ಡೊನಾಲ್ಡ್ ಟ್ರಂಪ್ ಆರೋಪಿಸಿದ್ದನ್ನು ಇಲ್ಲಿ ಸ್ಮರಿಸಬಹುದು. 2016ರ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಅವರಿಗೆ ಸಹಾಯ ಮಾಡುವುದು, ಡೆಮಾಕ್ರಟಿಕ್ ಅಧ್ಯಕ್ಷೀಯ ಅಭ್ಯರ್ಥಿ ಹಿಲರಿ ಕ್ಲಿಂಟನ್ ಅವರಿಗೆ ಹಾನಿ ಮಾಡುವ ಉದ್ದೇಶದಿಂದ, ರಷ್ಯಾ ಮತದಾನ ಪ್ರಕ್ರಿಯೆಯನ್ನು ಹ್ಯಾಕ್ ಮಾಡಿತ್ತು ಎಂಬ ಆರೋಪ ಕೇಳಿಬಂದಿತ್ತು. 2016ರ ಅಮೆರಿಕದ ಚುನಾವಣಾ ಪ್ರಕ್ರಿಯೆಯ ಸಮಗ್ರತೆಯ ಮೇಲೆ ರಷ್ಯಾದ ಗುಪ್ತಚರ ಸೇವೆಗಳ ದಾಳಿ ಮತ್ತು ಟ್ರಂಪ್ ಹಾಗೂ ಅವರ ಸಹಚರರು ರಷ್ಯಾ ಪ್ರಯತ್ನಗಳಿಗೆ ನೆರವಾಗಿರುವುದು, ಆಧುನಿಕ ಯುಗದಲ್ಲಿ ಅಮೆರಿಕದ ರಾಷ್ಟ್ರೀಯ ಭದ್ರತೆಗೆ ಅತ್ಯಂತ ಗಂಭೀರವಾದ ಅಪಾಯ ತಂದೊಡ್ಡಿದೆ ಎಂದು ವರದಿ ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು.

**ಒಬಾಮ ಪ್ರತಿಕ್ರಿಯೆ**

**ಡೊನಾಲ್ಡ್ ಟ್ರಂಪ್ ಅವರ ಆರೋಪಗಳಿಗ ಪ್ರತಿಕ್ರಿಯಿಸಿರುವ ಬರಾಕ್ ಒಬಾಮ ಅವರ ವಕ್ತಾರ ಪ್ಯಾಟ್ರಿಕ್ ರೋಡೆನ್‌ಬುಷ್, ಜೆಫ್ರಿ ಎಪ್ಸ್ಟೀನ್ ಪ್ರಕರಣಕ್ಕೆ ಸಂಬಂಧಿಸಿದ ಫೈಲ್‌ಗಳನ್ನು ಬಿಡುಗಡೆ ಮಾಡುವಲ್ಲಿ, ಆಡಳಿತದ ವೈಫಲ್ಯದ ಸುತ್ತ ಬೆಳೆಯುತ್ತಿರುವ ಬಿಕ್ಕಟ್ಟಿನಿಂದ ಗಮನವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.**

## ಸಂಗಾತಿ, ಆಕೆಯ ಮಗುವನ್ನು ಕೊಂದು ಗೋಡೆ ಮೇಲೆ ತಪ್ಪೊಪ್ಪಿಗೆ ಬರೆದ ಆರೋಪಿ

**ಭೋಪಾಲ್:** ಮಧ್ಯಪ್ರದೇಶದ ವಿದಿಶಾ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬ ತನ್ನ ಸಂಗಾತಿ ಮತ್ತು ಆಕೆಯ ಮೂರು ವರ್ಷದ ಮಗಳನ್ನು ಕತ್ತು ಹಿಸುಕಿ ಕೊಲೆ ಮಾಡಿ, ನಂತರ ಅವರ ಶವಗಳ ಪಕ್ಕದಲ್ಲಿಯೇ ರಾತ್ರಿ ಕಳೆದಿದ್ದಾನೆ ಎಂದು ಆರೋಪಿಸಲಾಗಿದೆ. ಗಂಜ್‌ಬಸೋಡಾದ ವಾರ್ಡ್ ಸಂಖ್ಯೆ 8 ರಲ್ಲಿ ಈ ಭೀಕರ ಜೋಡಿ ಕೊಲೆ ನಡೆದಿದ್ದು, ಸಮುದಾಯವನ್ನು ಆಘಾತಕ್ಕೆ ದೂಡಿದೆ. ಪೊಲೀಸರನ್ನೂ ಸಹ ದಿಗ್ಭ್ರಮೆಗೊಳಿಸಿದ್ದು, ಶವಗಳ ಮೇಲಿನ ಗೋಡೆಯ ಮೇಲೆ ಆರೋಪಿ ಲಿಪ್‌ಸ್ಟಿಕ್‌ನಲ್ಲಿ ಬರೆದಿರುವ ಮನಕಲಕುವ ತಪ್ಪೊಪ್ಪಿಗೆ ಗಮನ ಸೆಳೆದಿದೆ. ಪತಿಯಿಂದ ಬೇರ್ಪಟ್ಟಿದ್ದ 36 ವರ್ಷದ ರಾಮಸಖಿ ಕುಶ್ವಾಹ, ರಾಜಾ ಅಲಿಯಾಸ್ ಅನುಜ್ ವಿಶ್ವಕರ್ಮ ಎಂಬ ವ್ಯಕ್ತಿಯೊಂದಿಗೆ ಕಳೆದ ಕೆಲವು ತಿಂಗಳುಗಳಿಂದ ಲಿವ್-ಇನ್ ಸಂಬಂಧದಲ್ಲಿದ್ದರು. ಅವರು ಆಗಾಗ್ಗೆ ಜಗಳವಾಡುತ್ತಿದ್ದರು, ಆದರೆ ಈ ಬಾಷ್ಪಶೀಲ ಸಂಬಂಧವು ಇಷ್ಟೊಂದು ಕ್ರೂರ ಹಿಂಸಾಚಾರದಲ್ಲಿ ಕೊನೆಗೊಳ್ಳುತ್ತದೆ ಎಂದು ಯಾರೂ ಊಹಿಸಿರಲಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ.

ಜೋಡಿ ಕೊಲೆ ಮಾಡಿ ಓಡಿಹೋಗುವ ಬದಲು, ಅನುಜ್ ರಾತ್ರಿಯಿಡೀ ಕೋಣೆಯಲ್ಲಿಯೇ ಇದ್ದು, ರಾಮಸಖಿ ಮತ್ತು ಆಕೆಯ ಮಗಳು ಮಾನ್ವಿ ಅವರ ಶವಗಳ ಪಕ್ಕದಲ್ಲಿ ಕುಳಿತಿದ್ದ ಎಂದು ಆರೋಪಿಸಲಾಗಿದೆ. ನಾನು ಅವಳನ್ನು ಕೊಂದೆ ಅವಳು ನನಗೆ ಸುಳ್ಳು ಹೇಳಿದಳು. ಅವಳಿಗೆ ಬೇರೊಬ್ಬರ ಜೊತೆ ಸಂಬಂಧವಿತ್ತು. ಎಂದು ಗೋಡೆಯ ಮೇಲೆ ಅವನು ಲಿಪ್‌ಸ್ಟಿಕ್ ನಿಂದ ಬರೆದಿದ್ದಾನೆಂದು ನಂಬಲಾಗಿದೆ. ತನಿಖಾಧಿಕಾರಿಗಳು ಸ್ಥಳಕ್ಕೆ ಆಗಮಿಸಿದಾಗ ಗೋಡೆಯ ಮೇಲೆ ಲಿಪ್‌ಸ್ಟಿಕ್ ನಿಂದ ಬರೆದ ಸಂದೇಶ ಕಂಡುಬಂದಾಗ ಪ್ರಕರಣವು ತಿರುವು ಪಡೆದುಕೊಂಡಿತು. ಯಾವುದೇ ತಕ್ಷಣದ ಸಿಸಿಟಿವಿ ಪುರಾವೆಗಳಿಲ್ಲದೆ, ಗೋಡೆಯು ಮೊದಲ ಪ್ರಮುಖ ಸುಳಿವು ನೀಡಿತು. ಕೊಲೆಗಳ ನಂತರ ಸಂದೇಶವನ್ನು ಬರೆಯಲಾಗಿದೆ ಎಂದು ವಿಧಿವಿಜ್ಞಾನ ಪರೀಕ್ಷೆಯು ದೃಢಪಡಿಸಿತು, ಇದು ಪೊಲೀಸರಿಗೆ ಸಮಯಸೂಚಿಯನ್ನು ಸಂಕುಚಿತಗೊಳಿಸಲು ಮತ್ತು ಶಂಕಿತನನ್ನು ತ್ವರಿತವಾಗಿ ಗುರುತಿಸಲು ಸಹಾಯ ಮಾಡಿತು ಎಂದು ಪ್ರಕರಣದ ಕುರಿತು ಮಾತನಾಡಿದ ಹೆಚ್ಚುವರಿ ಎಸ್ಪಿ ಪ್ರಶಾಂತ್ ಚೌಬೆ ಗೆ ತಿಳಿಸಿದರು. 36 ವರ್ಷದ ಮಹಿಳೆ ತನ್ನ ಪತಿಯಿಂದ ದೂರವಾಗಿ ವಾಸಿಸುತ್ತಿದ್ದರು ಮತ್ತು ಅನುಜ್ ವಿಶ್ವಕರ್ಮ ಅವರೊಂದಿಗೆ ಲಿವ್-ಇನ್ ಸಂಬಂಧದಲ್ಲಿದ್ದರು. ನಮ್ಮ ಪ್ರಾಥಮಿಕ ತನಿಖೆಯು ಮಹಿಳೆ ಮತ್ತು ಅವರ ಮಗಳನ್ನು ಕತ್ತು ಹಿಸುಕಿ ಕೊಲ್ಲಲಾಗಿದೆ ಎಂದು ತೋರಿಸುತ್ತದೆ. ಆರೋಪಿಯನ್ನು ಬಂಧಿಸಲಾಗಿದೆ ಮತ್ತು ಹೆಚ್ಚಿನ ತನಿಖೆ ನಡೆಯುತ್ತಿದೆ. ಕೊಲೆಗಳನ್ನು ಮಾಡಿದ ನಂತರ ಅವನು ಕೋಣೆಯಲ್ಲಿ ಉಳಿದುಕೊಂಡಿದ್ದ ತಣ್ಣನೆಯ ಶಾಂತತೆ ಮತ್ತು ತಪ್ಪೊಪ್ಪಿಗೆಯ ಮಾನಸಿಕ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಪೊಲೀಸ್ ಅಧಿಕಾರಿಗಳು ಅವನ ಮಾನಸಿಕ ಸ್ಥಿತಿಯನ್ನು ಸಹ ಮೌಲ್ಯಮಾಪನ ಮಾಡುತ್ತಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

# ಇಂಡಿಗೋ ವಿಮಾನದ ಇಂಜಿನ್‌ನಲ್ಲಿ ಬೆಂಕಿ

## ಎಟಿಆರ್ 76 ಸಂಖ್ಯೆಯ ವಿಮಾನದಲ್ಲಿದ್ದ ಎಲ್ಲಾ 60 ಪ್ರಯಾಣಿಕರು ಪಾರು

**ಅಹ್ಮದಾಬಾದ್:** ಬುಧವಾರದಂದು ಬೆಳಗ್ಗೆ ಅಹ್ಮದಾಬಾದ್ ನಿಂದ ದಿಯು ನಗರಕ್ಕೆ ತೆರಳುತ್ತಿದ್ದ ಇಂಡಿಗೋ ವಿಮಾನದ ಇಂಜಿನ್‌ನಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿರುವ ಘಟನೆ ನಡೆದಿದೆ. ಅದೃಷ್ಟವಶಾತ್ ಆ ವಿಮಾನವಿನ್ನೂ ಟೇಕಾಫ್ ಆಗಿರಲಿಲ್ಲ. ಟೇಕಾಫ್ ಆಗುವ ಮುನ್ನ ಇಂಜಿನ್ ಆನ್ ಆದ ಕೂಡಲೇ ಬೆಂಕಿಯ ಕಿಡಿಗಳು ಕಾಣಿಸಿಕೊಂಡಿವೆ. ಕೂಡಲೇ ಸ್ಥಳಕ್ಕಾಗಮಿಸಿದ ಅಹ್ಮದಾಬಾದ್ ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ, ಎಲ್ಲಾ 60 ಪ್ರಯಾಣಿಕರನ್ನು ಕೆಳಕ್ಕೆ ಇಳಿಸಿ ಸುರಕ್ಷಿತ ಸ್ಥಳಕ್ಕೆ ರವಾನಿಸಿದ್ದಾರೆ.

**ರನ್ ವೇ ಕಡೆ ಮುಖ**

ಇದೇ ವಿಮಾನ ನಿಲ್ದಾಣದಿಂದ ಜೂ. 12ರಂದು ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯಾ ವಿಮಾನ ಅಪಘಾತಕ್ಕೀಡಾಗಿ ಅದರಲ್ಲಿದ್ದ 240 ಮಂದಿ ಪ್ರಯಾಣಿಕರು ಸಾವಿಗೀಡಾಗಿದ್ದರು. ಅದಾಗಿ ಒಂದು ತಿಂಗಳು ಕಳೆಯುವ ಹೊತ್ತಿಗೆ ಅದೇ ವಿಮಾನ ನಿಲ್ದಾಣದಲ್ಲಿ ಇಂಡಿಗೋ ವಿಮಾನ ಅಪಘಾತಕ್ಕೀಡಾಗುವುದರಿಂದ ಪಾರಾಗಿದೆ. ಇಂಡಿಗೋ ಸಂಸ್ಥೆಯ ಎಟಿಆರ್ 76 ಸಂಖ್ಯೆಯ ವಿಮಾನವು ಪೂರ್ವನಿಗದಿಯಂತೆ ಬೆಳಗ್ಗೆ 11 ಗಂಟೆಗೆ ಸರಿಯಾಗಿ ಅಹ್ಮದಾಬಾದ್ ನಿಂದ ಪ್ರಯಾಣ ಬೆಳೆಸುವುದರಲ್ಲಿತ್ತು. ಎಲ್ಲಾ ಪ್ರಯಾಣಿಕರು ವಿಮಾನದಲ್ಲಿ ಆಸೀನರಾಗಿದ್ದರು. ಗಗನಸಖಿಯರು ಪ್ರಯಾಣಿಕರಿಗೆ ಔಪಚಾರಿಕವಾಗಿ ನೀಡಬೇಕಿರುವ ಸೂಚನೆಗಳನ್ನು ನೀಡುತ್ತಿದ್ದರು. ಅತ್ತ, ಕಾಕ್ ಪಿಟ್ ನಲ್ಲಿದ್ದ ಇಬ್ಬರು ಪೈಲಟ್‌ಗಳು ಪ್ರಯಾಣಕ್ಕೆ ಅಣಿಗೊಳ್ಳುತ್ತಿದ್ದರು. ಆ ಸಂದರ್ಭದಲ್ಲೇ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು ಅದರ ಅಲರ್ಟ್ ಕಾಕ್ ಪಿಟ್‌ಗೆ ಬಂದಿದೆ. ಕೂಡಲೇ ಪೈಲಟ್‌ಗಳು ವಿಮಾನ ನಿಲ್ದಾಣದ ಕಂಟ್ರೋಲ್ ರೂಂಗೆ ಸುದ್ದಿ ಮುಟ್ಟಿಸಿದ್ದಾರೆ. ತಕ್ಷಣವೇ ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿಗಳನ್ನು ರನ್ ವೇ ಕಡೆ ಮುಖ ಮಾಡಿ ನಿಂತಿದ್ದ ವಿಮಾನದ ಕಡೆಗೆ ರವಾನಿಸಿದ್ದಾರೆ. ವ್ಯಾನ್ ಗಳಲ್ಲಿ ಬಂದ ಸಿಬ್ಬಂದಿ, ಎಲ್ಲಾ ಪ್ರಯಾಣಿಕರನ್ನು ಕೂಡಲೇ ಇಳಿಸಿ ಅಲ್ಲಿಂದ ವ್ಯಾನ್ ಗಳಲ್ಲಿ ತುಂಬಿ ಸೀದಾ ವಿಮಾನ ನಿಲ್ದಾಣಕ್ಕೆ ಕಳುಹಿಸಿದ್ದಾರೆ. ಮತ್ತೊಂದೆಡೆ, ತುರ್ತು ಸಹಾಯಕರು ಆಗಮಿಸಿ ಇಂಜಿನ್ ಬೆಂಕಿಯನ್ನು ನಂದಿಸಿದ್ದಾರೆ.




### ಇಂಡಿಗೋ ವಿಮಾನ ಮುಂಬೈನಲ್ಲಿ ತುರ್ತು ಭೂಸ್ಪರ್ಶ

**ದೆಹಲಿಯಿಂದ ಗೋವಾಕ್ಕೆ ಹೊರಟಿದ್ದ ಇಂಡಿಗೋ ವಿಮಾನ 6ಇ-6271 ತಾಂತ್ರಿಕ ದೋಷದಿಂದಾಗಿ ಮುಂಬೈನಲ್ಲಿ ತುರ್ತು ಭೂಸ್ಪರ್ಶ ಮಾಡಿದೆ. ಎಂಜಿನ್‌ನಲ್ಲಿ ತೊಂದರೆ ಕಾಣಿಸಿಕೊಂಡ ತಕ್ಷಣ, ಪೈಲಟ್ 'ಪ್ಯಾನ್ ಪ್ಯಾನ್ ಪ್ಯಾನ್' ಎಂಬ ತುರ್ತು ಸಂದೇಶ ರವಾನಿಸಿದ್ದು, ಅವರ ಸಮಯಪ್ರಜ್ಞೆಯಿಂದ ದೊಡ್ಡ ಅನಾಹುತ ತಪ್ಪಿದೆ. ವಿಮಾನ ಸುರಕ್ಷಿತವಾಗಿ ಇಳಿದಿದ್ದು, ಎಲ್ಲಾ ಪ್ರಯಾಣಿಕರಿಗೆ ಬೇರೆ ವಿಮಾನದ ವ್ಯವಸ್ಥೆ ಮಾಡಲಾಗಿದೆ. ವಿಮಾನಯಾನ ಸಿಬ್ಬಂದಿಯ ತಕ್ಷಣದ ಕಾರ್ಯ ಪ್ರವೃತ್ತಿಗೆ ಮೆಚ್ಚುಗೆ ವ್ಯಕ್ತವಾಗಿದೆ.**

### 2500 ರೂ.ಗೆ ವಿಮಾನದಲ್ಲಿ ಪ್ರಯಾಣಿಸುವ ಅವಕಾಶ

**ವಿಮಾನ ಪ್ರಯಾಣವು ಎಲ್ಲರ ಕನಸಾಗಿದ್ದರೂ, ಅದು ಶ್ರೀಮಂತರಿಗೆ ಮಾತ್ರ ಸೀಮಿತ ಎಂಬ ಭಾವನೆಯಿತ್ತು. ಆದರೆ, ಕೇಂದ್ರ ಸರ್ಕಾರ ರೂಪಿಸಿದ 'ಉಡಾನ್' (ಉಡೇ ದೇಶ್ ಕಾ ಆಮ್ ನಾಗರಿಕ್) ಯೋಜನೆಯು ಈ ಕಲ್ಪನೆಯನ್ನು ಬದಲಾಯಿಸಿದೆ. ಸಾಮಾನ್ಯ ಜನರು ಕೂಡ ವಿಮಾನದಲ್ಲಿ ಪ್ರಯಾಣಿಸುವಂತಾಗಬೇಕು ಎಂಬ ಉದ್ದೇಶದಿಂದ ಈ ಮಹತ್ವಾಕಾಂಕ್ಷೆಯ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಕರ್ನಾಟಕದಲ್ಲೂ ಸಹ ಈ ಯೋಜನೆ ವಿಮಾನಯಾನದಲ್ಲಿ ಕ್ರಾಂತಿಯನ್ನುಂಟು ಮಾಡಿದೆ.**

**ಅಹ್ಮದಾಬಾದ್‌ನಲ್ಲಿ ವಿಮಾನ ಕ್ರಾಶ್ ಆದ ಎರಡೇ ದಿನಕ್ಕೆ ಇನ್ನೊಂದು ಏರ್ ಇಂಡಿಯಾ ಫ್ಲೈಟ್ ಬೀಳಬೇಕಿತ್ತು:** ಜೂ. 12ರಂದು ಅಹ್ಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ 'ಎಐ-171' ಪತನಗೊಂಡು ಅದರಲ್ಲಿದ್ದ 240 ಪ್ರಯಾಣಿಕರು ಅಸುನೀಗಿದ್ದರು. ಆ ಘಟನೆಯಾಗಿ ಎರಡೇ ದಿನಕ್ಕೆ, ಅಂದರೆ, ಜೂ. 14ರಂದು, ದೆಹಲಿಯಿಂದ ವಿಯೆನ್ನಾಕ್ಕೆ ಹೊರಟಿದ್ದ ಏರ್ ಇಂಡಿಯಾ ವಿಮಾನವು ಟೇಕಾಫ್ ಆದ ಕೆಲವೇ ನಿಮಿಷಗಳಲ್ಲಿ ಅಪಘಾತಕ್ಕೀಡಾಗುವ ಸನ್ನಿವೇಶ ಎದುರಾಗಿತ್ತು. ಟೇಕಾಫ್ ಆದ ಕೆಲವೇ ನಿಮಿಷಗಳಲ್ಲಿ 900 ಅಡಿಗಳಷ್ಟು ಕೆಳಕ್ಕೆ ಇಳಿದು ಆತಂಕ ಸೃಷ್ಟಿಸಿತು. ತಕ್ಷಣವೇ ಎಚ್ಚೆತ್ತ ಪೈಲಟ್‌ಗಳು ವಿಮಾನವನ್ನು ಸುರಕ್ಷಿತವಾಗಿ ಸಹಜ ಎತ್ತರಕ್ಕೆ ತರುವಲ್ಲಿ ಯಶಸ್ವಿಯಾದರು. ಈ ಗಂಭೀರ ಘಟನೆಯನ್ನು ನಾಗರಿಕ ವಿಮಾನಯಾನ ಪ್ರಾಧಿಕಾರವು ಗಂಭೀರವಾಗಿ ಪರಿಗಣಿಸಿದ್ದು, ತನಿಖೆಗೆ ಆದೇಶಿಸಿದೆ. ಘಟನೆಗೆ ಕಾರಣವನ್ನು ಪತ್ತೆಹಚ್ಚಲು ಪೈಲಟ್‌ಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ.

# ಸಂಸತ್ತಿನಲ್ಲಿ ಆಪರೇಷನ್ ಸಿಂಧೂರ್ ಬಗ್ಗೆ ದೊಡ್ಡ ಚರ್ಚೆ

**ಹೊಸದಿಲ್ಲಿ:** ಜುಲೈ 29ರಂದು ಸಂಸತ್ತಿನಲ್ಲಿ ಆಪರೇಷನ್ ಸಿಂಧೂರ್ ಬಗ್ಗೆ ದೊಡ್ಡ ಚರ್ಚೆ ನಡೆಯಲಿದೆ. ಸರ್ಕಾರವು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ತಲಾ 16 ಗಂಟೆಗಳ ಕಾಲ ಚರ್ಚೆಗೆ ಅವಕಾಶ ನೀಡಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಾತನಾಡಲಿದ್ದಾರೆ. ವಿರೋಧ ಪಕ್ಷಗಳು ಉತ್ತರಗಳನ್ನು ಕೇಳುತ್ತಿವೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತ ಮತ್ತು ಪಾಕಿಸ್ತಾನದ ನಡುವೆ ಕದನ ವಿರಾಮ ಮಾಡಿದ್ದೇನೆ ಎಂದು ಹೇಳಿಕೆ ನೀಡಿದ ನಂತರ ಈ ಚರ್ಚೆ ನಡೆಯುತ್ತಿದೆ. ವಿರೋಧ ಪಕ್ಷಗಳು ಈ ಹೇಳಿಕೆಯನ್ನು ಬಳಸಿಕೊಂಡು ಸರ್ಕಾರವನ್ನು ಪ್ರಶ್ನಿಸುತ್ತಿವೆ.

ಇತ್ತೀಚೆಗೆ ನಡೆದ ಪಹಲ್ಗಾಮ್ ಭಯೋತ್ಪಾದಕ ದಾಳಿ, ಬಿಹಾರದ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ, ಬಗ್ಗೆಯೂ ವಿರೋಧ ಪಕ್ಷಗಳು ಚರ್ಚೆ ನಡೆಸಲು ಬಯಸಿವೆ. ಮುಂದಿನ ಸೋಮವಾರ ಲೋಕಸಭೆಯಲ್ಲಿ ಚರ್ಚೆ ಪ್ರಾರಂಭವಾಗುತ್ತದೆ. ರಾಜ್ಯಸಭೆಯಲ್ಲಿ ನಡೆಯುತ್ತದೆ. ಸರ್ಕಾರವು ಸಾಕಷ್ಟು ಸಮಯ ನೀಡಿದ್ದರೂ, ವಿರೋಧ ಪಕ್ಷಗಳು ಚರ್ಚೆಯನ್ನು ಬೇಗ ಪ್ರಾರಂಭಿಸಬೇಕೆಂದು ಕೇಳಿದ್ದವು. ಆದರೆ ಪ್ರಧಾನ ಮಂತ್ರಿಗಳ ವಿದೇಶ ಪ್ರವಾಸದ ಕಾರಣ ಸರ್ಕಾರ ಒಪ್ಪಲಿಲ್ಲ. ಆಪರೇಷನ್ ಸಿಂಧೂರ್ ಬಗ್ಗೆ ಚರ್ಚೆ ನಡೆಸಲು ವಿರೋಧ ಪಕ್ಷದ ಸಂಸದರು ಕಳೆದ ವಾರದಿಂದ ಒತ್ತಾಯಿಸುತ್ತಿದ್ದಾರೆ. ಬೇರೆ ವಿಷಯಗಳ ಬಗ್ಗೆಯೂ ಚರ್ಚೆ ನಡೆಸಲು ಅವರು ಬಯಸಿದ್ದಾರೆ. ನಿಯಮಗಳ ಪ್ರಕಾರ ಸಣ್ಣ ಚರ್ಚೆಗಳನ್ನು ನಡೆಸಲು ಮತ್ತು ಪ್ರತಿ ವಾರ ವ್ಯವಹಾರ ಸಲಹಾ ಸಮಿತಿ ಸಭೆ ಸೇರಲು ಅವರು ಒತ್ತಾಯಿಸಿದ್ದಾರೆ. ಸರ್ಕಾರವು ತನ್ನ ವಾದವನ್ನು ಬಲವಾಗಿ ಮಂಡಿಸಲು ಸಿದ್ಧವಾಗಿದೆ ಎಂದು ಮೂಲಗಳು ತಿಳಿಸಿವೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್, ಮೂರು ಸೇನಾ ಮುಖ್ಯಸ್ಥರೊಂದಿಗೆ ಸಭೆಗಳನ್ನು ನಡೆಸಿದ್ದಾರೆ.

ಜುಲೈ 26 ರಂದು ಕಾರ್ಗಿಲ್ ವಿಜಯ ದಿವಸ್ ಆಚರಣೆಯ ನಂತರ ಚರ್ಚೆಯನ್ನು ನಿಗದಿಪಡಿಸಲಾಗಿದೆ. ಇದು ದೇಶದ ಹೆಮ್ಮೆಯ ಕ್ಷಣ ಎಂದು ಬಿಂಬಿಸಲು ತಂತ್ರ ರೂಪಿಸಲಾಗಿದೆ. ಮೇ 7 ರಂದು ಆಪರೇಷನ್ ಸಿಂಧೂರ್ ಅನ್ನು ಪ್ರಾರಂಭಿಸಲಾಯಿತು. ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕ ಶಿಬಿರಗಳ ಮೇಲೆ ದಾಳಿ ಮಾಡಲಾಗಿತ್ತು.

ಪ್ರಧಾನಿ ಮೋದಿ ಅವರು ಇದನ್ನು ವಿಜಯ ಉತ್ಸವ ಎಂದು ಕರೆದರು. ಇದು ಭಾರತದ ಸ್ವದೇಶಿ ಮಿಲಿಟರಿ ಶಕ್ತಿಯನ್ನು ತೋರಿಸಿದೆ ಎಂದರು. ಕೇವಲ 22 ನಿಮಿಷಗಳಲ್ಲಿ ನಡೆದ ಈ ಕಾರ್ಯಾಚರಣೆ ಯಶಸ್ವಿಯಾಯಿತು. ವಿಶೇಷ ಚರ್ಚೆಯನ್ನು ಘೋಷಿಸಿದ ಕೇಂದ್ರ ಸಚಿವ ಜೆ.ಪಿ. ನಡ್ಡಾ, ಸರ್ಕಾರವು ಎಲ್ಲಾ ಅಗತ್ಯ ಮಾಹಿತಿಯನ್ನು ಹಂಚಿಕೊಳ್ಳಲು ಸಿದ್ಧವಿದೆ ಎಂದು ಹೇಳಿದರು. ಕಿರೆನ್ ರಿಜಿಜು ಸಹ ಇದೇ ಮಾತನ್ನು ಹೇಳಿದರು. ಇಂತಹ ವಿಷಯಗಳ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಯಬೇಕು ಎಂದರು.



> **ಆಪರೇಷನ್ ಸಿಂಧೂರ್ ನಂತಹ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲು ನಾವು ಸಿದ್ಧರಿದ್ದೇವೆ. ಸದನದ ಸರಿಯಾದ ಕಾರ್ಯನಿರ್ವಹಣೆಗೆ ಸರ್ಕಾರ, ವಿರೋಧ ಪಕ್ಷಗಳ ನಡುವೆ ಸಮನ್ವಯವಿರಬೇಕು.**
> - ರಿಜಿಜು


## ಸೈಬರ್ ಅಪರಾಧ, 22,846 ಕೋಟಿ ರೂ. ವಂಚನೆ

**ನವದೆಹಲಿ:** ಭಾರತದಲ್ಲಿ ಸೈಬರ್ ಅಪರಾಧ ಪ್ರಕರಣಗಳು ಅತಿಯಾಗುತ್ತಿವೆ. ಮಾತ್ರವಲ್ಲ, ಸೈಬರ್ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಿಡುಗಡೆಯಾದ ಅಂಕಿ-ಅಂಶಗಳು ಆತಂಕ ಸೃಷ್ಟಿಸುತ್ತಿವೆ. ಜುಲೈ 22ರಂದು ಗೃಹ ವ್ಯವಹಾರಗಳ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್ ಲೋಕಸಭೆಯಲ್ಲಿ ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಬಿಡುಗಡೆ ಮಾಡಿರುವ ಡೇಟಾದಲ್ಲಿ ದೇಶಾದ್ಯಂತ ಒಟ್ಟು 22,845.73 ಕೋಟಿ ರೂ. ವಂಚನೆ ಮಾಡಿರುವುದು ಬಯಲಾಗಿದೆ.

ಇದು ಕಳೆದ ವರ್ಷಕ್ಕಿಂತ ಸುಮಾರು 206 ಪ್ರತಿಶತ ಹೆಚ್ಚು, ಅಂದರೆ 2023. 2023ರಲ್ಲಿ, ಈ ನಷ್ಟವು 7,465.18 ಕೋಟಿ ರೂ.ಗಳಷ್ಟಿತ್ತು. ಈ ಅಂಕಿಅಂಶಗಳನ್ನು ರಾಷ್ಟ್ರೀಯ ಸೈಬರ್ ಅಪರಾಧ ವರದಿ ಮಾಡುವ ಪೋರ್ಟಲ್, ನಾಗರಿಕ ಹಣಕಾಸು ಸೈಬರ್ ವಂಚನೆ ವರದಿ ಮತ್ತು ನಿರ್ವಹಣಾ ವ್ಯವಸ್ಥೆಯಿಂದ ಸಂಗ್ರಹಿಸಲಾಗಿದೆ. ಈ ಎರಡೂ ವೇದಿಕೆಗಳು ಗೃಹ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ, ದೇಶಾದ್ಯಂತ ಸೈಬರ್ ಅಪರಾಧ ಪ್ರಕರಣಗಳನ್ನು ಮೇಲ್ವಿಚಾರಣೆ ಮಾಡುತ್ತವೆ. ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಸೈಬರ್ ಅಪರಾಧ ಪ್ರಕರಣಗಳು ಸರ್ಕಾರ ಹಂಚಿಕೊಂಡಿರುವ ದತ್ತಾಂಶದ ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ಸೈಬರ್ ಅಪರಾಧಗಳು ವೇಗವಾಗಿ ಹೆಚ್ಚಾಗಿದೆ. 2022 ರಲ್ಲಿ 10,29,026 ಪ್ರಕರಣಗಳು ವರದಿಯಾಗಿವೆ. 2023 ರಲ್ಲಿ ಇದು 15,96,493 ಕ್ಕೆ ಏರಿಕೆಯಾಗಿದೆ. 2024ರಲ್ಲಿ 22,68,346 ಪ್ರಕರಣಗಳು ವರದಿಯಾಗಿವೆ, ಇದು ಕಳೆದ ವರ್ಷಕ್ಕಿಂತ ಶೇಕಡಾ 42 ರಷ್ಟು ಹೆಚ್ಚಾಗಿದೆ.

ಇದಲ್ಲದೆ, ನಾವು ಆರ್ಥಿಕ ಸೈಬರ್ ವಂಚನೆ ಪ್ರಕರಣಗಳ ಬಗ್ಗೆ ಮಾತ್ರ ಮಾತನಾಡಿದರೆ, 2024ರಲ್ಲಿ, 36,37,288 ಘಟನೆಗಳು ದಾಖಲಾಗಿವೆ, ಸರ್ಕಾರವು ಪ್ರತಿಬಿಂಬ ಮಾಡ್ಯೂಲ್ ಅನ್ನು ಸಹ ಪ್ರಾರಂಭಿಸಿದೆ, ಇದು ಅಪರಾಧಿಗಳು, ಅವರ ಜಾಲದ ಡಿಜಿಟಲ್ ನಕ್ಷೆಯನ್ನು ರಚಿಸುತ್ತದೆ. ಇದರ ಮೂಲಕ, ಅಪರಾಧಿಗಳನ್ನು ತಲುಪುವಲ್ಲಿ ಪೊಲೀಸರಿಗೆ ಸಹಾಯ ಸಿಗುತ್ತಿದೆ. ಇಲ್ಲಿಯವರೆಗೆ, ಈ ಮಾಡ್ಯೂಲ್ ಸಹಾಯದಿಂದ 10,599 ಆರೋಪಿಗಳನ್ನು ಬಂಧಿಸಲಾಗಿದೆ.ನಾಗರಿಕರು ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳಬಹುದು 2021ರಲ್ಲಿ ಪ್ರಾರಂಭಿಸಲಾದ ಪೋರ್ಟಲ್ ಮೂಲಕ, ಇಲ್ಲಿಯವರೆಗೆ 5,489 ಕೋಟಿ ರೂ.ಗಳಿಗೂ ಹೆಚ್ಚಿನ ಮೊತ್ತವನ್ನು ವಂಚಕರ ಕೈಗೆ ಸಿಲುಕದಂತೆ ಉಳಿಸಲಾಗಿದೆ ಎಂದು ಗೃಹ ಸಚಿವರು ಹೇಳಿದರು.

ಆನ್‌ಲೈನ್ ವಹಿವಾಟುಗಳನ್ನು ಮಾಡುವಾಗ ಜನರು ಬಹಳ ಜಾಗರೂಕರಾಗಿರಬೇಕು ಎಂದು ಸಚಿವಾಲಯವು ಮನವಿ ಮಾಡಿದೆ. ಯಾವುದೇ ಅಪರಿಚಿತ ಲಿಂಕ್ ಅನ್ನು ಕ್ಲಿಕ್ ಮಾಡಬೇಡಿ ಮತ್ತು ಯಾವುದೇ ರೀತಿಯ ವಂಚನೆ ಸಂಭವಿಸಿದಲ್ಲಿ, ತಕ್ಷಣವೇ ಪೋರ್ಟಲ್‌ನಲ್ಲಿ ಅಥವಾ ಪೊಲೀಸರಿಗೆ ದೂರು ನೀಡಿ ಎಂದು ಮನವಿ ಮಾಡಿಕೊಳ್ಳಲಾಗಿದೆ.





## ಟಿಕೆಟ್ ವಿಳಂಬ ತಪ್ಪಿಸಲು ಹೊಸ ಶ್ರೀವಾಣಿ ಕೌಂಟರ್

**ತಿರುಮಲ:** ತಿಮಪ್ಪನ ದರ್ಶನಕ್ಕೆ ತಿರುಪತಿಯಲ್ಲಿ ಹೊಸ ಶ್ರೀವಾಣಿ ದರ್ಶನ ಟಿಕೆಟ್ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಭಕ್ತರಿಗೆ ಟಿಕೆಟ್ ನೀಡುವ ಪ್ರಕ್ರಿಯೆ ಸುಗಮಗೊಳಿಸುವ ಗುರಿಯೊಂದಿಗೆ ಈ ಹೊಸ ವ್ಯವಸ್ಥೆ ಆರಂಭಿಸಲಾಗಿದೆ. ತಿರುಮಲ ಅನ್ನಮಯ್ಯ ಭವನದ ಎದುರು ಇರುವ ಈ ಹೊಸ ಸೌಲಭ್ಯವನ್ನು ಟಿಟಿಡಿ ಅಧ್ಯಕ್ಷ ಬಿ.ಆರ್. ನಾಯ್ಡು ಕಾರ್ಯನಿರ್ವಾಹಕ ಅಧಿಕಾರಿ ಜೆ. ಶ್ಯಾಮಲಾ ರಾವ್ ಉದ್ಘಾಟಿಸಿದರು.

ಶ್ರೀವಾಣಿ ದರ್ಶನ ಟಿಕೆಟ್‌ಗಳನ್ನು ಪಡೆಯಲು ಭಕ್ತರು ಬೆಳಗ್ಗೆ 5:00 ಗಂಟೆಯಿಂದ ಕಾಯುವ ಉದ್ದನೆಯ ಸರತಿ ಸಾಲುಗಳ ಬಗ್ಗೆ ದೀರ್ಘಕಾಲದ ದೂರುಗಳನ್ನು ಈ ಕೇಂದ್ರವು ಪರಿಹರಿಸುತ್ತದೆ.ಭಕ್ತರು ಮುಂಜಾನೆಯಿಂದಲೇ ದೀರ್ಘ ಕಾಯುವಿಕೆಯನ್ನು ಎದುರಿಸುತ್ತಿದ್ದಾರೆ ಎಂದು ನಾಯ್ಡು ಉದ್ಘಾಟನಾ ಸಮಾರಂಭದಲ್ಲಿ ಹೇಳಿದರು. ಸುಧಾರಿತ ಮೂಲಸೌಕರ್ಯದೊಂದಿಗೆ ರೂ. 60 ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಲಾದ ಈ ಹೊಸ ಕೌಂಟರ್‌ಗಳು ಟಿಕೆಟ್‌ಗಳನ್ನು ವೇಗವಾಗಿ ಮತ್ತು ಸುಲಭವಾಗಿಸುತ್ತದೆ ಎಂದು ಅವರು ಹೇಳಿದರು. ಟಿಟಿಡಿ ಪ್ರಮುಖ ಉಪಕ್ರಮವಾದ ಶ್ರೀವಾಣಿ ಟ್ರಸ್ಟ್, ವಿಶೇಷ ಪ್ರವೇಶ ದರ್ಶನಕ್ಕೆ ಬದಲಾಗಿ ಭಕ್ತರು ದೇವಾಲಯದ ಯೋಜನೆಗಳಿಗೆ ಕೊಡುಗೆ ನೀಡಲು ಅವಕಾಶ ನೀಡುತ್ತದೆ. ಈ ಟಿಕೆಟ್‌ಗಳಿಗೆ ಹೆಚ್ಚಿನ ಬೇಡಿಕೆ ಹೆಚ್ಚಾಗಿ ಗಮನಾರ್ಹ ವಿಳಂಬಕ್ಕೆ ಕಾರಣವಾಗಿದೆ, ಹೊಸ ಕೇಂದ್ರವು ಪರಿಣಾಮಕಾರಿ ಸ್ಥಾಪನೆಯೊಂದಿಗೆ ಇದನ್ನು ಕಡಿಮೆ ಮಾಡುವ ನಿರೀಕ್ಷೆಯಿದೆ.

ಹೈ-ಲೆವೆಲ್ ಕಾಟೇಜ್‌ಗಳು, ಅನ್ನಪ್ರಸಾದಂ ಕಾಂಪ್ಲೆಕ್ಸ್ ಪ್ರದೇಶಗಳಲ್ಲಿ ನವೀಕರಿಸಿದ ಉಪ-ವಿಚಾರಣಾ ಕಚೇರಿಗಳನ್ನು ನಾಯ್ಡು ಉದ್ಘಾಟಿಸಿದರು. ಈ ಆಧುನೀಕರಿಸಿದ ಸೌಲಭ್ಯಗಳು ಉತ್ತಮ ಮಾಹಿತಿ ಮತ್ತು ಸಹಾಯ ಸೇವೆಗಳೊಂದಿಗೆ ಭಕ್ತರ ಬೆಂಬಲವನ್ನು ಸುಧಾರಿಸುವ ಗುರಿಯನ್ನು ಹೊಂದಿವೆ. ಯಾತ್ರಿಕರ ಅಗತ್ಯಗಳನ್ನು ಪೂರೈಸುವುದನ್ನು ಖಚಿತಪಡಿಸಿಕೊಳ್ಳಲು ನಾಯ್ಡು ಅವರು ಸೆಟಪ್‌ಗಳನ್ನು ಸಹ ಪರಿಶೀಲಿಸಿದರು.



# ಭಾರತ-ಯುಕೆ ಮುಕ್ತ ವ್ಯಾಪಾರ ಒಪ್ಪಂದ

## ಪ್ರಧಾನಿ ಮೋದಿ ಯುಕೆ ಪ್ರವಾಸದ ವೇಳೆ ಐತಿಹಾಸಿಕ ಎಫ್‌ಟಿಎ ಒಪ್ಪಂದಕ್ಕೆ ಸಹಿ

**ಲಂಡನ್:** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಯುನೈಟೆಡ್ ಕಿಂಗ್‌ಡಮ್ ಭೇಟಿಯ ಸಂದರ್ಭದಲ್ಲಿ, ಭಾರತ ಮತ್ತು ಯುನೈಟೆಡ್ ಕಿಂಗ್‌ಡಮ್ ನಡುವಿನ ಐತಿಹಾಸಿಕ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಬೀಳಲಿದೆ. ಸುಮಾರು ಮೂರು ವರ್ಷಗಳ ನಿರಂತರ ಮಾತುಕತೆಯ ಬಳಿಕ, ಉಭಯ ದೇಶಗಳು ಎಫ್‌ಟಿಎ ಒಪ್ಪಂದ ಜಾರಿಗೊಳಿಸುವ ತೀರ್ಮಾನಕ್ಕೆ ಬಂದಿವೆ. ಒಂದು ದಶಕದಲ್ಲಿ ಅಭಿವೃದ್ಧಿ ಹೊಂದಿದ ಆರ್ಥಿಕತೆಯೊಂದಿಗೆ ಭಾರತದ ಮೊದಲ ಪ್ರಮುಖ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವಾದ ಎಫ್‌ಟಿಎ, ಬ್ರಿಟಿಷ್ ಸಂಸತ್ತು ಮತ್ತು ಭಾರತದ ಕೇಂದ್ರ ಸಚಿವ ಸಂಪುಟದ ಕಾನೂನು ಅನುಮೋದನೆಯ ನಂತರ, ಬಹುಶಃ ಒಂದು ವರ್ಷದೊಳಗೆ ಜಾರಿಗೆ ಬರುವ ನಿರೀಕ್ಷೆಯಿದೆ.

**ಆಲ್ಕೋಹಾಲ್ ಪಾನೀಯಗಳು:** ಸ್ಕಾಚ್ ವಿಸ್ಕಿ, ಜಿನ್ ಮೇಲಿನ ಆಮದು ಸುಂಕಗಳು ತಕ್ಷಣದಿಂದ ಶೇ. 150ರಿಂದ ಶೇ. 75ಕ್ಕೆ, 10ವರ್ಷಗಳಲ್ಲಿ ಶೇ.40ಕ್ಕೆ ಇಳಿಯಲಿವೆ.

**ಆಟೋಮೊಬೈಲ್‌ಗಳು:** ಪ್ರಸ್ತುತ ಶೇ. 100ಕ್ಕಿಂತ ಹೆಚ್ಚಿರುವ ಯುಕೆ ನಿರ್ಮಿತ ಕಾರುಗಳ ಮೇಲಿನ ಸುಂಕಗಳನ್ನು, ಕೋಟಾ ವ್ಯವಸ್ಥೆ ಅಡಿಯಲ್ಲಿ ಶೇ. 10ಕ್ಕೆ ಇಳಿಸಲಾಗುವುದು.

**ಇತರ ಸರಕುಗಳು:** ಸೌಂದರ್ಯವರ್ಧಕಗಳು, ಸಾಲ್ಮನ್, ಚಾಕೊಲೇಟ್‌ಗಳು, ಬಿಸ್ಕತ್ತುಗಳು, ವೈದ್ಯಕೀಯ ಸಾಧನಗಳು ಸೇರಿದಂತೆ, ವಿವಿಧ ಯುಕೆ ಉತ್ಪನ್ನಗಳ ಮೇಲಿನ ಸುಂಕಗಳನ್ನು ಕಡಿತ ಮಾಡಲು ಭಾರತ ಒಪ್ಪಿಕೊಂಡಿದೆ.

**ಭಾರತೀಯ ಉದ್ಯಮದಲ್ಲಿ ವಿಜೇತರು ಯಾರು?:** ಎಫ್‌ಟಿಎದಿಂದ ಲಾಭ ಪಡೆಯುವ ಸಾಧ್ಯತೆಯಿರುವ ವಲಯಗಳಲ್ಲಿ ಜವಳಿ, ಪಾದರಕ್ಷೆಗಳು, ಆಟೋ ಘಟಕಗಳು, ರತ್ನಗಳು, ಆಭರಣಗಳು, ಪೀಠೋಪಕರಣಗಳು, ಕ್ರೀಡಾ ಸಾಮಗ್ರಿಗಳು, ರಾಸಾಯನಿಕಗಳು, ಯಂತ್ರೋಪಕರಣಗಳು ಸೇರಿವೆ. ಇವುಗಳಲ್ಲಿ ಹಲವು ಪ್ರಸ್ತುತ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಕ್ರಮವಾಗಿ ಶೇ. 4, ಶೇ.16ರ ನಡುವಿನ ಸುಂಕವನ್ನು ಎದುರಿಸುತ್ತಿವೆ. ಹೊಸ ಕೋಟಾ ವ್ಯವಸ್ಥೆಯಡಿಯಲ್ಲಿ ಭಾರತೀಯ ಎಲೆಕ್ಟ್ರಿಕ್ ಮತ್ತು ಹೈಬ್ರಿಡ್ ವಾಹನ ತಯಾರಕರು ಸಹ, ಯುನೈಟೆಟ್ ಕಿಂಗ್‌ಡಮ್‌ನಲ್ಲಿ ಆದ್ಯತೆಯ ಪ್ರವೇಶವನ್ನು ಪಡೆಯುತ್ತಾರೆ. ಎಫ್‌ಟಿಎ ಒಪ್ಪಂದ ಯುನೈಟೆಡ್ ಕಿಂಗ್‌ಡಮ್‌ನ ಜಿಡಿಪಿಯನ್ನು ದೀರ್ಘಾವಧಿಯಲ್ಲಿ ವಾರ್ಷಿಕವಾಗಿ ಸುಮಾರು 4.8 ಬಿಲಿಯನ್ ಅಮೆರಿಕನ್ ಡಾಲರ್ ವರೆಗೆ ಹೆಚ್ಚಿಸಬಹುದು ಎಂದು ಬ್ರಿಟಿಷ್ ಸರ್ಕಾರದ ಮೂಲಗಳು ಅಂದಾಜಿಸಿವೆ. ಭಾರತೀಯ ಉಡುಪುಗಳು, ಪಾದರಕ್ಷೆಗಳು. ಆಹಾರ ಉತ್ಪನ್ನಗಳ ಮೇಲಿನ ಕಡಿಮೆ ಬೆಲೆಗಳಿಂದ, ಬ್ರಿಟಿಷ್ ಗ್ರಾಹಕರು ಪ್ರಯೋಜನ ಪಡೆಯುವ ನಿರೀಕ್ಷೆಯಿದೆ. ಅದೇ ರೀತಿ ಯುಕೆ ಸರಕುಗಳ ಸುಮಾರು ಶೇ. 90ರಷ್ಟು ಸುಂಕವನ್ನು ಭಾರತ ಕಡಿಮೆ ಮಾಡಲಿದೆ. ಯುಕೆ ಮೂಲದ ಡಿಯಾಜಿಯೊ, ಆಸ್ಟನ್ ಮಾರ್ಟಿನ್, ಜಾಗ್ವಾರ್ ಲ್ಯಾಂಡ್ ರೋವರ್ ನಂತಹ ಬ್ರಿಟಿಷ್ ಐಷಾರಾಮಿ ಕಾರು ತಯಾರಕರು, ಭಾರತದ ಬೆಳೆಯುತ್ತಿರುವ ಗ್ರಾಹಕ ಮಾರುಕಟ್ಟೆಗೆ ಸುಧಾರಿತ ಪ್ರವೇಶದಿಂದ ಗಮನಾರ್ಹವಾಗಿ ಪ್ರಯೋಜನ ಪಡೆಯುವ ನಿರೀಕ್ಷೆಯಿದೆ.



**ಎಫ್‌ಟಿಎ ಒಪ್ಪಂದ ಜಾರಿ**

**ಭಾರತೀಯ ರಫ್ತುಗಳು**

ಶೇ. 99ರಷ್ಟು ಭಾರತೀಯ ಉತ್ಪನ್ನಗಳು ಯುಕೆ ಮಾರುಕಟ್ಟೆಗೆ ಸುಂಕ-ಮುಕ್ತ ಪ್ರವೇಶವನ್ನು ಪಡೆಯುತ್ತವೆ. ಇದು ಭಾರತದ ಪ್ರಸ್ತುತ ವ್ಯಾಪಾರ ಮೌಲ್ಯದ ಬಹುತೇಕ ಎಲ್ಲವನ್ನೂ ಒಳಗೊಂಡಿದೆ. ಭಾರತ-ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದ ಮಾತುಕತೆಗಳು ನಡೆಯುತ್ತಿರುವಾಗಲೇ, ಭಾರತ-ಯುಕೆ ಮುಕ್ತ ವ್ಯಾಪಾರ ಒಪ್ಪಂದ ಜಾರಿಯಾಗುತ್ತಿರುವುದು ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ.

### ಎಫ್‌ಟಿಎ ಪ್ರಯೋಜನಗಳು

**ಭಾರತ-ಯುಕೆ ಮುಕ್ತ ವ್ಯಾಪಾರ ಒಪ್ಪಂದ ದ್ವಿಪಕ್ಷೀಯ ಹೂಡಿಕೆ ಹರಿವನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಪ್ರಸ್ತುತ ಯುಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 1,000 ಕ್ಕೂ ಹೆಚ್ಚು ಭಾರತೀಯ ಕಂಪನಿಗಳು, 1 ಲಕ್ಷಕ್ಕೂ ಹೆಚ್ಚು ಜನರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದು, ಸುಮಾರು 20 ಬಿಲಿಯನ್ ಅಮೆರಿಕನ್ ಡಾಲರ್ ಹೂಡಿಕೆ ಮಾಡುತ್ತಿವೆ. ಅದೇ ರೀತಿ ಭಾರತದಲ್ಲಿ ಯುನೈಟೆಡ್ ಕಿಂಗ್‌ಡಮ್ ಸುಮಾರು 36 ಬಿಲಿಯನ್ ಅಮೆರಿಕನ್ ಡಾಲರ್ ಹೂಡಿಕೆ ಮಾಡಿದೆ.**

## ಮಿನಿ ನ್ಯೂಸ್

### ಮೋದಿ ಪೋಸ್ಟ್ ಧನಕರ್ ರಾಜೀನಾಮೆ ರಾಜಕೀಯ ಬಹಿರಂಗಗೊಳಿಸಿದೆ; ಕಾಂಗ್ರೆಸ್

**ಗುವಾಹಟಿ:** ಲೋಕ ಸಭೆಯಲ್ಲಿ ಕಾಂಗ್ರೆಸ್ ಉಪ ನಾಯಕ ಗೌರವ್ ಗೊಗೊಯ್ ಅವರು ಜಗದೀಪ್ ಧನಕರ್ ಅವರ ಉಪ ರಾಷ್ಟ್ರಪತಿ ಹುದ್ದೆಯಿಂದ ನಿರ್ಗಮನದ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರ ಸಾಮಾಜಿಕ ಮಾಧ್ಯಮ ಪೋಸ್ಟ್ ರಾಜೀನಾಮೆ ರಾಜಕೀಯ ಸ್ವರೂಪವನ್ನು ತೋರಿಸಿದೆ ಎಂದು ಹೇಳಿದ್ದಾರೆ.

ವೈದ್ಯಕೀಯ ಕಾರಣಗಳನ್ನು ಉಲ್ಲೇಖಿಸಿ ಧನಕರ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಅವರು ತಮ್ಮ ರಾಜೀನಾಮೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಕಳುಹಿಸಿದರು, ತಕ್ಷಣದಿಂದ ಜಾರಿಗೆ ಬರುವಂತೆ ರಾಜೀನಾಮೆ ನೀಡುತ್ತಿರುವುದಾಗಿ ಹೇಳಿದರು.

ಗಮನಾರ್ಹವಾಗಿ, ಗೊಗೊಯ್ ಅವರು ತಮ್ಮ ಪೋಸ್ಟ್‌ನಲ್ಲಿ ಧನಕರ್ ಅವರ ಹೆಸರನ್ನು ಉಲ್ಲೇಖಿಸಲಿಲ್ಲ.ಸಾಂವಿಧಾನಿಕ ಹುದ್ದೆಯ ಘನತೆಯನ್ನು ಅದರ ಅಧ್ಯಕ್ಷೀಯ ಅಧಿಕಾರಿಯ ಪಾತ್ರ, ಅದರ ರಾಜೀನಾಮೆ ಎರಡರಲ್ಲೂ ಕಾಪಾಡಿಕೊಳ್ಳಬೇಕು. ಪ್ರಧಾನಿ ಮೋದಿಯವರ ಟ್ವಿಟ್ ರಾಜೀನಾಮೆಯ ರಾಜಕೀಯ ಸ್ವರೂಪವನ್ನು ಬಹಿರಂಗಪಡಿಸಿದೆ ಎಂದು ಗೊಗೊಯ್ ಸಾಮಾಜಿಕ ಮಾಧ್ಯಮ ಸೈಟ್‌ನಲ್ಲಿ ಬರೆದಿದ್ದಾರೆ. ಮೋದಿ ಧನಕರ್ ಅವರಿಗೆ ಉತ್ತಮ ಆರೋಗ್ಯವನ್ನು ಹಾರೈಸಿದರು, ವಿವಿಧ ಹುದ್ದೆಗಳಲ್ಲಿ ದೇಶಕ್ಕೆ ಸೇವೆ ಸಲ್ಲಿಸಲು ಅವರಿಗೆ ಅನೇಕ ಅವಕಾಶಗಳು ಸಿಕ್ಕಿವೆ ಎಂದು ಹೇಳಿದರು. ಜಗದೀಪ್ ಧನ್‌ಕರ್ ಜಿ ಅವರಿಗೆ ಭಾರತದ ಉಪರಾಷ್ಟ್ರಪತಿ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ನಮ್ಮ ದೇಶಕ್ಕೆ ಸೇವೆ ಸಲ್ಲಿಸಲು ಹಲವು ಅವಕಾಶಗಳು ಸಿಕ್ಕಿವೆ. ಅವರಿಗೆ ಉತ್ತಮ ಆರೋಗ್ಯವಾಗಲಿ ಎಂದು ಹಾರೈಸುತ್ತೇನೆ ಎಂದು ಪ್ರಧಾನಿ ಎಕ್ಸ್‌ನಲ್ಲಿ ಹೇಳಿದ್ದರು.

ಉಪರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡುವ ಧನಕರ್ ಅವರ ನಿರ್ಧಾರವು ಆರೋಗ್ಯ ರಕ್ಷಣೆಗೆ ಆದ್ಯತೆ ನೀಡುವುದಕ್ಕಿಂತ ಹೆಚ್ಚಿನದನ್ನು ಹೊಂದಿದೆಯೇ ಎಂಬ ಬಗ್ಗೆ ಊಹಾಪೋಹಗಳ ಸುರಿಮಳೆಯನ್ನು ಹುಟ್ಟುಹಾಕಿದೆ. ಏಕೆಂದರೆ ಅವರ ಹಠಾತ್ ನಡೆ ರಾಜ್ಯಸಭೆಯಲ್ಲಿ ಒಂದು ದಿನದ ಕಾರ್ಯಕ್ರಮಗಳನ್ನು ಅವರ ಕಾವಲಿನಲ್ಲಿ ನಿಲ್ಲಿಸಿತ್ತು. ಇದು ಸರ್ಕಾರವನ್ನು ಅಚ್ಚರಿಗೊಳಿಸಿತು ಮತ್ತು ಅದನ್ನು ಹಾನಿ ನಿಯಂತ್ರಣ ಕ್ರಮದಲ್ಲಿ ಇರಿಸಿತು.

### ಚೀನಾ ಪ್ರಜೆಗಳಿಗೆ ಪ್ರವಾಸಿ ವೀಸಾ ಪ್ರಕ್ರಿಯೆ ಪುನರಾರಂಭಿಸಿದ ಭಾರತ

**ಬೀಜಿಂಗ್:** ಚೀನಾ ಪ್ರಜೆಗಳಿಗೆ ಪ್ರವಾಸಿ ವೀಸಾ ನೀಡುವ ಪ್ರಕ್ರಿಯೆಯನ್ನು ಭಾರತ ಮರು ಆರಂಭಿಸಿದೆ. 2020ರಲ್ಲಿ ಕೋವಿಡ್-19 ಕಾರಣದಿಂದಾಗಿ ಚೀನಾ ಪ್ರಜೆಗಳಿಗೆ ಪ್ರವಾಸಿ ವೀಸಾ ನೀಡುವುದನ್ನು ಭಾರತ ರದ್ದುಗೊಳಿಸಿತ್ತು, ಕೋವಿಡ್ ಬಳಿಕ ಪೂರ್ವ ಲಡಾಖ್ ಗಡಿಯ ವಿಚಾರವಾಗಿ ವೀಸಾ ನಿರ್ಬಂಧ ಮುಂದುವರಿದಿತ್ತು.

ಬೀಜಿಂಗ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಈ ವಾರದಿಂದ ಚೀನಾ ಪ್ರಜೆಗಳು ಭಾರತದ ಪ್ರವಾಸಿ ವೀಸಾಕ್ಕೆ ಅರ್ಜಿ ಸಲ್ಲಿಸಬಹುದು ಎಂದು ಹೇಳಿದೆ. ಬೀಜಿಂಗ್, ಶಾಂಘೈ, ಗುವಾಂಗ್ ಝುನಲ್ಲಿರುವ ಆಯಾ ಭಾರತೀಯ ವೀಸಾ ಅರ್ಜಿ ಕೇಂದ್ರಗಳಲ್ಲಿ ವೀಸಾಗಳಿಗೆ ಅರ್ಜಿ ಸಲ್ಲಿಸಬಹುದು. ಇದಕ್ಕೆ ಅಗತ್ಯವಿರುವ ಕಾರ್ಯವಿಧಾನಗಳು, ದಾಖಲೆಗಳ ಕುರಿತು ಕಚೇರಿಯು ಪ್ರಕಟಣೆ ಹೊರಡಿಸಿದೆ.

ಇದೀಗ ಗಾಲ್ವಾನ್ ಕಣಿವೆಯಲ್ಲಿ ನಡೆದ ಮಿಲಿಟರಿ ಘರ್ಷಣೆಯ ನಂತರ ತೀವ್ರ ಹದಗೆಟ್ಟ ದ್ವಿಪಕ್ಷೀಯ ಸಂಬಂಧಗಳನ್ನು ಸರಿಪಡಿಸುವ ಪ್ರಯತ್ನಗಳ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದೆ. ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್‌ಚೀನಾದ ವಿದೇಶಾಂಗ ಸಚಿವ ವಾಂಗ್‌ಯಿ ಜತೆಗೆ ಮಾತುಕತೆ ನಡೆಸಿದ ಬಳಿಕ ಈ ಕ್ರಮ ಕೈಗೊಳ್ಳಲಾಗಿದೆ. ಶಾಂಘೈ ಕೋಆಪರೇಷನ್ ಸಂಸ್ಥೆ ಆಯೋಜಿಸಿದ್ದ ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಜುಲೈ 14, 15ರಂದು ಜೈಶಂಕರ್ ಚೀನಾಕ್ಕೆ ಭೇಟಿ ನೀಡಿದ್ದರು.

### ಭಾರಿ ಮಳೆ: ಜಮ್ಮು-ಶ್ರೀನಗರ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತ

**ಜಮ್ಮು:** ಧಾರಾಕಾರ ಮಳೆಯಿಂದಾಗಿ ಮಣ್ಣು ಕುಸಿದು ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತಗೊಂಡಿದೆ. ಅಪಾರ ಸಂಖ್ಯೆಯ ವಾಹನಗಳು, ಅಮರನಾಥ ಯಾತ್ರಿಗಳು ರಂಬನ್ ಜಿಲ್ಲೆಯಲ್ಲಿ ಹೆದ್ದಾರಿಯಲ್ಲಿ ದಟ್ಟಣೆಯಲ್ಲಿ ಸಿಲುಕಿದ್ದಾರೆ. ಜಮ್ಮು ವಲಯದಲ್ಲಿ ಮೂರು ದಿನಗಳಿಂದ ಮಳೆ ಮುಂದುವರಿದಿದೆ. ಈ ಮಧ್ಯೆ, ಮುಂದಿನ 24 ಗಂಟೆಗಳಲ್ಲಿ ದಿಢೀರ್ ಪ್ರವಾಹ ಉಂಟಾಗುವ ಮುನ್ನೆಚ್ಚರಿಕೆಯನ್ನು ಭಾರತೀಯ ಹವಾಮಾನ ಇಲಾಖೆ ನೀಡಿದೆ. ಹೀಗಾಗಿ, ಮಾರ್ಗ ಮಧ್ಯೆ ಸಿಲುಕಿರುವ ಅಮರನಾಥ ಯಾತ್ರಿಗಳನ್ನು ವಾಪಸ್ ಶ್ರೀನಗರಕ್ಕೆ ಕರೆತರಲು ಜಿಲ್ಲಾಡಳಿತ ಕಾರ್ಯಾಚರಣೆ ಆರಂಭಿಸಿದೆ. ಮಳೆ ಕಡಿಮೆಯಾಗಿ, ಸಂಚಾರ ಪುನರಾರಂಭಗೊಂಡ ನಂತರವೇ, ಈ ಮಾರ್ಗ ಬಳಸುವಂತೆ ಜನರಿಗೆ ಜಿಲ್ಲಾಡಳಿತ ಮನವಿ ಮಾಡಿದೆ. ರಂಬನ್ ಜಿಲ್ಲೆಯ ಮಗರ್ ಕೋಟೆ ಕಣಿವೆಯಲ್ಲಿನ ಸೇತುವೆ ಬಳಿ ಮಣ್ಣು ಕುಸಿದಿದೆ. ದೇಶದ ಉಳಿದ ಭಾಗಗಳಿಂದ ಕಾಶ್ಮೀರವನ್ನು ಸಂಪರ್ಕಿಸುವ ಏಕೈಕ ಹೆದ್ದಾರಿ ಇದಾಗಿದ್ದು, ಸಂಚಾರ ಸ್ಥಗಿತಗೊಂಡಿರುವುದರಿಂದ ಜನರು ಪರದಾಡುವಂತಾಗಿದೆ. ಮಳೆ ಮುಂದುವರಿದಿರುವುದು ಕಾರ್ಯಾಚರಣೆಗೆ ಅಡ್ಡಿಯಾಗಿದೆ.

ಹವಾಮಾನ ಪೂರಕವಾಗಿದ್ದರೆ ಮುಂದಿನ ಕೆಲವು ಗಂಟೆಗಳಲ್ಲಿ ಹೆದ್ದಾರಿಯಲ್ಲಿ ಸಂಚಾರ ಪುನರಾರಂಭಗೊಳ್ಳುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಿಶ್ತವಾಡ್ ಜಿಲ್ಲೆಯ ಸಿಂಥನ್‌ನಲ್ಲ ಮಾರ್ಗದಲ್ಲೂ ಪ್ರವಾಹದಿಂದಾಗಿ ರಸ್ತೆ ಸಂಪರ್ಕ ಕಡಿತಗೊಂಡಿದೆ. ರಜೌರಿ, ಪೂಂಚ್, ರಿಯಾಸಿ, ಉಧಂಪುರ್, ಥೋಡ ಸೇರಿದಂತೆ ಕಣಿವೆ, ಪರ್ವತ ಶ್ರೇಣಿಯ ಮಾರ್ಗಗಳಲ್ಲಿ ಅಲ್ಲಲ್ಲಿ ಮಣ್ಣು ಕುಸಿದಿದೆ. ಮಳೆ, ಪ್ರವಾಹ ಸಂಬಂಧಿತ ಅನಾಹುತಗಳಿಗೆ ತುರ್ತಾಗಿ ಸ್ಪಂದಿಸಲು ಜಿಲ್ಲಾ ಕೇಂದ್ರಗಳಲ್ಲಿ ಸಹಾಯವಾಣಿ ಆರಂಭಿಸಲಾಗಿದೆ. ವಿಪತ್ತು ನಿರ್ವಹಣಾ ತಂಡಗಳನ್ನು ಸನ್ನದ್ಧವಾಗಿಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

### 15 ದಿನಗಳಲ್ಲಿ ಹರಿದ್ವಾರಕ್ಕೆ 4.5 ಕೋಟಿ ಭಕ್ತರ ಭೇಟಿ

**ಹರಿದ್ವಾರ:** ಉತ್ತರಾಖಂಡದ ಹರಿದ್ವಾರದಲ್ಲಿ ಅಪಾರ ಭಕ್ತರ ಕಂಠದಿಂದ ಹೊರಬಂದ ಹರ ಹರ ಮಹಾದೇವ, ಬಮ್ ಬಮ್ ಭೋಲೆ ಘೋಷದೊಂದಿಗೆ 15 ದಿನಗಳ ಕಾವಡ್ ಯಾತ್ರೆ, ಬುಧವಾರ ಮುಕ್ತಾಯಗೊಂಡಿತು. ಲಕ್ಷಾಂತರ ಭಕ್ತರು ಗಂಗಾ ನದಿಯಲ್ಲಿ ಪವಿತ್ರ ಜಲ ಪಡೆದುಕೊಂಡರು. ಜತೆಗೆ ನಗರದಲ್ಲಿನ ಶಿವನ ದೇವಾಲಯಗಳಲ್ಲಿ ಜಲಾಭಿಷೇಕ ಕೈಗೊಂಡರು. ಮೇಳ ನಿಯಂತ್ರಣ ಕೊಠಡಿಯ ಮಾಹಿತಿ ಪ್ರಕಾರ, ಈ ಬಾರಿಯ ಕಾವಡ್ ಯಾತ್ರೆಯಲ್ಲಿ 15 ದಿನಗಳಲ್ಲಿ 4.5 ಕೋಟಿ ಭಕ್ತರು ಹರಿದ್ವಾರಕ್ಕೆ ಬಂದು ಪವಿತ್ರ ಗಂಗಾಜಲವನ್ನು ಕೊಂಡೊಯ್ದಿದ್ದಾರೆ. ಭಗವಂತ ಶಿವನ ಮಾವ ದಕ್ಷನ ನಿವಾಸ ಎಂದು ನಂಬಲಾದ ಕಂಖಾಲ್ ಪ್ರದೇಶದಲ್ಲಿರುವ ದಕ್ಷ ಪ್ರಜಾಪತಿ ಮಹಾದೇವ ದೇವಾಲಯದಲ್ಲಿ ಕೇಸರಿ ಬಣ್ಣದ ವಸ್ತ್ರಧರಿಸಿದ ಭಕ್ತರು ಅಪಾರ ಸಂಖ್ಯೆಯಲ್ಲಿ ನೆರೆದಿದ್ದರು.



## ಪ್ರಿಯಾಂಕಾ ಉಪೇಂದ್ರ ಜೊತೆ ಹಾರರ್ ಚಿತ್ರದಲ್ಲಿ ಸ್ವಾಮಿನಾಥನ್ ಅನಂತರಾಮನ್

2019ರಲ್ಲಿ ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾದ ಧಾರಾವಾಹಿ 'ಮಿಥುನ ರಾಶಿ'. ಕ್ಯಾಬ್ ಕಂಪನಿ ಮಾಲೀಕ – ಆಟೋ ಓಡಿಸುವ ಹುಡುಗಿ ನಡುವಿನ ಕಥೆ 'ಮಿಥುನ ರಾಶಿ' ಸೀರಿಯಲ್‌ನಲ್ಲಿತ್ತು. ಈ ಧಾರಾವಾಹಿಯಲ್ಲಿ ಕ್ಯಾಬ್ ಕಂಪನಿ ಮಾಲೀಕ ಮಿಥುನ್ ಪಾತ್ರದಲ್ಲಿ ಸ್ವಾಮಿನಾಥನ್ ಅನಂತರಾಮನ್ ನಟಿಸಿದ್ದರು. 'ಮಿಥುನ ರಾಶಿ' ಬಳಿಕ ಕೆಲ ತಮಿಳು ಸೀರಿಯಲ್‌ಗಳಲ್ಲೂ ಅಭಿನಯಿಸಿದ್ದ ಸ್ವಾಮಿನಾಥನ್ ಅನಂತರಾಮನ್ ಇದೀಗ ಕನ್ನಡದ ಹಾರರ್ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ವಿಶೇಷ ಅಂದ್ರೆ, ಈ ಚಿತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ಸಹ ಪ್ರಮುಖ ಪಾತ್ರದಲ್ಲಿದ್ದಾರೆ. ಪ್ಯಾರಾ ನಾರ್ಮಲ್ ಹಾಗೂ ಹಾರರ್ ಕಥಾಹಂದರ ಹೊಂದಿರುವ ಚಿತ್ರ 'ಕಮರೊ2'. ಈ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಯಾಯ್ತು. ಆಗಸ್ಟ್ 1 ರಂದು 'ಕಮರೊ2' ರಿಲೀಸ್ ಆಗಲಿದೆ. ಪವನ್ ಗೌಡ ನಿರ್ಮಾಣದ ಈ ಚಿತ್ರವನ್ನು ಎ ಪರಮೇಶ್ ನಿರ್ದೇಶಿಸಿದ್ದಾರೆ.

ನಿರ್ದೇಶಕ ಪರಮೇಶ್ ನಾನು ಈ ಹಿಂದೆ ಪ್ಯಾರಾ ನಾರ್ಮಲ್ ಜೋನರ್‌ನ 'ಕಮರೊಟು ಚೆಕ್ ಪೋಸ್ಟ್' ಎಂಬ ಚಿತ್ರವನ್ನು ನಿರ್ದೇಶನ ಮಾಡಿದ್ದೆ. ಅದು ನನ್ನ ತಂತ್ರಜ್ಞಾನದ ಅನುಭವಕ್ಕಾಗಿ ಮಾಡಿದ ಚಿತ್ರ. ಅದರಲ್ಲಿ ಯಾವುದೇ ಪರಿಚಿತ ಕಲಾವಿದರು ಅಭಿನಯಿಸಿರಲಿಲ್ಲ. ಆದರೂ ಆ ಚಿತ್ರ ಅಪಾರ ಮೆಚ್ಚುಗೆ ಪಡೆದು ಯಶಸ್ವಿಯಾಗಿತ್ತು. ಈಗ ಸೀಕ್ವೆಲ್ ಆಗಿ 'ಕಮರೊ2' ಚಿತ್ರವನ್ನು ನಿರ್ದೇಶನ ಮಾಡಿದ್ದೇನೆ. ಇದು ಸಹ ಹಾರರ್ ಕಥೆಯೊಂದಿಗೆ ಪ್ಯಾರಾ ನಾರ್ಮಲ್ ಜೋನರ್‌ನ ಚಿತ್ರವಾಗಿದೆ. ಚಿತ್ರಕ್ಕೆ ಮಂಗಳೂರಿನ ಉಡುಪಿ, ಚಿಕ್ಕಮಗಳೂರು ಸುತ್ತಮುತ್ತಲಿನಲ್ಲಿ ಚಿತ್ರೀಕರಣ ಮಾಡಿದ್ದೇವೆ. ಚಿತ್ರದ ಕಥೆ ಕೇಳಿದ ಪವನ್ ಗೌಡ ನಿರ್ಮಾಣಕ್ಕೆ ಮುಂದಾದರು. ಮೊದಲ ಬಾರಿಗೆ ವಿಭಿನ್ನ ಪಾತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ನಟಿಸಿದ್ದಾರೆ. ಈವರೆಗೂ ಮಾಡಿರದ ಪಾತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ನಟಿಸಿದ್ದಾರೆ. ಅವರಿಗೆ ಕಥೆ ಹೇಳುವಾಗ ಒಪ್ಪಿಕೊಳ್ಳುತ್ತಾರೋ ಇಲ್ಲವೋ ಎಂಬ ಭಯವಿತ್ತು. ಆದರೆ ಕಥೆ ಕೇಳಿದ ತಕ್ಷಣ ಒಪ್ಪಿಕೊಂಡರು ಎಂದಿದ್ದಾರೆ ನಿರ್ದೇಶಕ ಪರಮೇಶ್. ಅಂದ್ಹಾಗೆ, 'ಕಮರೊ2' ಸಿನಿಮಾದಲ್ಲಿ 'ಮಿಥುನ ರಾಶಿ' ಖ್ಯಾತಿಯ ಸ್ವಾಮಿನಾಥನ್ ಅನಂತರಾಮನ್, ಚೋ ಮಂತರ್' ಸಿನಿಮಾದ ಮೊಗ್ರಾ ಪಾತ್ರದಿಂದಾಗಿ ಚಿರಪರಿಚಿತರಾಗಿರುವ ರಜನಿ ಭಾರದ್ವಾಜ್ ಹಾಗೂ ಪ್ರಿಯಾಂಕಾ ಉಪೇಂದ್ರ ನಟಿಸಿದ್ದಾರೆ. ತಾರಾಬಳಗದಲ್ಲಿ ನೀನಾಸಂ ಅಶ್ವಥ್, ನಾಗೇಂದ್ರ ಅರಸ್, ಮಹೇಶ್ ರಾಜ್, ಬೇಬಿ ಖುಷಿ ಮುಂತಾದವರಿದ್ದಾರೆ.



## ಕಾಟೇರ ಬಳಿಕ 'ಬಂದೂಕ್' ಹಿಡ್ಕೊಂಡು ಬಂದ ಶ್ವೇತಾ ಪ್ರಸಾದ್

ರಾಧಾ ರಮಣ', 'ಶ್ರೀರಸ್ತು ಶುಭಮಸ್ತು' ಮುಂತಾದ ಧಾರಾವಾಹಿಗಳ ಮೂಲಕ ಕನ್ನಡ ಕಿರುತೆರೆ ಪ್ರೇಕ್ಷಕರಿಗೆ ಪರಿಚಿತಗೊಂಡಿರುವ ನಟಿ ಶ್ವೇತಾ ಆರ್ ಪ್ರಸಾದ್ ಅವರು 'ಕಳ್ಬಟ್ಟದ ದರೋಡೆಕೋರರು', 'ಪದವಿ ಪೂರ್ವ' ಸಿನಿಮಾಗಳಲ್ಲಿಯೂ ನಟಿಸಿದ್ದಾರೆ. 2023ರಲ್ಲಿ ಬಂದ 'ಕಾಟೇರ' ಸಿನಿಮಾದಲ್ಲಿ ಒಂದು ಪವರ್ ಫುಲ್ ರೋಲ್ ಮಾಡಿದ್ದ ಶ್ವೇತಾ ಪ್ರಸಾದ್ ಇದೀಗ ಹೊಸ ಚಿತ್ರದೊಂದಿಗೆ ಮರಳಿದ್ದಾರೆ. ಮಹೇಶ್ ರವಿಕುಮಾರ್ ಎಂಬುವವರು ನಿರ್ದೇಶನ ಮಾಡಿರುವ ಬಂದೂಕ್' ಸಿನಿಮಾದಲ್ಲಿ ಶ್ವೇತಾ ಪ್ರಸಾದ್ ಅವರು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಜುಲೈ 25ಕ್ಕೆ ಈ ಸಿನಿಮಾವು ತೆರೆಗೆ ಬರುತ್ತಿದೆ. ಸಾಮಾನ್ಯವಾಗಿ ಬಂದೂಕ್‌ನಲ್ಲಿ ಆರು ಚೇಂಬರ್ ಇರುತ್ತದೆ. ಆದರೆ ಈ ಸಿನಿಮಾದಲ್ಲಿ 5 ಚೇಂಬರ್ ಇರುವ ಗನ್ ಇರಲಿದೆಯಂತೆ. ಆ ಗನ್ ಎಲ್ಲಾ ಪಾತ್ರಗಳಿಗೂ ಕನೆಕ್ಟ್ ಆಗುತ್ತದೆ. ಆದ್ದರಿಂದ ಬಂದೂಕ್ ಎಂದು ಹೆಸರಿಡಲಾಗಿದೆಯಂತೆ.

**ನಟಿ ಶ್ವೇತಾ ಪ್ರಸಾದ್ ಏನಂದ್ರು?:** ಈ ಸಿನಿಮಾದಲ್ಲಿ ನನ್ನ ಪಾತ್ರ ಬಹಳ ಪ್ರಾಮುಖ್ಯತೆಯಿಂದ ಕೂಡಿದೆ. ನಾನಿಲ್ಲಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದೇನೆ. ಆ ಪೊಲೀಸ್ ಅಧಿಕಾರಿ ಹೇಗೆ ವಿಲನ್‌ನ ಕಂಡುಹಿಡಿಯುತ್ತಾರೆ ಎಂಬುದು ಇಂಟರೆಸ್ಟಿಂಗ್ ಆಗಿದೆ. ನಮಗೆ ಪೊಲೀಸ್ ಎಂದರೆ, ಮಾಲಾಶ್ರೀ ಅವರು ನೆನಪಾಗುತ್ತಾರೆ. ಆಮೇಲೆ ಪ್ರಿಯಾ ಹಾಸನ್ ಅವರು ಮಾಡಿದ್ದಾರೆ. ಈಗ ನನಗೆ ಎರಡು ಸಿನಿಮಾಗಳಲ್ಲಿ ಪೊಲೀಸ್ ಅಧಿಕಾರಿ ಪಾತ್ರ ಮಾಡುತ್ತಿದ್ದೇನೆ. ಈಚೆಗೆ ಸಿನಿಮಾಗಳಲ್ಲಿ ಪೊಲೀಸ್ ಪಾತ್ರಗಳನ್ನ ಚೆನ್ನಾಗಿಯೇ ತೆರೆಮೇಲೆ ತೋರಿಸುತ್ತಿದ್ದಾರೆ. ಈ ಬಂದೂಕ್ ಅನ್ನೋ ಸಿನಿಮಾದಲ್ಲಿ ಬಂದೂಕ್ ಹಿಡ್ಕೊಂಡಿರೋ ಹುಡುಗಿಯಾಗಿ ನಾನು ಕಾಣಿಸಿಕೊಂಡಿದ್ದೇನೆ ಎಂದು ಶ್ವೇತಾ ಪ್ರಸಾದ್ ಹೇಳುತ್ತಾರೆ.

**ಕರಾವಳಿಯಲ್ಲಿ ಚಿತ್ರೀಕರಣ ಮಾಡಲಾಗಿದೆ:** ಶ್ವೇತಾ ಪ್ರಸಾದ್ ಜೊತೆಗೆ ಬಾಲಾಜಿ ಮನೋಹರ್, ಶಂಕರ್ ಅಶ್ವತ್ಥ್, ಹರೀಶ್ ರೈ ಗೋಪಾಲ ಕೃಷ್ಣ ದೇಶಪಾಂಡೆ ಇತರರು ಈ ಸಿನಿಮಾದಲ್ಲಿ ನಟಿಸಿದ್ದಾರೆ.



## ತನುಶ್ರೀ ದತ್ತಾಗೆ ಕುಟುಂದವರಿಂದಲೇ ಕಿರುಕುಳ

ಭಾರತದಲ್ಲಿ ಮೀ –ಟೂ ಆಂದೋಲನವನ್ನು ಪ್ರಾರಂಭಿಸಿದ ಬಾಲಿವುಡ್ ನಟಿ ತನುಶ್ರೀ ದತ್ತಾ ಇತ್ತೀಚೆಗೆ ಇನ್ಸ್ಟಾಗ್ರಾಮ್ನಲ್ಲಿ ಭಾವನಾತ್ಮಕ ವಿಡಿಯೋವನ್ನು ಹಂಚಿಕೊಂಡಿದ್ದಾರೆ. ಈ ವೀಡಿಯೋದಲ್ಲಿ, ಅವರು ಕಳೆದ 4–5 ವರ್ಷಗಳಿಂದ ತಮ್ಮ ಸ್ವಂತ ಮನೆಯಲ್ಲಿ ಕಿರುಕುಳ ಅನುಭವಿಸುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ವಿಡಿಯೋದಲ್ಲಿ, ಅವರು ಅಳುತ್ತಿರುವುದನ್ನು ಕಾಣಬಹುದು. ಅವರು ಮನೆಯಲ್ಲಿ ಮಾನಸಿಕ ಮತ್ತು ದೈಹಿಕ ಕಿರುಕುಳವನ್ನು ಸಹ ಎದುರಿಸುತ್ತಿದ್ದಾರೆ. ಅವರಿಗೆ ಸಹಾಯ ಬೇಕು ಎಂದು ಅವರು ಹೇಳಿದ್ದಾರೆ.

ತನುಶ್ರೀ ತಮ್ಮ ಅಧಿಕೃತ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ವಿಡಿಯೋವೊಂದನ್ನು ಹಂಚಿಕೊಂಡಿದ್ದಾರೆ. ಈ ವಿಡಿಯೋದಲ್ಲಿ ಅವರು ಅಳುತ್ತಿರುವುದು ಕಂಡುಬರುತ್ತದೆ. ಕಳೆದ 4–5 ವರ್ಷಗಳಿಂದ ನನ್ನ ಮನೆಯಲ್ಲಿ ಕಿರುಕುಳ ಎದುರಿಸುತ್ತಿದ್ದೇನೆ. ನಾನು ಸಂಕಷ್ಟದಲ್ಲಿರುವ ಪೊಲೀಸರಿಗೆ ಕರೆ ಮಾಡಿದೆ ಮತ್ತು ಪೊಲೀಸರು ಬಂದರು. ನೀವು ಪೊಲೀಸ್ ಠಾಣೆಗೆ ಬಂದು ವಿಷಯದ ಸಂಪೂರ್ಣ ವಿವರಗಳನ್ನು ನೀಡಿ ನಿಮ್ಮ ದೂರು ದಾಖಲಿಸಬೇಕು ಎಂದು ಪೊಲೀಸರು ಹೇಳಿದರು. ನಾನು ಬಹಳ ಸಮಯದಿಂದ ಈ ನೋವು ಅನುಭವಿಸುತ್ತಿದ್ದೇನೆ ಮತ್ತು ಕಳೆದ ಐದು ವರ್ಷಗಳಿಂದ ಇದನ್ನೆಲ್ಲ ಸಹಿಸಿಕೊಳ್ಳುತ್ತಿದ್ದೇನೆ. ನನ್ನ ಜೀವನ ಸಂಪೂರ್ಣವಾಗಿ ಹಾಳಾಗಿದೆ. ನನಗೆ ಅನಾರೋಗ್ಯವಿದೆ, ನನಗೆ ಯಾವುದೇ ಕೆಲಸ ಮಾಡಲು ಸಹ ಸಾಧ್ಯವಿಲ್ಲ' ಎಂದು ಹೇಳಿದ್ದಾರೆ. ಆದರೆ, ಈ ಸಂಪೂರ್ಣ ವಿಡಿಯೋದಲ್ಲಿ ತನುಶ್ರೀ ಯಾರ ಹೆಸರನ್ನು ಹೇಳಿಲ್ಲ. ಅವರು ನಿಜವಾಗಿಯೂ ಯಾರ ಬಗ್ಗೆ ಮಾತನಾಡುತ್ತಿದ್ದಾರೆ? ಈ ಪ್ರಶ್ನೆಯನ್ನು ಎಲ್ಲರೂ ಎತ್ತಿದ್ದಾರೆ.



## ನಾನು ಒಳ್ಳೆಯ ತಂದೆಯಲ್ಲ: ಶಾರುಖ್ ಖಾನ್ ಬೇಸರ

ನನ್ನ ಮಗ ನನ್ನನ್ನು ಪ್ರೀತಿಸುವುದಿಲ್ಲ

ಬಾಲಿವುಡ್ ಹೀರೋ ಶಾರುಖ್ ಖಾನ್ ಮೂವರು ಮಕ್ಕಳನ್ನು ಅತಿಯಾಗಿ ಪ್ರೀತಿಸುತ್ತಾರೆ. ಡ್ರಗ್ ಪ್ರಕರಣದಲ್ಲಿ ಆರ್ಯನ್ ಖಾನ್ ಹೆಸರು ಬಂದಾಗ, ಶಾರುಖ್ ಅವರ ಬೆಂಬಲಕ್ಕೆ ದೃಢವಾಗಿ ನಿಂತರು. ಮತ್ತೊಂದೆಡೆ, ಐಪಿಎಲ್ ಪಂದ್ಯದ ಸಮಯದಲ್ಲಿ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಅವರ ಮಗಳು ಸುಹಾನಾರನ್ನು ಅಸಭ್ಯವಾಗಿ ನಡೆಸಿಕೊಂಡಾಗ, ಶಾರುಖ್ ತಮ್ಮ ಮಗಳ ಪರವಾಗಿ ನಿಂತರು. ಅಷ್ಟೇ ಅಲ್ಲ, ಕಿರಿಯ ಮಗ ಅಬ್ರಾಮ್ ಹುಟ್ಟಿನ ನಂತರ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾಗ, ಶಾರುಖ್ ಆಗಾಗ್ಗೆ ಆಸ್ಪತ್ರೆಯಲ್ಲಿ ಸುತ್ತಾಡುತ್ತಿದ್ದರು. ಅವರು ಈ ಮೊದಲು ತಾವು ಒಳ್ಳೆಯ ತಂದೆಯಲ್ಲ ಎಂದಿದ್ದರು. ಎರಡು ಮಕ್ಕಳ ಪಾಲಕರಾದ ನಂತರ, ಶಾರುಖ್ ಖಾನ್ ಮತ್ತು ಗೌರಿ ಖಾನ್ ತಮ್ಮ ಮೂರನೇ ಮಗ ಅಬ್ರಾಮ್‌ನನ್ನು ಸರೊಗಸಿ ಮೂಲಕ ಪಡೆದರು. ಅಬ್ರಾಮ್ 2013ರಲ್ಲಿ ಜನಿಸಿದರು. ಸಹಜವಾಗಿಯೇ, ಅಬ್ರಾಮ್ ಚಿಕ್ಕವನಾಗಿರುವುದರಿಂದ, ಕುಟುಂಬದ ಎಲ್ಲರೂ ಅವನನ್ನು ಮುದ್ದಿಸುತ್ತಾರೆ. ಶಾರುಖ್ ಕೂಡ ಅವನನ್ನು ಮುದ್ದಿಸಿದ್ದರು. ಶಾರುಖ್ ಅವರೇ ತಮ್ಮ 'ಝೀರೋ' ಚಿತ್ರದ ಪ್ರಚಾರದ ಸಮಯದಲ್ಲಿ ಈ ಬಗ್ಗೆ ಹೇಳಿದ್ದರು. ಒಮ್ಮೆ ಅವರು ಅಬ್ರಾಮ್ ಬಳಿ ಪಕ್ಕಕ್ಕೆ ಕುಳಿತುಕೊಳ್ಳಲು ಹೇಳಿದರು.

## ಸಾವಿರ ರನ್‌ಗಳ ಸರದಾರ ಕೆಎಲ್ ರಾಹುಲ್ ಗವಾಸ್ಕರ್ ದಾಖಲೆ ಶೇಕಿಂಗ್



ಭಾರತ ಮತ್ತು ಇಂಗ್ಲೆಂಡ್ ನಡುವಿನ ಐದು ಪಂದ್ಯಗಳ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯ ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ನಡೆಯುತ್ತಿದೆ. ಈ ಪಂದ್ಯದಲ್ಲಿ ಟಾಸ್ ಸೋತ ಭಾರತ ಮೊದಲು ಬ್ಯಾಟಿಂಗ್ ಮಾಡುತ್ತಿದ್ದು, ತಂಡದ ಪರ ಆರಂಭಿಕನಾಗಿ ಆಡಿದ ಕೆಎಲ್ ರಾಹುಲ್ ಇಂಗ್ಲೆಂಡ್‌ನಲ್ಲಿ 1000 ಟೆಸ್ಟ್ ರನ್‌ಗಳನ್ನು ಪೂರ್ಣಗೊಳಿಸಿದ್ದಾರೆ. ಭಾರತ ಮತ್ತು ಇಂಗ್ಲೆಂಡ್ ನಡುವಿನ ಐದು ಪಂದ್ಯಗಳ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯ ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ನಡೆಯುತ್ತಿದೆ. ಈ ಪಂದ್ಯದಲ್ಲಿ ಟಾಸ್ ಸೋತ ಭಾರತ ಮೊದಲು ಬ್ಯಾಟಿಂಗ್ ಮಾಡುತ್ತಿದ್ದು, ತಂಡದ ಪರ ಆರಂಭಿಕನಾಗಿ ಆಡಿದ ಕೆಎಲ್ ರಾಹುಲ್ ಇಂಗ್ಲೆಂಡ್‌ನಲ್ಲಿ 1000 ಟೆಸ್ಟ್ ರನ್‌ಗಳನ್ನು ಪೂರ್ಣಗೊಳಿಸಿದ್ದಾರೆ.

**ವಿದೇಶದಲ್ಲಿ 1000 ಕ್ಕೂ ಹೆಚ್ಚು ರನ್**

ಮ್ಯಾಂಚೆಸ್ಟರ್ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ ರಾಹುಲ್ 15 ರನ್ ಕಲೆಹಾಕಿದ ಕೂಡಲೇ ಇಂಗ್ಲೆಂಡ್‌ನಲ್ಲಿ 1000 ಟೆಸ್ಟ್ ರನ್‌ಗಳನ್ನು ಪೂರ್ಣಗೊಳಿಸಿದ ಐದನೇ ಭಾರತೀಯ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ವಿಷಯದಲ್ಲಿ ಅವರು ಸಚಿನ್ ತೆಂಡೂಲ್ಕರ್ ಮತ್ತು ರಾಹುಲ್ ದ್ರಾವಿಡ್‌ರಂತಹ ದಂತಕಥೆಗಳನ್ನು ಸರಿಗಟ್ಟಿದ್ದಾರೆ.

ರಾಹುಲ್‌ಗಿಂತ ಮೊದಲು, ಸಚಿನ್ ತೆಂಡೂಲ್ಕರ್ (1575 ರನ್‌ಗಳು), ರಾಹುಲ್ ದ್ರಾವಿಡ್ (1376 ರನ್‌ಗಳು), ಸುನಿಲ್ ಗವಾಸ್ಕರ್ (1152 ರನ್‌ಗಳು) ಮತ್ತು ವಿರಾಟ್ ಕೊಹ್ಲಿ (1096 ರನ್‌ಗಳು) ಈ ಸಾಧನೆ ಮಾಡಿದ್ದಾರೆ. ಇದಲ್ಲದೆ, ವಿದೇಶದಲ್ಲಿ 1000 ಕ್ಕೂ ಹೆಚ್ಚು ರನ್‌ಗಳನ್ನು ಗಳಿಸಿದ ಭಾರತದ ನಾಲ್ಕನೇ ಆರಂಭಿಕ ಬ್ಯಾಟ್ಸ್ ಮನ್ ಎಂಬ ಹೆಗ್ಗಳಿಕೆಗೆ ಕೆಎಲ್ ರಾಹುಲ್ ಪಾತ್ರರಾಗಿದ್ದಾರೆ. ಈ ಮೂಲಕ ಅವರು ಸುನಿಲ್ ಗವಾಸ್ಕರ್ ಅವರನ್ನು ಸಹ ಸರಿಗಟ್ಟಿದ್ದಾರೆ. ಗವಾಸ್ಕರ್, ವೆಸ್ಟ್ ಇಂಡೀಸ್‌ನಲ್ಲಿ 1404 ರನ್‌ಗಳು, ಇಂಗ್ಲೆಂಡ್‌ನಲ್ಲಿ 1152 ರನ್‌ಗಳು ಮತ್ತು ಪಾಕಿಸ್ತಾನದಲ್ಲಿ 1001 ರನ್‌ಗಳನ್ನು ಗಳಿಸಿದ್ದಾರೆ. ಇದರ ಜೊತೆಗೆ ಇಂಗ್ಲೆಂಡ್ ನೆಲದಲ್ಲಿ ಅತ್ಯಧಿಕ ರನ್ ಕಲೆಹಾಕಿದ ಏಷ್ಯಾದ ಎರಡನೇ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೂ ರಾಹುಲ್ ಪಾತ್ರರಾಗಿದ್ದಾರೆ. ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವ ಸುನಿಲ್ ಗವಾಸ್ಕರ್ ಇಂಗ್ಲೆಂಡ್‌ನಲ್ಲಿ 1152 ರನ್ ಬಾರಿಸಿದ್ದರೆ, ಇದೀಗ ಎರಡನೇ ಸ್ಥಾನಕ್ಕೇರಿರುವ ರಾಹುಲ್ 1000 ಕ್ಕೂ ಅಧಿಕ ರನ್ ಬಾರಿಸಿದ್ದಾರೆ.

ಡಿಯರ್ ಕ್ರಿಕೆಟ್ ನನಗೆ ಮತ್ತೊಂದು ಅವಕಾಶ ಕೊಡು'.. ಡಿಸೆಂಬರ್ 10, 2022 ರಲ್ಲಿ ಕನ್ನಡಿಗ ಕರುಣ್ ನಾಯರ್ ತಮ್ಮ ಎಕ್ಸ್ ಖಾತೆಯಲ್ಲಿ ಹೀಗೆ ಬರೆದುಕೊಂಡಿದ್ದರು. ಅಂದು ಕರುಣ್ ಅವರ ಈ ಟ್ವೀಟ್ ನೋಡಿದ ಕ್ರಿಕೆಟ್ ಅಭಿಮಾನಿಗಳ ಮನಸು ಒಂದು ಕ್ಷಣ ಮರುಕ ಪಟ್ಟಿತ್ತು. ಪ್ರತಿಭಾವಂತ ಕ್ರಿಕೆಟಿಗನ ವೃತ್ತಿಜೀವನಕ್ಕೆ ಮತ್ತೊಂದು ಅವಕಾಶ ಸಿಗಬೇಕು ಎಂಬುದು ಅಭಿಮಾನಿಗಳ ಅಭಿಪ್ರಾಯವಾಗಿತ್ತು. ಇದಕ್ಕೆ ಪೂರಕವಾಗಿ ದೇಶಿ ಟೂರ್ನಿಯಲ್ಲಿ ಸತತವಾಗಿ ಅದ್ಭುತ ಪ್ರದರ್ಶನ ನೀಡಿದ್ದ ಕರುಣ್ ನಾಯರ್‌ಗೆ ಕೊನೆಗೂ 8 ವರ್ಷಗಳ ನಂತರ ಟೀಂ ಇಂಡಿಯಾದ ಕದ ತೆರದಿತ್ತು. ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ಸೂಚನೆಯನ್ನು ನೀಡಿದ ಕರುಣ್, ಅಭ್ಯಾಸ ಪಂದ್ಯದಲ್ಲಿ ಭರ್ಜರಿ ದ್ವಿಶತಕವನ್ನೂ ಸಿಡಿಸಿದ್ದರು. ಆದರೆ ಟೆಸ್ಟ್ ಸರಣಿ ಆರಂಭವಾದ ಬಳಿಕ ಕರುಣ್ ನಾಯರ್ ಅವರ ಬ್ಯಾಟ್ ಬೇರೆಯದ್ದೇ ಕಥೆ ಬರೆಯಿತು. ಆಡಿದ 6 ಇನ್ನಿಂಗ್ಸ್‌ಗಳಲ್ಲಿ ಕರುಣ್ ಬ್ಯಾಟ್ ಒಮ್ಮೆಯೂ ಆಗಸವನ್ನು ನೋಡಲಿಲ್ಲ. ಇದಕ್ಕೆ ಬೆಲೆಯಾಗಿ ಮ್ಯಾಂಚೆಸ್ಟರ್ ಟೆಸ್ಟ್‌ನಲ್ಲಿ ಕರುಣ್ ನಾಯರ್‌ಗೆ ಆಡುವ ಹನ್ನೊಂದರ ಬಳಗದಲ್ಲಿ ಅವಕಾಶ ಸಿಕ್ಕಿಲ್ಲ.

**ನೀರಸ ಪ್ರದರ್ಶನ ನೀಡಿದ ಕರುಣ್:** ವಾಸ್ತವವಾಗಿ ಕರುಣ್ ಟೀಂ ಇಂಡಿಯಾದಿಂದ ಹೊರಬಿದ್ದ ಬಳಿಕ ಭಾರತದಲ್ಲಿ ನಡೆದ ದೇಶಿ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುವುದರ ಜೊತೆಗೆ ಇಂಗ್ಲೆಂಡ್‌ನಲ್ಲೂ ಕೌಂಟಿ ಚಾಂಪಿಯನ್‌ಶಿಪ್‌ನಲ್ಲಿ ಸಾಕಷ್ಟು ಪಂದ್ಯಗಳನ್ನಾಡಿದ್ದರು. ಹೀಗಾಗಿ ಅವರನ್ನು ಇಂಗ್ಲೆಂಡ್ ಪ್ರವಾಸಕ್ಕೆ ತಂಡದಲ್ಲಿ ಆಯ್ಕೆ ಮಾಡಲಾಗಿತ್ತು. ಆದರೆ ಕರುಣ್ ನಾಯರ್ ಅವರಿಂದ ಒಂದೇ ಒಂದು ಹೇಳಿಕೊಳ್ಳುವಂತಹ ಪ್ರದರ್ಶನ ಕಂಡುಬರಲಿಲ್ಲ. ಅದರಲ್ಲೂ ಉತ್ತಮ

## 4ನೇ ಟೆಸ್ಟ್‌ನಿಂದ ಕರುಣ್ ನಾಯರ್‌ಗೆ ಕೋಕ್



ಆರಂಭ ಪಡೆದ ಬಳಿಕ ಕರುಣ್ ವಿಕೆಟ್ ಕೈಚೆಲ್ಲಿದ್ದು, ಮಾಜಿ ಆಟಗಾರರಿಗೆ ಹಾಗೂ ಅಭಿಮಾನಿಗಳಲ್ಲಿ ಬೇಸರ ಮೂಡಿಸಿತ್ತು.

ಹೀಗಾಗಿ ಕರುಣ್‌ರನ್ನು ಕೈಬಿಟ್ಟು ಬೇರೆ ಪ್ರತಿಭೆಗಳಿಗೆ ಅವಕಾಶ ಕೊಡಬೇಕೆಂಬ ಕೂಗು ಜೋರಾಗಿ ಕೇಳಿಬಂದಿತ್ತು.



**ಉಫ್ ವಾಟ್ ಎ ಕ್ಯಾಚ್**

ವರ್ಲ್ಡ್ ಚಾಂಪಿಯನ್ ಶಿಪ್ ಆಫ್ ಲೆಜೆಂಡ್ಸ್ ಟೂರ್ನಿಯಲ್ಲಿ ನಡೆದ ಇಂಡಿಯಾ ಚಾಂಪಿಯನ್ಸ್ ವಿರುದ್ಧದ ಪಂದ್ಯದಲ್ಲಿ ಸೌತ್ ಆಫ್ರಿಕಾ ಚಾಂಪಿಯನ್ಸ್ ತಂಡ ಜಯ ಸಾಧಿಸಿದೆ. ನಾರ್ಥಂಪ್ಟನ್‌ನ ಕೌಂಟಿ ಗ್ರೌಂಡ್‌ನಲ್ಲಿ ನಡೆದ ಈ ಪಂದ್ಯದ ಗೆಲುವಿನ ರೂವಾರಿ ಎಬಿ ಡಿವಿಲಿಯರ್ಸ್. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸೌತ್ ಆಫ್ರಿಕಾ ಪರ ಎಬಿಡಿ ಕೇವಲ 30 ಎಸೆತಗಳಲ್ಲಿ 4 ಸಿಕ್ಸ್ ಹಾಗೂ 3 ಫೋರ್‌ಗಳೊಂದಿಗೆ ಅಜೇಯ 63 ರನ್ ಬಾರಿಸಿದ್ದರು. ಈ ಸ್ಫೋಟಕ ಅರ್ಧಶತಕದ ನೆರವಿನೊಂದಿಗೆ ಸೌತ್ ಆಫ್ರಿಕಾ ಚಾಂಪಿಯನ್ಸ್ ತಂಡವು 20 ಓವರ್ ಗಳಲ್ಲಿ 6 ವಿಕೆಟ್ ಕಳೆದುಕೊಂಡು 208 ರನ್ ಕಲೆಹಾಕಿತು. 209 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಇಂಡಿಯಾ ಚಾಂಪಿಯನ್ಸ್ 10 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಕಲೆಹಾಕಿದ್ದು ಕೇವಲ 66 ರನ್‌ಗಳು ಮಾತ್ರ. ಇದಕ್ಕೆ ಮುಖ್ಯ ಕಾರಣ ಎಬಿ ಡಿವಿಲಿಯರ್ಸ್ ಅವರ ಫೀಲ್ಡ್ ಸೆಟ್ಟಿಂಗ್. ಬೌಲರ್‌ಗಳ ಡಿಮ್ಯಾಂಡ್‌ಗೆ ತಕ್ಕಂತೆ ಫೀಲ್ಡಿಂಗ್ ನಿಲ್ಲಿಸಿದ ಎಬಿಡಿ ಭಾರತೀಯ ಬ್ಯಾಟರ್‌ಗಳ ಮೇಲೆ ಆರಂಭದಲ್ಲೇ ಒತ್ತಡ ಹೇರುವಲ್ಲಿ ಯಶಸ್ವಿಯಾದರು. ಅದರಲ್ಲೂ ಪಂದ್ಯದ 8ನೇ ಓವರ್‌ನ ಮೊದಲ ಎಸೆತದಲ್ಲಿ ಅದ್ಭುತ ಫೀಲ್ಡಿಂಗ್‌ನೊಂದಿಗೆ ಎಬಿಡಿ ಗಮನ ಸೆಳೆದರು. ಇಮ್ರಾನ್ ತಾಹಿರ್ ಎಸೆದ ಈ ಎಸೆತದಲ್ಲಿ ಯೂಸುಫ್ ಪಠಾಣ್ ಭರ್ಜರಿ ಹೊಡೆತ ಬಾರಿಸಿದ್ದರು. ಚೆಂಡು ಇನ್ನೇನು ಬೌಂಡರಿ ಲೈನ್ ದಾಟಲಿದೆ ಅನ್ನುವಷ್ಟರಲ್ಲಿ ಓಡಿ ಬಂದ ಎಬಿ ಡಿವಿಲಿಯರ್ಸ್ ಅದ್ಭುತ ಡೈವಿಂಗ್‌ನೊಂದಿಗೆ ಚೆಂಡನ್ನು ಹಿಡಿದರು. ಇದೇ ವೇಳೆ ನಿಯಂತ್ರಣವನ್ನು ಕಳೆದುಕೊಂಡ ಎಬಿಡಿ ಬೌಂಡರಿ ಗೆರೆಯನ್ನು ಮುಟ್ಟುವ ಮೊದಲು ಚೆಂಡನ್ನು ಗಾಳಿಯಲ್ಲಿ ತಂಡದ ಸಹ ಆಟಗಾರ ಸರೆಲ್ ಎರ್ವೀಗೆ ಫ್ಲಿಕ್ ಮಾಡಿದರು. ಎರ್ವೀ ಅದ್ಭುತವಾಗಿ ಡೈವ್ ಹೊಡೆದು ಕ್ಯಾಚ್ ಅನ್ನು ಪೂರ್ಣಗೊಳಿಸಿದರು. ಇದೀಗ ಎಬಿಡಿ–ಸರೆಲ್ ಹಿಡಿದ ಜಂಟಿ ಕ್ಯಾಚ್ ವಿಡಿಯೋ ವೈರಲ್ ಆಗಿದ್ದು, ಪ್ರೇಕ್ಷಕರಿಂದ ಭಾರೀ ಮೆಚ್ಚುಗೆಗಳು ವ್ಯಕ್ತವಾಗುತ್ತಿದೆ.ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸೌತ್ ಆಫ್ರಿಕಾ ಚಾಂಪಿಯನ್ಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 208 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಇಂಡಿಯಾ ಚಾಂಪಿಯನ್ಸ್ 18.2 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 111 ರನ್‌ಗಳಿಸಿತ್ತು. ಈ ವೇಳೆ ಫ್ಲಡ್ ಲೈಟ್ ಸಮಸ್ಯೆ ಎದುರಾಗಿದ್ದರಿಂದ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು. ಅಲ್ಲದೆ ಡಕ್‌ವರ್ತ್ ಲೂಯಿಸ್ ನಿಯಮದ ಪ್ರಕಾರ ಸೌತ್ ಆಫ್ರಿಕಾ ಚಾಂಪಿಯನ್ಸ್ ತಂಡವನ್ನು ವಿಜಯಿ ಎಂದು ಘೋಷಿಸಲಾಯಿತು.

## ಎಬಿಡಿಯ ಫೀಲ್ಡಿಂಗ್‌ಗೆ ಪ್ರೇಕ್ಷಕರು ದಂಗು



## ಸ್ಫೋಟಕ ಸೆಂಚುರಿ ಬಾರಿಸಿ ದಾಖಲೆ ಬರೆದ ಹರ್ಮನ್ ಪ್ರೀತ್

ಇಂಗ್ಲೆಂಡ್ ಮಹಿಳಾ ತಂಡದ ವಿರುದ್ಧದ ಮೂರನೇ ಏಕದಿನ ಪಂದ್ಯದಲ್ಲಿ ಟೀಮ್ ಇಂಡಿಯಾ ನಾಯಕಿ ಹರ್ಮನ್‌ಪ್ರೀತ್ ಕೌರ್ ಭರ್ಜರಿ ಶತಕ ಸಿಡಿಸಿ ಮಿಂಚಿದ್ದಾರೆ. ಚೆಸ್ಟರ್–ಲೆ–ಸ್ಟ್ರೀಟ್‌ನ ರಿವರ್‌ಸೈಡ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಭಾರತದ ಪರ ಹರ್ಮನ್‌ಪ್ರೀತ್ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ್ದರು. ಇಂಗ್ಲೆಂಡ್ ಮಹಿಳಾ ತಂಡದ ವಿರುದ್ಧದ 3ನೇ ಏಕದಿನ ಪಂದ್ಯದಲ್ಲಿ ಟೀಮ್ ಇಂಡಿಯಾ ನಾಯಕಿ ಹರ್ಮನ್ ಪ್ರೀತ್ ಕೌರ್ ಭರ್ಜರಿ ಶತಕ ಸಿಡಿಸಿ ಮಿಂಚಿದ್ದಾರೆ. ಚೆಸ್ಟರ್–ಲೆ–ಸ್ಟ್ರೀಟ್‌ನ ರಿವರ್‌ಸೈಡ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಭಾರತದ ಪರ ಹರ್ಮನ್ ಪ್ರೀತ್ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ್ದರು. ಕ್ರೀಸ್‌ಗೆ ಆಗಮಿಸುತ್ತಿದ್ದಂತೆ ಬಿರುಸಿನ ಬ್ಯಾಟಿಂಗ್‌ಗೆ ಒತ್ತು ನೀಡಿದ ಹರ್ಮನ್‌ಪ್ರೀತ್ ಕೌರ್ ಮೈದಾನದ ಮೂಲೆ ಮೂಲೆಗೂ ಫೋರ್‌ಗಳನ್ನು ಬಾರಿಸಿದರು. ಈ ಮೂಲಕ ಕೇವಲ 82 ಎಸೆತಗಳಲ್ಲಿ ಶತಕ ಪೂರೈಸಿದರು. ಈ ಶತಕದೊಂದಿಗೆ ಹರ್ಮನ್‌ಪ್ರೀತ್ ಏಕದಿನ ಕ್ರಿಕೆಟ್‌ನಲ್ಲಿ 4000 ಸಾವಿರ ರನ್ ಪೂರ್ಣಗೊಳಿಸಿದ್ದಾರೆ. ಈ ಮೂಲಕ ಈ ಸಾಧನೆ ಮಾಡಿದ ಭಾರತದ ಮೂರನೇ ಮಹಿಳಾ ಬ್ಯಾಟರ್ ಎನಿಸಿಕೊಂಡಿದ್ದಾರೆ. ಇದಕ್ಕೂ ಮುನ್ನ ಮಿಥಾಲಿ ರಾಜ್ ಹಾಗೂ ಸ್ಮೃತಿ ಮಂಧಾನ ಈ ಸಾಧನೆ ಮಾಡಿದ್ದರು. ಅಲ್ಲದೆ ಈ ಶತಕದೊಂದಿಗೆ ಏಕದಿನ ಕ್ರಿಕೆಟ್‌ನಲ್ಲಿ ಇಂಗ್ಲೆಂಡ್‌ನಲ್ಲಿ ಅತ್ಯಧಿಕ ಸೆಂಚುರಿ ಸಿಡಿಸಿದ ಮಹಿಳಾ ಬ್ಯಾಟರ್ ಎಂಬ ಹೆಗ್ಗಳಿಕೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದಕ್ಕೂ ಮುನ್ನ ಈ ಪಟ್ಟಿಯಲ್ಲಿ ಆಸ್ಟ್ರೇಲಿಯಾ ಮೆಗ್ ಲ್ಯಾನಿಂಗ್ ಹಾಗೂ ಭಾರತದ ಮಿಥಾಲಿ ರಾಜ್ ಅಗ್ರಸ್ಥಾನದಲ್ಲಿದ್ದರು.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**